# ಯುಗಶಕ್ತಿ

- ❖ ರುಶ್ದಿಗೆ 'ನೈಟ್' ಪದವಿ
- ❖ ಇಸ್ಲಾಮ್ ಧರ್ಮದ ಸಾರ್ವಲೌಕಿಕತೆ
- ❖ MTA ಮೂಲಕ ಕ್ರೈಸ್ತರೊಂದಿಗೆ ಸಂವಾದ
- ❖ ಅಹ್ಮದಿಯಾ ವಿಶ್ವಾಸಗಳು
- ❖ ಧರ್ಮದ ನಾಮದಲ್ಲಿ ರಕ್ತಪಾತ

ಆಗಸ್ಟ್ 2007

ತ್ರೈಮಾಸಿಕ
ಬೆಲೆ ರೂ.5/-

"ಓ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ಉಪವಾಸ ವ್ರತವನ್ನು ವಿಧಿಸಲಾಗಿದೆ - ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ. "

ಪವಿತ್ರ ಖುರ್‌ಆನ್ (2 : 184)

# ಯುಗಶ್ರೀ


## ತ್ರೈಮಾಸಿಕ

10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ : ರೂ.5/- ವಾರ್ಷಿಕ ಚಂದಾ : ರೂ.20/- ಅಂಚೆ ಮೂಲಕ : ರೂ.30/-

ವಿಷಯ ಸೂಚಿಕೆ ಪುಟ

★ ವ್ರತಾನುಷ್ಠಾನ 1
★ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
★ ರುಶ್ದಿಗೆ 'ನೈಟ್' ಪದವಿ 3
★ ಇಸ್ಲಾಮ್ ಧರ್ಮದ ಸಾರ್ವಲೌಕಿಕತೆ 5
★ M T A (ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ ಇಂಟರ್‌ನ್ಯಾಷನಲ್) ಮೂಲಕ ಕ್ರೈಸ್ತರೊಂದಿಗೆ ಸಂವಾದ 7
★ ಅಹ್ಮದಿಯಾ ವಿಶ್ವಾಸಗಳು 13
★ ಇಸ್ಲಾಮಿನ ಪ್ರಾಥಮಿಕ ಪಾಠಗಳು 18
★ ಅಹ್ಮದಿಯಾ ಜಮಾಅತಿನ ಪ್ರಗತಿ 19
★ ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ..... 20
★ ಪುಸ್ತಕ ವಿಭಾಗ : ಧರ್ಮದ ಹೆಸರಿನಲ್ಲಿ ರಕ್ತಪಾತ 21




New MTA channel featuring Arabic television content 24 hours a day.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 24 | ಆಗಸ್ಟ್ 2007 | ಝುಹೂರ್ 1386 | ಸಂಚಿಕೆ : 3 |
|---|---|---|---|---|


## ವ್ರತಾನುಷ್ಠಾನ

ಆಹಾರವನ್ನು ಕಡಿಮೆ ಮಾಡುವುದು ಮತ್ತು ಹಸಿವನ್ನು ಸಹಿಸುವುದು ಆತ್ಮದ ಸಂಸ್ಕಾರಕ್ಕೂ ಉನ್ನತಿಗೂ ಅತ್ಯಾವಶ್ಯಕವಾದ ಒಂದು ಕರ್ಮವಾಗಿದೆ. ಅದು ಆತ್ಮ ದರ್ಶನ ಶಕ್ತಿಯನ್ನು ಪೋಷಿಸುತ್ತದೆ. ಮನುಷ್ಯನು ಜೀವಿಸುವುದು ಭಕ್ಷ್ಯಪೇಯಾದಿಗಳಿಂದ ಮಾತ್ರವಲ್ಲ. ಈ ಜೀವಿತದ ನಂತರ ಅವನಿಗೆ ಮತ್ತೊಂದು ಜೀವಿತ ಸಹ ಇದೆ. ಶಾಶ್ವತವಾದ ಪಾರತ್ರಿಕ ಜೀವಿತವನ್ನು ಅಲಕ್ಷ್ಯ ಮಾಡುವುದರಿಂದ ಮನುಷ್ಯನು ದೇವನಿಂದ ಬೇರ್ಪಟ್ಟು ಅವನ ಕೋಪಕ್ಕೆ ಸ್ವಯಂ ಗುರಿಯಾಗುತ್ತಾನೆ.

ವ್ರತಾನುಷ್ಠಾನದ ಉದ್ದೇಶ, ಒಂದು ಕ್ಲಪ್ತ ಕಾಲದವರೆಗೆ ಪಾನಾಶನಾದಿಗಳನ್ನು ವರ್ಜಿಸಿ, ಹಸಿವನ್ನು ಸಹಿಸುವುದು ಮಾತ್ರವಲ್ಲವೆಂದು ನೆನಪಿಡಬೇಕಾಗಿದೆ. ವ್ರತಾನುಷ್ಠಾನಿಯು ಎಲ್ಲ ವಿಧ ದೋಷಗಳಿಂದ ದೂರವಿದ್ದು, ದೇವ ಸ್ಮರಣೆಯಲ್ಲಿ ಹೆಚ್ಚು ಸಮಯವನ್ನು ವ್ಯಯಿಸಬೇಕಾದುದು ಅತ್ಯಾವಶ್ಯಕವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಂ) ರಮಝಾನ್ ಮಾಸದಲ್ಲಿ ಬಹಳ ಹೆಚ್ಚು ದೇವಾರಾಧನೆಯಲ್ಲಿ ಮಗ್ನರಾಗಿರುತ್ತಿದ್ದರು. ಒಟ್ಟಾರೆ, ಉಪವಾಸ ಕಾಲದಲ್ಲಿ ಆಹಾರ ಪಾನೀಯಗಳಿಗೆ ಸಂಬಂಧಿಸಿದ ವಿಚಾರಗಳಿಂದ ವಿರಮಿಸಿ, ಆ ಬಗೆಯ ಕಾರ್ಯಗಳನ್ನು ಉಪೇಕ್ಷಿಸಿ, ಶ್ರದ್ಧೆಯನ್ನೆಲ್ಲ ದೇವನ ಕಡೆಗೆ ಇರಿಸಬೇಕಾಗಿದೆ. ಭೌತಿಕ ಭಕ್ಷ್ಯ ವಸ್ತುಗಳು ಲಭಿಸಿ ಆಧ್ಯಾತ್ಮಿಕ ಆಹಾರದ ಕುರಿತು ಚಿಂತನೆ ಮಾಡದ ಮನುಷ್ಯನನ್ನು ಭಾಗ್ಯಹೀನನೆಂದೇ ಹೇಳಬಹುದು. ಆಹಾರವನ್ನು ಸೇವಿಸುವುದರಿಂದ ಶರೀರಕ್ಕೆ ಬಲವೂ ಓಜಸ್ಸೂ ಲಭಿಸುವಂತೆ ಆಧ್ಯಾತ್ಮಿಕಾಹಾರದ ಮೂಲಕ ಆತ್ಮಕ್ಕೆ ರಕ್ಷಣೆಯೂ ಆತ್ಮ ಶಕ್ತಿಗಳಿಗೆ ಚೈತನ್ಯವೂ ದೊರಕುತ್ತದೆ. ಎಲ್ಲ ವಿಧ ಸಫಲತೆಗಳ ಬಾಗಿಲು ದೇವಾನುಗ್ರಹದಿಂದ ತೆರೆಯಲ್ಪಡುವುದರಿಂದ ವಿಜಯ ಲಬ್ಧಿಗಾಗಿ ಅವನಿಂದಲೇ ಸಹಾಯ ಯಾಚಿಸಬೇಕಾಗಿದೆ.

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

* ಕುಟುಂಬ ಸಂಬಂಧವನ್ನು ಮುರಿಯುವವನು ಸ್ವರ್ಗದಲ್ಲಿ ಪ್ರವೇಶಿಸಲಾರ. (ಬುಖಾರಿ, ಮುಸ್ಲಿಂ)

* ಮುಯ್ಯಿ ತೀರಿಸುವವನು ಕುಟುಂಬ ಸಂಬಂಧವನ್ನು ಸ್ಥಾಪಿಸಿದವನಲ್ಲ. ಸಂಬಂಧವನ್ನು ಮುರಿದವರೊಡನೆ ಕೂಡ ಸಂಬಂಧವನ್ನು ಸ್ಥಾಪಿಸುವವನು ಕುಟುಂಬ ಸಂಬಂಧವನ್ನು ನೆಲೆ ನಿಲ್ಲಿಸುವವನಾಗಿದ್ದಾನೆ. (ಬುಖಾರಿ)

* ಸತ್ಯವಿಶ್ವಾಸಿಗಳು ಒಬ್ಬ ಮನುಷ್ಯನ ಹಾಗೆ. ಅವನ ಕಣ್ಣಿಗೆ ರೋಗ ಬಾಧಿಸಿದರೆ ಶರೀರವಿಡೀ ಅಸ್ವಸ್ಥವಾಗುವುದು. ತಲೆಗೆ ರೋಗ ಬಾಧಿಸಿದರೂ ಶರೀರವೆಲ್ಲ ಅಸ್ವಸ್ಥವಾಗುವುದು. (ಹಾಗೆಯೇ ಸತ್ಯವಿಶ್ವಾಸಿಗಳ ಪೈಕಿ ಒಬ್ಬನಿಗೆ ಉಂಟಾಗುವ ಸುಖ- ದುಃಖ ಇಡೀ ಸಮುದಾಯದ ಮೇಲೆ ಪರಿಣಾಮ ಬೀರುತ್ತದೆ.) (ಮುಸ್ಲಿಂ)

* ಸತ್ಯವಿಶ್ವಾಸಕ್ಕೆ ಎಪ್ಪತ್ತಕ್ಕಿಂತ ಹೆಚ್ಚು ಶಾಖೆಗಳಿವೆ. ಅವುಗಳಲ್ಲಿ ಅತಿ ಶ್ರೇಷ್ಠವಾದುದು ಲಾ ಇಲಾಹ ಇಲ್ಲಲ್ಲಾಹ್ (ಅಲ್ಲಾಹನ ಹೊರತು ಆರಾಧ್ಯನಿಲ್ಲ) ಎಂಬುದಾಗಿದೆ. ಅತಿ ಕೆಳಮಟ್ಟದ್ದು ದಾರಿಯಿಂದ ಅಡೆತಡೆಗಳನ್ನು ನೀಗಿಸುವುದಾಗಿದೆ. ಲಜ್ಜೆ ಸತ್ಯವಿಶ್ವಾಸದ ಒಂದು ಶಾಖೆಯಾಗಿದೆ. (ಬುಖಾರಿ, ಮುಸ್ಲಿಂ)

* ಯಾರಾದರೂ ಒಂದು ನಮಾಝನ್ನು ಮರೆತುಬಿಟ್ಟರೆ ಅಥವಾ ನಿದ್ರೆ ಮಾಡಿದರೆ, ನೆನಪಾದಾಗ ಬಿಟ್ಟುಹೋದ ನಮಾಝ್ ನಿರ್ವಹಿಸುವುದು ಅದಕ್ಕಿರುವ ಪ್ರಾಯಶ್ಚಿತ್ತವಾಗಿದೆ. ಅದು ಹೊರತು ಅದಕ್ಕೆ ಬೇರೆ ಪ್ರಾಯಶ್ಚಿತ್ತವಿಲ್ಲ. (ಬುಖಾರಿ, ಮುಸ್ಲಿಂ)

* ನಮಾಝಿನಲ್ಲಿ ತೂಕಡಿಕೆಯಾದರೆ, ಅವನು ಏನು ಓದುತ್ತಾನೆಂದು ಪೂರ್ಣ ಪ್ರಜ್ಞೆಯುಂಟಾಗುವ ತನಕ ಹೋಗಿ ನಿದ್ರೆಮಾಡಲಿ. (ಬುಖಾರಿ)

* ನಿಶ್ಚಯವಾಗಿಯೂ ಶುಕ್ರವಾರದಂದು ಒಂದು ಸಮಯವಿದೆ. ಆ ಸಮಯದಲ್ಲಿ ಒಬ್ಬ ಮುಸ್ಲಿಮನು ಅಲ್ಲಾಹನೊಡನೆ ಕೇಳುವ ಯಾವುದೇ ಒಳಿತು ಅಲ್ಲಾಹನು ಅವನಿಗೆ ನೀಡದಿರಲಿಕ್ಕಿಲ್ಲ. (ಬುಖಾರಿ, ಮುಸ್ಲಿಂ)

* ಮನುಷ್ಯನು ತನ್ನ ತಪ್ಪನ್ನು ಒಪ್ಪಿ, ಅನಂತರ ಪಶ್ಚಾತ್ತಾಪ ಪಟ್ಟರೆ ಅಲ್ಲಾಹನು ಅವನ ಪಶ್ಚಾತ್ತಾಪವನ್ನು ಖಂಡಿತವಾಗಿಯೂ ಸ್ವೀಕರಿಸುವನು. (ಬುಖಾರಿ, ಮುಸ್ಲಿಂ)

* ನೀರು ಕುಡಿಯುವಾಗ ಪಾತ್ರೆಯೊಳಗೆ ಶ್ವಾಸ ಬಿಡಬಾರದು. ವಿಸರ್ಜನೆಯ ಸ್ಥಳಕ್ಕೆ ಹೋದರೆ ಬಲಗೈಯಿಂದ ಶೌಚ ಮಾಡಬಾರದು. ಬಲಗೈಯಿಂದ ಗುಹ್ಯಾಂಗವನ್ನು ಮುಟ್ಟಬಾರದು. (ಬುಖಾರಿ)

* ನಿಮ್ಮ ಪೈಕಿ ಯಾರದಾದರೂ ಪಾತ್ರೆಯೊಳಗೆ ನಾಯಿ ತಲೆಹಾಕಿದರೆ ಅದನ್ನು ಏಳು ಸಲ ತೊಳೆಯಬೇಕು. (ಬುಖಾರಿ)

# ರುಶ್ದಿಗೆ 'ನೈಟ್' ಪದವಿ

- ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್
*(ಅಹ್ಮದಿಯಾ ಸಂಘಟನೆಯ ಪಂಚಮ ಖಲೀಫ)*

ಈಗ ರುಶ್ದಿಗೆ ಸಂಬಂಧಿಸಿ ದೊಡ್ಡ ಕೋಲಾಹಲ ನಡೆಯುತ್ತಿದೆ. ಇಂತಹ ನಾಸ್ತಿಕವಾದಿಗಳಿಗೂ ಯಾರಾದರೂ ಆರಾಧ್ಯರಿರಬಹುದು. ಲೋಕದಲ್ಲಿರುವ ಯಾವುದಾದರೂ ಸಂಘಟನೆಯನ್ನಾಗಲೀ ಉನ್ನತ ವ್ಯಕ್ತಿಗಳನ್ನಾಗಲೀ ಯಾವುದಾದರೂ ಸರಕಾರವನ್ನಾಗಲೀ ಅವರು ಆರಾಧ್ಯರನ್ನಾಗಿ ಮಾಡಿರಬಹುದು. ಅಲ್ಲಾಹನು ಅವರಿಗೋಸ್ಕರ ಏರ್ಪಾಡು ಮಾಡಿರುವನು. ನಾವು ಬಡಿದು ದಮನಿಸಲಿಕ್ಕೂ ಆತ್ಮಾಹುತಿ ದಾಳಿ ಮಾಡುವುದು ಸಮ್ಮತನೀಯವೆಂದು ಹೇಳಲಿಕ್ಕೂ ಇಂತಿಂತಹ ರೀತಿಯಲ್ಲಿ ಪ್ರತಿಕ್ರಿಯಿಸಬೇಕೆಂದು ಘೋಷಿಸಲಿಕ್ಕೂ ತೊಡಗುವಾಗ ಇಸ್ಲಾಮಿನ ಉತ್ಕೃಷ್ಟವಾದ ಧಾರ್ಮಿಕತೆ ತಪ್ಪಾಗಿ ಲೋಕದ ಮುಂದೆ ತೋರಿಸಲ್ಪಡುತ್ತದೆ. ಅದರ ಮೂಲಕ ತಪ್ಪಾದ ಚಿತ್ರ ಪ್ರದರ್ಶಿಸಲ್ಪಡುತ್ತದೆ ಹೊರತು ಏನೂ ನಮಗೆ ಲಾಭವಾಗುವುದಿಲ್ಲ. ಅಥವಾ ಬಡಿದು ದಮನಿಸುವಾಗ ಸ್ವಂತಕ್ಕೇ ನಷ್ಟವುಂಟಾಗಬಹುದು. ಆತನು ಇಸ್ಲಾಮಿಗೆ ವಿರುದ್ಧವಾಗಿ ಹೇಳಿದ ಕೆಟ್ಟ ಮಾತುಗಳು, ಪೈಗಂಬರರಿಗೆ(ಸ) ವಿರುದ್ಧವಾಗಿ ಮಾತ್ರವಲ್ಲ, ದೇವದೂತರಿಗೂ ಅಲ್ಲಾಹನಿಗೂ ವಿರುದ್ಧವಾಗಿ ಹೇಳಿರುವ ಕೆಟ್ಟ ಮಾತುಗಳು ವರ್ಷಗಳಿಗೆ ಮುಂಚೆಯೇ ಇದ್ದವು. ಈಗಲೂ ಇವೆ. ಈಗ ಆತನ ಈ ವರ್ತನೆಯಿಂದಾಗಲೀ ಬೇರೇನಾದರೂ ಕಾರಣದಿಂದಾಗಲೀ ಯಾವುದಾದರೂ ಸರಕಾರ ಮುಸ್ಲಿಮರ ಭಾವ ವಿಕಾರಗಳನ್ನು ಪರಿಗಣಿಸದೆ ಆತನಿಗೆ ಯಾವುದಾದರೂ ಪದವಿ ನೀಡಿದರೆ ಅಥವಾ ಗೌರವ ನೀಡಿದರೆ ಆ ಎಲ್ಲಾ ವಿಚಾರಗಳನ್ನು ಅಲ್ಲಾಹನು ನೋಡಿಕೊಳ್ಳುತ್ತಾನೆ.

ಯುರೋಪಿನಲ್ಲಿ ಘನತೆ ಸಂಪೂರ್ಣ ಇಲ್ಲವಾಗಿದೆಯೆಂದು ಇದರರ್ಥವಲ್ಲ. ಗೌರವಾನ್ವಿತರು ಯುರೋಪಿನಲ್ಲಿ ಇಲ್ಲವೆಂದಿಲ್ಲ. ಅನೇಕ ಮಂದಿ ಇಂಗ್ಲೆಂಡಿನಲ್ಲೂ ಇದನ್ನು ಖಂಡಿಸಿದ್ದಾರೆ. ಪಾರ್ಲಿಮೆಂಟ್ ಸದಸ್ಯರೂ ಖಂಡಿಸಿದ್ದಾರೆ. ಈತನಿಗೆ ನೀಡಿದ 'ನೈಟ್' ಪದವಿ ಲೋಕದ ಶಾಂತಿ ಸಮಾಧಾನವನ್ನು ಹಾಳುಗೆಡಹುವುದು ವಿನಾ ಯಾವ ಪ್ರಯೋಜನವೂ ಇಲ್ಲ. ಈತನು ಈ ಪುಸ್ತಕವನ್ನು ಕೆಲವು ಕಾಲ ಮುಂಚೆ ಬರೆದಿದ್ದಾಗ - ಆತನಿಂದ ಈ ಪುಸ್ತಕ ಬರೆಸಿದ್ದೆಂದು ಸಾಬೀತಾಗಿದೆ - ಇಲ್ಲಿಯ ವಿಮರ್ಶಕರೂ ಅದನ್ನು ವಿಮರ್ಶಿಸಿದ್ದರು. ಇದರ ಹಿಂದೆ ಯಾರದೋ ಕೈವಾಡವಿದೆಯೆಂದು ಅವರು ಹೇಳಿದ್ದರು. ಆತನು ಒಬ್ಬಂಟಿಗನಲ್ಲ; ಇದು ಇಸ್ಲಾಮಿಗೆ ವಿರುದ್ಧವಾದ ಒಂದು ದೊಡ್ಡ ಯೋಜನೆಯಾಗಿದೆ; ಹೀಗೆಲ್ಲ ಮುಸ್ಲಿಮರನ್ನು ರೊಚ್ಚಿಗೆಬ್ಬಿಸಿ, ಅದರಿಂದ ಲಾಭಗಳಿಸುವುದು ಅವರ ತಂತ್ರವಾಗಿದೆ. ಅದಕ್ಕೆ ಬೇಕಾದ ಸಂದರ್ಭಗಳನ್ನು ಮುಸ್ಲಿಮರು ಒದಗಿಸಿಕೊಡುತ್ತಿದ್ದಾರೆ. ನಾಲ್ಕೈದು ಜಾಥಾ ನಡೆಸುವುದರಿಂದಾಗಲೀ ಆ ಬಳಿಕ ಮೌನ ಅವಲಂಬಿಸುವುದರಿಂದಾಗಲೀ ಯಾವ ಪ್ರಯೋಜನವೂ ಇಲ್ಲ. ಧ್ವಜವನ್ನು ಬೆಂಕಿಗಾಹುತಿ ಮಾಡುವುದರಿಂದಾಗಲೀ ಭಾವಚಿತ್ರಕ್ಕೆ ಅಥವಾ ಪ್ರತಿರೂಪಕ್ಕೆ ಬೆಂಕಿಕೊಡುವುದರಿಂದಾಗಲೀ ಪ್ರತಿಭಟನಾ ಮೆರವಣಿಗೆ ಮಾಡುವುದರಿಂದಾಗಲೀ ಈ ಯೋಜನೆ ಕೊನೆಗೊಳ್ಳಲಾರದು. ಇದರಿಂದ ಮುಸ್ಲಿಮರು ಬಯಸುವ ಫಲ ಗಳಿಸುವುದು ಮುಸ್ಲಿಂ ವಿರೋಧಿಗಳಾಗಿರಬಹುದು. ಮುಸ್ಲಿಮರ ವರ್ತನೆ ವಿರೋಧಿಗಳ ಅಭಿಪ್ರಾಯವನ್ನು ಬಲಪಡಿಸುವುದು. ಇಸ್ಲಾಂ ಹಾಗಿರುವ ಧರ್ಮವೆಂದು ಸಮರ್ಥಿಸುವುದು ಅವರ ಉದ್ದೇಶ ಲಕ್ಷ್ಯವಾಗಿದೆ.

ಹೇಗಿದ್ದರೂ ಇಂತಹ ವರ್ತನೆಗಳಿಗೆ ಯಥಾರ್ಥ ಪ್ರತಿಕ್ರಿಯೆಯೇನೆಂದರೆ, ಅದು ಮುಸ್ಲಿಮರಿಂದ ಉಂಟಾಗಬೇಕಾಗಿದೆ - ಅದು ಲೋಕದ ಬಾಯಿ ಮುಚ್ಚಲಿಕ್ಕೋಸ್ಕರ ಇಸ್ಲಾಮಿಕ ಅಧ್ಯಾಪನೆಗಳನ್ನು ಮೊದಲಿಗಿಂತ ಹೆಚ್ಚು ತಮ್ಮಲ್ಲಿ ಜಾರಿಗೊಳಿಸುವುದಾಗಿದೆ. ಹಝ್ರತ್ ಪೈಗಂಬರರ(ಸ) ಮೇಲೆ ಸಲಾತ್ (ಸ್ವಸ್ತಿ ವಾಚನ) ಹೇಳಿರಿ. ಆ ಮೂಲಕ ಪೈಗಂಬರರ(ಸ) ಸಮುದಾಯ ಆಧ್ಯಾತ್ಮಿಕತೆಯಲ್ಲೂ ಅಭಿವೃದ್ಧಿ ಪಡೆಯುವಂತಾಗುವುದು. ಪೈಗಂಬರರ(ಸ) ಜೀವನ ಮಾದರಿಯನ್ನು ಲೋಕದ ಮುಂದೆ ಸಮರ್ಪಿಸಿರಿ. ಆದರೆ, ಇಂದು ಈ ಕೆಲಸ ಯಾರಿಗಾದರೂ ಮಾಡಲು ಸಾಧ್ಯವಾಗುವುದಾದರೆ, ಅಹ್ಮದಿಯರಿಂದ ಮಾತ್ರ ಅದು ಸಾಧ್ಯ. ಅವರು ಪೈಗಂಬರರ(ಸ) ಸತ್ಯಸಂಧನಾದ ಪ್ರೇಮಿಯನ್ನು ನಂಬಿದವರಾಗಿದ್ದಾರೆ. ಇಂದು ಆಕ್ಷೇಪರಿಗೆ ಉತ್ತರ ಹೇಳಲು ಯಾರಿಗಾದರೂ ಸಾಧ್ಯವಾಗುವುದಾದರೆ, ಅಹ್ಮದಿಯರಿಗೆ ಮಾತ್ರ ಅದಕ್ಕಿರುವ ಸಾಮರ್ಥ್ಯವಿರುವುದು. ಇಂದು ಇಸ್ಲಾಮಿನ ಮನೋಹರವಾದ ಅಧ್ಯಾಪನೆಗಳನ್ನು ಲೋಕಕ್ಕೆ ತೋರಿಸಿಕೊಡಲು ಯಾರಿಗಾದರೂ ಸಾಧ್ಯವಾಗುವುದಾದರೆ, ಅಹ್ಮದಿಯರಿಗೆ ಮಾತ್ರ ಸಾಧ್ಯವಿರುವುದು. ಆದುದರಿಂದ ಇಂದು ಅಹ್ಮದಿಯರು ಮೊದಲಿಗಿಂತ ಹೆಚ್ಚು ಇದಕ್ಕೋಸ್ಕರ ಪ್ರಯತ್ನಿಸಬೇಕಾದುದು ಅವರ ಅನಿವಾರ್ಯ ಕರ್ತವ್ಯವಾಗಿದೆ. ಮೊದಲಿಗಿಂತ ಹೆಚ್ಚಾಗಿ ಪೈಗಂಬರರ(ಸ) ಮೇಲೆ ಸಲಾತ್ ಹೇಳುತ್ತಾ ಇರಿ.

ರುಶ್ದಿ ಈ ಪುಸ್ತಕ ಬರೆದ ಕಾಲಘಟ್ಟದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) (ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ) ನಮ್ಮ ಹರ್ಷದ್ ಅಹ್ಮದ್ ಸಾಹೆಬರಿಂದ ಅದಕ್ಕೆ ಉತ್ತರ ಬರೆಯಿಸಿದ್ದರು. ಅದರ ಹೆಸರು "ರುಶ್ದಿ ಹಾಂಟೆಡ್ ಬೈ ಹಿಸ್ ಅನ್‌ಹೋಲಿ ವರ್ಸಸ್" (Rushdi haunted by his unholy verses) ಎಂದಾಗಿತ್ತು.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಅವರಿಗೆ ನೀಡಿದ ನಿರ್ದೇಶನಗಳಿಗನುಸಾರವಾಗಿ ಅದನ್ನು ಪರಿಷ್ಕರಿಸಿ ಪುನಃ ಪ್ರಕಟಿಸಲಿಕ್ಕೆ ನಾನು ಅವರೊಡನೆ ಹೇಳಿದ್ದೇನೆ. ಒಂದು ಪಬ್ಲಿಷಿಂಗ್ ಕಂಪೆನಿ ಅದನ್ನು ಪ್ರಕಟಿಸಿತ್ತು. ಅವರೇ ಅದರ ಮಾರ್ಕೆಟಿಂಗ್ ಮಾಡಿದ್ದರು. ಈಗ ಅದನ್ನು ನಮ್ಮ ಜಮಾಅತ್ ಪ್ರಕಟಿಸುವುದು (ಇನ್‌ಶಾಅ್ ಅಲ್ಲಾಹ್). ಇದರ ಉರ್ದು ಅನುವಾದ ಸಹ ಸಿದ್ಧವಿದೆ.

ಲೋಕದ ಜನರು ಸತ್ಯವನ್ನು ಮನಗಾಣಲಿಕ್ಕೋಸ್ಕರ ಇದನ್ನು ವಿದ್ಯಾಸಂಪನ್ನರಿಗೆ ಮುಖ್ಯವಾಗಿ ನೀಡಬೇಕಾಗಿದೆ. ಇಸ್ಲಾಮಿನ ಉನ್ನತವಾದ ಸ್ವಭಾವ ವೈಶಿಷ್ಟ್ಯದ ಬಗ್ಗೆ ತಿಳಿಸಿಕೊಡಲಿಕ್ಕೆ ಸಾಧ್ಯವಾಗುವ ಸೇವೆ ಸಹ ಇದೇ ಆಗಿದೆ. ಲೋಕದ ಗಲಭೆಗಳನ್ನು ಕೊನೆಗೊಳಿಸುವ ನಿಜವಾದ ಮಾರ್ಗವೇನೆಂದು ಸಹ ಅವರಿಗೆ ತಿಳಿಯಲು ಸಾಧ್ಯವಾಗುವುದು.

ಲೋಕ ಶಾಂತಿಯ ಅಡಿಪಾಯ ನ್ಯಾಯ ನೀತಿಯ ಮೇಲೆ ತಳವೂರಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ನಿಮ್ಮ ನೀತಿಯ ಸ್ಥಿತಿಯ ಕುರಿತು ಹೀಗೆ ಹೇಳುತ್ತಾನೆ:

**"ಎಲೈ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ." (5 : 9)**

ಇದಕ್ಕೆ ವಿಶದೀಕರಣ ನೀಡುತ್ತಾ ಹಝ್ರತ್ ಮಸೀಹ್ ಮೌಊದ್[ಅ] (ಅಹ್ಮದಿಯಾ ಜಮಾಅತಿನ ಸ್ಥಾಪಕರು) ಹೇಳುತ್ತಾರೆ: "ಶತ್ರು ಜನರ ಶತ್ರುತೆ, ಅವರೊಡನೆ ನೀತಿ ಪಾಲಿಸುವುದರಿಂದ ನಿಮ್ಮನ್ನು ತಡೆಯಬಾರದು. ನ್ಯಾಯ ನೀತಿಯನ್ನು ಪಾಲಿಸಿರಿ. ಅದರಲ್ಲಿ ದೇವಭಕ್ತಿಯಿದೆ. ಮಕ್ಕದ ಸತ್ಯನಿಷೇಧಿಗಳು ಮಾಡಿದ ಹಾಗೆ ಅನ್ಯಾಯವಾಗಿ ನಿಮ್ಮನ್ನು ಕಾಡಿಸಿ, ಪೀಡಿಸಿ, ರಕ್ತ ಹರಿಸಿ, ಬೆನ್ನು ಬಿಡದೆ ಮಕ್ಕಳನ್ನೂ ಮಹಿಳೆಯರನ್ನೂ ಕೊಂದು, ಯುದ್ಧದಿಂದ ವಿರಮಿಸದಿರುವ ಜನತೆಯೊಡನೆ ಕೊಡು-ಕೊಳ್ಳುವಿಕೆಯಲ್ಲಿ ನ್ಯಾಯ ನೀತಿಯಿಂದ ವರ್ತಿಸುವುದು ಎಷ್ಟು ದುಸ್ತರವಾಗಿರುವುದೆಂದು ಈಗ ನೀವು ಮನಗಂಡಿರಬಹುದು. ಪವಿತ್ರ ಖುರ್‌ಆನ್ ಅಂತಹ ಜೀವಶತ್ರುವನ್ನು ಕೂಡ ಅವಗಣಿಸಲಿಲ್ಲ. ಅವರೊಡನೆ ನೀತಿಯಿಂದಲೂ ನ್ಯಾಯಯುತವಾಗಿಯೂ ವರ್ತಿಸಲು ಅದು ಉಪದೇಶಿಸಿತು. ನಾನು ಸತ್ಯವಾಗಿ ಹೇಳುತ್ತೇನೆ: ಶತ್ರುವಿಗೆ ಔತಣ ನೀಡುವುದು ಸುಲಭ. ಆದರೆ ಶತ್ರುವಿನ ಹಕ್ಕುಗಳನ್ನು ಕಾಪಾಡುವುದು ಮತ್ತು ಮೊಕದ್ದಮೆಗಳಲ್ಲಿ ನೀತಿಯನ್ನೂ ನ್ಯಾಯವನ್ನೂ ಕೈಬಿಡದಿರುವುದು ಬಹಳ ಪ್ರಯಾಸಕರ ಹಾಗೂ ಪೌರುಷಶಾಲಿಯ ಮಾತ್ರ ವರ್ತನೆಯಾಗಿದೆ."

ಶತ್ರುವಿನೊಂದಿಗೆ ಕುಳಿತುಕೊಂಡು ಒಳ್ಳೆಯ ರೀತಿಯಲ್ಲಿ ಮಾತನಾಡುವುದು ಸುಲಭ. ಆದರೆ ಶತ್ರುತ್ವವನ್ನು ಸಂಪೂರ್ಣ ಮರೆಯುವುದು ಮತ್ತು ಅವನೊಡನೆ ನ್ಯಾಯೋಚಿತವಾಗಿ ವರ್ತಿಸುವುದು ಬಹಳ ತ್ರಾಸದಾಯಕವಾಗಿದೆ. ಅದು ಬಲು ಧೈರ್ಯದ ವರ್ತನೆಯಾಗಿದೆ.

ಹಝ್ರತ್ ಮಸೀಹ್ ಮೌಊದ್[ಅ] ಇನ್ನೂ ಹೇಳುತ್ತಾರೆ: "ಅಲ್ಲಾಹನು ಈ ವಚನದಲ್ಲಿ ಸ್ನೇಹದ ಕುರಿತು ಹೇಳಲಿಲ್ಲ. ಬದಲು, ಸ್ನೇಹದ ಸ್ಥಿತಿಯು ಕುರಿತು ಹೇಳಿದ್ದಾನೆ. ಕಾರಣವೇನೆಂದರೆ, ಯಾರು ತನ್ನ ಶತ್ರು ಜನರೊಡನೆ ನ್ಯಾಯ-ನೀತಿ ತೋರಿಸುತ್ತಾನೋ ಮತ್ತು ಸತ್ಯಸಂಧತೆಯಿಂದಲೂ ನ್ಯಾಯದಿಂದಲೂ ರಿಯಾಯಿತಿ ತೋರಿಸುತ್ತಾನೋ, ಅವನಿಗೆ ಮಾತ್ರ ಸತ್ಯವಾದ ರೀತಿಯಲ್ಲಿ ಸ್ನೇಹಿಸಲು ಸಾಧ್ಯವಾಗುವುದು."

ಅಂದರೆ, ಸ್ನೇಹಿಸಬೇಕು ಎಂದು ಅಲ್ಲಾಹನು ಹೇಳಲಿಲ್ಲ. ಬದಲು, ನಿಮ್ಮ ಸ್ನೇಹದ ಸ್ಥಿತಿ ಇದಾಗಿರಬೇಕೆಂದಾಗಿದೆ. ಅಂದರೆ, ಕಠಿಣವಾದ ಶತ್ರುತೆಯನ್ನು ಮಕ್ಕದ ಜನರು ಹಝ್ರತ್ ಪೈಗಂಬರರೊಂದಿಗೆ[ಸ] ಮತ್ತು ಮುಸ್ಲಿಮರೊಂದಿಗೆ ತೋರಿಸಿದ್ದರೂ ಅವರನ್ನು ಕೊಂದರೂ ಅವರನ್ನು ದೌರ್ಜನ್ಯಕ್ಕೆ ಗುರಿಪಡಿಸಿದ್ದರೂ ಅಂತಹ ಜನರೊಡನೆ ಕೂಡ ನ್ಯಾಯ ನೀತಿಯಿಂದ ವರ್ತಿಸಿದರು. ಅದರ ಮೂಲಕ ಸ್ನೇಹ ವರ್ಧಿಸುವುದು. ಈ ರೀತಿಯಲ್ಲಿ ಲೋಕಕ್ಕೆ ಯಥಾರ್ಥ ಶಾಂತಿ ಸಮಾಧಾನ ಹರಡುವ ಆ ಶಾಂತಿ ಸಂದೇಶವನ್ನು ತಲುಪಿಸಲು ಸಾಧ್ಯವಾಗುವುದು. ಇಸ್ಲಾಮಿನ ಸತ್ಯವಾದ ಅಧ್ಯಾಪನೆ ಇದೇ ಆಗಿದೆ.

ಸತ್ಯವಾದ ಪ್ರೀತಿ ಮತ್ತು ನೀತಿಯಾಧಾರಿತ ವರ್ತನೆ ಇರುವಾಗ ಸಮಾಧಾನದ ಸಂದೇಶ ಎಲ್ಲಾ ಕಡೆ ಪಸರಿಸುವುದು. ಹಝ್ರತ್ ಪೈಗಂಬರರ[ಸ] ಆದರ್ಶ ಜೀವಿತ ಇದೇ ಆಗಿತ್ತು. ಅದು ಮಕ್ಕಾ ವಿಜಯದ ಸಂದರ್ಭದಲ್ಲಿ, ಸತ್ಯನಿಷೇಧಿಗಳ ದೊಡ್ಡ ದೊಡ್ಡ ನೇತಾರರನ್ನು ಇಸ್ಲಾಮಿನ ಮಡಿಲಿಗೆ ತಂದುಹಾಕಿತು. ಪೈಗಂಬರರ[ಸ] ಈ ಆದರ್ಶ ಜೀವಿತ ಶತ್ರುಗಳಿಗೆ ಸಮಾಧಾನದ ಅಭಯ ಕೇಂದ್ರವಾಗಿತ್ತು. "ಲಾ ತಸ್‌ರೀಬ ಅಲೈಕುಮುಲ್ ಯೌಮ್" (ಈ ದಿನ ಯಾರೊಡನೆಯೂ ಪ್ರತೀಕಾರವಿಲ್ಲ) ಎಂಬ ಪೈಗಂಬರರ[ಸ] ಸಂದೇಶ ಆ ಸಂದರ್ಭದಲ್ಲಿ ಶಾಂತಿಯ ಸೌಂದರ್ಯವನ್ನು ಹರಡುತ್ತಲೇ ಹೋಯಿತು.

ಇದಾಗಿದೆ ಆ ಮೆಟ್ಟಿಲು. ಇದರೊಂದಿಗೆ ಲೋಕಶಾಂತಿ ಬಂಧಿಸಲ್ಪಟ್ಟಿದೆ. ಅಲ್ಲವಾದರೆ, ಜಗತ್ತಿನ ಎಷ್ಟು ದೊಡ್ಡ ನ್ಯಾಯ ನೀತಿ ಇಷ್ಟಪಡುವ ಸರಕಾರವಾದರೂ ಅವರು ರಾಜಕೀಯದವರ ಕೈಗಳಲ್ಲಿ ಆಟಿಕೆಗಳಾಗುತ್ತಾರೆ. ಲೋಕದ ಕೀಲಿಗೈ ಕೈವಶದಲ್ಲಿರುವವರ ಸಂಘಟನೆ ಹೇಳುವುದನ್ನು ಅನುಸರಿಸಿ ಅವರು ಚಲಿಸುತ್ತಿರುವರು. ಅವರು ಪ್ರತ್ಯಕ್ಷದಲ್ಲಿ ಲೋಕ ಶಾಂತಿಯ ಪ್ರತಿಪಾದಕರಾಗಿದ್ದಾರೆ. ಆದರೆ ಅವರ ವರ್ತನೆಯನ್ನು ನೋಡುವಾಗ ಸಮುದ್ರದಲ್ಲೂ ತೀರದಲ್ಲೂ ಗಲಭೆಗೊಂದಲಗಳು ತುಂಬಿಕೊಂಡಿವೆ.

ಈ ಸಂಬಂಧವಾಗಿ ಪವಿತ್ರ ಖುರ್‌ಆನಿನ ಕೆಲವು ಆಜ್ಞೆಗಳನ್ನು ನಾನು ವಿವರಿಸಿದ್ದೇನೆ. ಅವುಗಳಿಂದ ಆ ಮನೋಹರವಾದ ಅಧ್ಯಾಪನೆಗಳ ಚಿತ್ರ ನಮಗೆ ಸಿಗುತ್ತದೆ. ಲೋಕದಲ್ಲಿ ಇಸ್ಲಾಮಿನ ಯಥಾರ್ಥ ಚಿತ್ರ ತೋರಿಸುವ ಸರಕಾರಗಳು ಸ್ಥಾಪಿತವಾಗುವ ಆ ದಿನ ಬೇಗನೆ ಬರುವಂತೆ ಅಲ್ಲಾಹನು ಅನುಗ್ರಹಿಸಲಿ. ಹಝ್ರತ್ ಪೈಗಂಬರರ[ಸ] ಸತ್ಯಸಂಧನಾದ ಪ್ರೇಮಿಯ ಮತ್ತು ಈ ಕಾಲದ ಇಮಾಮರ ಗುರಾಣಿಯ ಹಿಂದೆ ಬಂದು ಇಸ್ಲಾಮಿನ ಮನೋಹರವಾದ ಅಧ್ಯಾಪನೆ ಲೋಕದಲ್ಲಿ ಜಾರಿಗೊಳಿಸಲು ನೆರವಾಗುವವರೂ ತಕ್ವಾದಲ್ಲಿ (ಭಯಭಕ್ತಿಯಲ್ಲಿ) ನಡೆಯುವ ಆಡಳಿತಗಾರರೂ ಉಂಟಾಗಲಿ. ಇದು ಸಾಧಿತವಾಗಲಿಕ್ಕೆ ಇಂದು ಅಹ್ಮದಿಯರ ಕೆಲಸ ಪ್ರಾರ್ಥನೆಯಲ್ಲಿ ಮುಳುಗುವುದಾಗಿದೆ. ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಸ್ವೀಕರಿಸಲಿ. ಈ ಲೋಕವನ್ನು ಸ್ನೇಹ, ಸಂತೋಷ ಮತ್ತು ಶಾಂತಿಯ ನೆಲೆವೀಡಾಗಿ ಮಾಡಲಿ. ಎಲ್ಲರಿಗೂ ಏಕನೂ ಸಹಭಾಗಿಯಿಲ್ಲದವನೂ ಆದ ಆ ಒಬ್ಬನೇ ಒಬ್ಬ ಆರಾಧ್ಯನು ಮಾತ್ರವಾಗಿರಲಿ. ಅಲ್ಲಾಹನು ಹಾಗೆಯೇ ಮಾಡಲಿ.

**(ಲಂಡನಿನ ಬೈತುಲ್ ಫುತೂಹ್‌ನಲ್ಲಿ 22-06-2007ರಂದು ಮಾಡಿದ ಖುತುಬದ ಆಯ್ದ ಭಾಗದ ಭಾಷಾಂತರ)**

★

# ಇಸ್ಲಾಮ್ ಧರ್ಮದ ಸಾರ್ವಲೌಕಿಕತೆ

- ನೂರುದ್ದೀನ್ ಮುನೀರ್

ಇಸ್ಲಾಮ್ ಧರ್ಮದ ಮೂಲಾಧಾರಗಳಾದ ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್(ಸಲ್ಲಲ್ಲಾಹು ಅಲೈಹಿ ವ ಸಲ್ಲಮ್)ರವರ ನುಡಿ ಮತ್ತು ನಡೆಗಳು ಇಸ್ಲಾಮ್ ಧರ್ಮವು ಸಕಲ ಮಾನವರಿಗಾಗಿ ಸ್ಥಾಪಿತವಾದ ಧರ್ಮವಾಗಿದ್ದು ಅದು ಅದಕ್ಕಿಂತ ಹಿಂದಿನ ಧರ್ಮದ ಹಾಗೆ ಯಾವುದೇ ಜನಾಂಗ ಅಥವಾ ಕಾಲದ ಮಿತಿಗೆ ಒಳಗಾಗಿರುವುದಿಲ್ಲ ಎಂದು ಸ್ಪಷ್ಟಪಡಿಸುತ್ತವೆ. ನೋಯೆಲ್‌ಡೀಕ್, ಗೋಲ್ಡ್‌ಝಿಹರ್ ಮತ್ತು ಟಿ.ಡಬ್ಲ್ಯೂ. ಅರ್ನೋಲ್‌ಡರನ್ನು ಹೊರತುಪಡಿಸಿ ಸಾಮಾನ್ಯವಾಗಿ ಇತರ ಎಲ್ಲಾ ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು (Orientalists) ಒತ್ತಿ ಹೇಳುವುದು, ಹಝ್ರತ್ ಪ್ರವಾದಿಯವರ[ಸ] ಮನಸ್ಸಿನಲ್ಲಿದ್ದುದು ಅರಬ್ ಜನಾಂಗ ಮಾತ್ರವಾಗಿದೆ ಎಂದು. ಅವರು ವಾದಿಸುವುದೇನೆಂದರೆ, ಪ್ರವಾದಿಯ ಶಿಷ್ಯರು ಈ ಯೋಚನೆಯನ್ನು ಕ್ರೈಸ್ತ ಧರ್ಮದಿಂದ ಪಡೆದು ಅದನ್ನು ಇಸ್ಲಾಮ್ ಧರ್ಮದಲ್ಲಿ ಅಳವಡಿಸಿದರು. (ಎನ್‌ಸೈಕ್ಲೋಪೀಡಿಯಾ ಆಫ್ ಇಸ್ಲಾಮ್ ಸಂಪುಟ III 1936, ಪುಟ 733)

ಸರ್ ವಿಲಿಯಮ್ ಮ್ಯೂರ್‌ರಂತಹ ಓರಿಯೆಂಟಲಿಸ್ಟರು ಮೇಲೆ ವಿವರಿಸಿದಂತಹ ನಿಲುವನ್ನು ಪ್ರಕಟಿಸಿ ಒಂದು ಶತಮಾನಕ್ಕಿಂತಲೂ ಹೆಚ್ಚಿನ ಕಾಲ ದಾಟಿಹೋಗಿದೆ. ಕೆಲವು ಇತ್ತೀಚೆಗಿನ ಓರಿಯೆಂಟಲಿಸ್ಟರು ಇದನ್ನೇ ಪ್ರತಿಪಾದಿಸುತ್ತಿದ್ದಾರೆ. ಉದಾಹರಣೆಗೆ, ಮೊಂಟ್‌ಗೊಮೆರಿ ವಾಟ್ "ಮುಹಮ್ಮದ್ ಎಟ್ ಮೆಕ್ಕ" ಮತ್ತು "ಮುಹಮ್ಮದ್ ಎಟ್ ಮದೀನ" ಎಂಬ ಎರಡು ಪುಸ್ತಕಗಳನ್ನು 1956ರಲ್ಲಿ ಪ್ರಕಟಿಸಿದ್ದು, ಅದರಲ್ಲಿ ಇಸ್ಲಾಮ್ ಧರ್ಮದ ಈ ಆಯಾಮವನ್ನು ಮ್ಯೂರ್‌ರವರಿಗಿಂತ ಹೆಚ್ಚು ತೀವ್ರವಾಗಿ ಖಂಡಿಸುತ್ತಾರೆ.

ಈ ವಿಷಯದ ಕುರಿತು ಹೊಸದಾಗಿ ಮೌಲ್ಯ ಮಾಪನ ನಡೆಸಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

ಇಸ್ಲಾಮ್ ಧರ್ಮದ ಕುರಿತು ಸಾಕಷ್ಟು ಮಾಹಿತಿ ಗಳಿಸಿರದಂತಹ ಮುಸ್ಲಿಮರ ವಿಶ್ವಾಸವನ್ನು ಇಂತಹ ಖಂಡನಾತ್ಮಕ ವಿಮರ್ಶೆಗಳು ಅಲುಗಾಡಿಸಿ ಅವರು ಇಸ್ಲಾಮ್ ಧರ್ಮದ ಔಚಿತ್ಯವನ್ನು ಮನವರಿಕೆ ಮಾಡಲು ಅಸಮರ್ಥರಾಗುವಂತೆ ಮಾಡುವ ಸಾಧ್ಯತೆಯನ್ನು ಹೊಂದಿವೆ. ಇಸ್ಲಾಮ್ ಧರ್ಮದ ಮೂಲ ತತ್ವಗಳ ಕುರಿತು ಅರಿವಿಲ್ಲದವರು ತಮ್ಮ ಧರ್ಮದ ನಿಜಸ್ವರೂಪದ ಕುರಿತು ಪಾಠವನ್ನು ಕಲಿಯಬೇಕಾಗಿದೆ. ಮನುಷ್ಯರನ್ನೆಲ್ಲಾ ಒಗ್ಗೂಡಿಸಿ ಅವರನ್ನು ಭ್ರಾತೃಗಳ ಒಂದು ಸಮೂಹವನ್ನಾಗಿ ಮಾಡುವ ಇಸ್ಲಾಮ್ ಧರ್ಮದ ಪ್ರಮುಖ ಉದ್ದೇಶವು ಈಡೇರಬೇಕಾದರೆ ಮುಸ್ಲಿಮೇತರರಲ್ಲಿ ಇಸ್ಲಾಮಿನ ವಿರುದ್ಧವಾಗಿರುವ ವಿಮರ್ಶೆಗಳಿಂದ ಉಂಟಾದ ತಪ್ಪು ಗ್ರಹಿಕೆಗಳನ್ನು ಹೋಗಲಾಡಿಸಿ ಅವರು ಇಸ್ಲಾಮನ್ನು ಅದರ ನಿಜರೂಪದಲ್ಲಿ ಮನವರಿಕೆ ಮಾಡಿಕೊಳ್ಳುವಂತೆ ಮಾಡಬೇಕೆಂಬುದಕ್ಕೆ ಆದ್ಯತೆ ನೀಡಬೇಕಾಗಿದೆ.

## ಸರ್ ವಿಲಿಯಮ್ ಮ್ಯೂರ್‌ರವರ ಪಕ್ಷಪಾತ

"ಲೈಫ್ ಆಫ್ ಮುಹಮ್ಮದ್" ಎಂಬ ತನ್ನ ಗ್ರಂಥದಲ್ಲಿ ಮ್ಯೂರ್‌ರವರು ಹಝ್ರತ್ ಪ್ರವಾದಿಯವರ[ಸ] ಕುರಿತು, "ಅವರನ್ನು ಅರಬ್ ದೇಶದ ಜನರಿಗಾಗಿ ಪ್ರವಾದಿಯನ್ನಾಗಿ ನೇಮಿಸಲಾಯಿತು" ಎಂದು ಹೇಳುತ್ತಾರೆ. ಆದರೆ ಈ ಬಗ್ಗೆ ಯಾವ ಆಧಾರವನ್ನೂ ಅವರು ನೀಡುವುದಿಲ್ಲ. ಇಸ್ಲಾಮ್ ಧರ್ಮದ ಪ್ರತಿಯೊಂದು ಅಂಶದ ಕುರಿತು ಪ್ರವಾದಿಯವರ[ಸ] ನುಡಿಗಳು ಮತ್ತು ಅವರ ನಡವಳಿಕೆಗಳು ನಮಗೆ ದೊರೆತಿವೆ.

ಮ್ಯೂರ್ ಹೇಳಿದುದಕ್ಕೆ ವಿರುದ್ಧವಾಗಿರುವ ಒಂದು ಪ್ರವಾದಿ ವಚನ ನಮಗೆ ಲಭಿಸಿದೆ. ಅದನ್ನು ಮ್ಯೂರ್ ಕಡೆಗಣಿಸಿರುವರು. ಆ ಹದೀಸಿನಲ್ಲಿ (ಎಂದರೆ ಪ್ರವಾದಿ ಹೇಳಿದ ಮಾತುಗಳಲ್ಲಿ) ಅವರು ತನ್ನನ್ನು ಸಾರ್ವಲೌಕಿಕ ವಿಮೋಚಕನೆಂದು ಹೇಳಿದ್ದಾರೆ. ಅವರು ತನ್ನ ಐದು ವೈಶಿಷ್ಟ್ಯಗಳನ್ನು ವಿವರಿಸುತ್ತಾ ಅವುಗಳಲ್ಲಿ ಒಂದರ ಕುರಿತು ಹೀಗೆ ಹೇಳುತ್ತಾರೆ:-

"ನನಗಿಂತ ಹಿಂದೆ ಆಗಮಿಸಿದ ಪ್ರವಾದಿಗಳು ತಂತಮ್ಮ ಜನಾಂಗಗಳಿಗಾಗಿ ನೇಮಿಸಲ್ಪಟ್ಟಿರುವಾಗ ನಾನು ಸಕಲ ಮಾನವರಿಗಾಗಿ ಕಳುಹಿಸಲ್ಪಟ್ಟಿರುವೆನು." (ಬುಖಾರಿ)

ಮ್ಯೂರ್ ತನ್ನ ನಿಲುವನ್ನು ಖಲೀಫರ ಚರಿತ್ರೆ ಬರೆಯುವಾಗ ಪುನರಾವರ್ತಿಸುತ್ತಾರೆ. ಅಲ್ಲಿ ಸಹ ಅವರು ಯಾವುದೇ ಸಾಕ್ಷ್ಯವನ್ನು ನೀಡದೆ ಖಲೀಫ ಹಝ್ರತ್ ಉಮರ್‌ರವರ[ರ] ಕಾಲದಲ್ಲಿ ನಡೆದ ಒಂದು ಘಟನೆಯನ್ನು ತನ್ನ ಅಭಿಪ್ರಾಯಕ್ಕೆ ಆಧಾರವಾಗಿಟ್ಟುಕೊಂಡಿದ್ದಾರೆ.

ಖಾದಿಸಿಯ ಯುದ್ಧದಲ್ಲಿ ಗಳಿಸಿದ ಮಹಾವಿಜಯದ ನಂತರ ಮುಸ್ಲಿಮ್ ಸೈನ್ಯವು ಪರ್ಶಿಯಾದ ಸೈನ್ಯವನ್ನು ಜಲೌಲದಲ್ಲಿಯೂ ಸೋಲಿಸಿ ಹಿಮ್ಮೆಟ್ಟಿಸಿತು. ಮುಸ್ಲಿಮ್ ಸೇನಾಧಿಪತಿ ಸಅದ್ ಬಿನ್ ಅಬೀ ವಖ್ಖಾಸ್‌ರವರು ಓಡಿಹೋಗುತ್ತಿದ್ದ ಪರ್ಶಿಯಾದ ಸೈನಿಕರನ್ನು ಬೆನ್ನಟ್ಟಲು ಬಯಸಿದಾಗ, ಹಝ್ರತ್ ಉಮರ್[ರ] ಅದಕ್ಕೆ ಅನುಮತಿ ಕೊಡಲಿಲ್ಲ. ಮ್ಯೂರ್ ಹೀಗೆ ಹೇಳುತ್ತಾರೆ:- "ಅನುಮತಿ ಕೊಡದಿರಲು ಕಾರಣವೇನೆಂದರೆ, ಇಸ್ಲಾಮ್ ಧರ್ಮಕ್ಕೆ ಸಾರ್ವಲೌಕಿಕವಾದೊಂದು ಉದ್ದೇಶವಿದೆ ಎಂಬ ವಿಶ್ವಾಸ ಆಗ ಭ್ರೂಣಾವಸ್ಥೆಯಲ್ಲಿತ್ತು. ತನ್ನ ವಾದವನ್ನು ಕೃತಿಗಿಳಿಸಲು ಸಾರ್ವಲೌಕಿಕವಾದ ಒಂದು ಹೋರಾಟ ನಡೆಸಬೇಕಾದುದು ತನ್ನ ಕರ್ತವ್ಯವಾಗಿದೆ ಎಂಬ ಭಾವನೆ ಆ ಜನಾಂಗದಲ್ಲಿ ಇನ್ನೂ ಮೂಡಿರಲಿಲ್ಲ." (Annals of Early Caliphate, 1883, Page 189)

ಮ್ಯೂರ್‌ರವರ ಈ ಹೇಳಿಕೆಯನ್ನು ಅಂಗೀಕರಿಸುವುದಾದರೆ ಅದರ ಅರ್ಥ ಹೀಗೆ ಆಗುವುದು:- ಹಝ್ರತ್ ಪ್ರವಾದಿ[ಸ] ಮತ್ತು ಅವರ ಮಹಾನ್ ಖಲೀಫರಾಗಿದ್ದ ಹಝ್ರತ್ ಉಮರ್[ರ] ಇವರಿಬ್ಬರೂ ಇಸ್ಲಾಮ್ ಧರ್ಮದ ನಿಜವಾದ ಉದ್ದೇಶದ ಕುರಿತು ಅರಿತಿರಲಿಲ್ಲ. ಪರ್ಶಿಯಾವನ್ನು ಜಯಿಸಿ ಸ್ವಲ್ಪ ಕಾಲದ ನಂತರ ಹುಟ್ಟಾಗಿ ಇಸ್ಲಾಮ್ ಧರ್ಮದ ನಿಜವಾದ ಉದ್ದೇಶವನ್ನು ಕಂಡುಕೊಳ್ಳಲಾಯಿತು.

## ಪವಿತ್ರ ಖುರ್‌ಆನ್ ಪ್ರತಿಪಾದಿಸುವ ಸಾರ್ವಲೌಕಿಕತೆ

ಇಸ್ಲಾಮ್ ಸಾರ್ವಲೌಕಿಕ ಧರ್ಮವಾಗಿದೆ ಎಂಬ ಸತ್ಯವನ್ನು ಪವಿತ್ರ ಖುರ್‌ಆನ್ ಅಸಂದಿಗ್ಧವಾಗಿ ಪ್ರತಿಪಾದಿಸಿದೆ. ಇದಕ್ಕೆ ಸಂಬಂಧಿಸಿದ ಪವಿತ್ರ

ಖುರ್‌ಆನ್ ವಚನಗಳ ಅರ್ಥವು ಆ ವಚನಗಳು ಅವತೀರ್ಣಗೊಳಿಸಲ್ಪಟ್ಟ ಹಝ್ರತ್ ಪ್ರವಾದಿಯವರಿಗೆ(ಸ) ಮತ್ತು ಪವಿತ್ರ ಖುರ್‌ಆನಿನ ನಿಷ್ಠಾವಂತ ಅಧ್ಯಯನಗಾರರಾಗಿದ್ದ ಮತ್ತು ಪ್ರವಾದಿಯವರ ನಿಕಟ ಶಿಷ್ಯರಾಗಿದ್ದ ಹಝ್ರತ್ ಉಮರ್‌ರವರಿಗೆ(ರ) ತಿಳಿದಿರಲಿಲ್ಲವೆಂದು ಭಾವಿಸುವುದು ಅಸಂಬದ್ಧವಾಗಿದೆ. ನಾವು ಈ ಕೆಳಗೆ ಇದಕ್ಕೆ ಸಂಬಂಧಿಸಿದ ಪವಿತ್ರ ಖುರ್‌ಆನ್ ವಚನಗಳನ್ನು ಉಲ್ಲೇಖಿಸುತ್ತೇವೆ:

"ಲೋಕದ ಎಲ್ಲಾ ಜನರಿಗೆ ಒಂದು ಅನುಗ್ರಹವಾಗಿಯೇ ನಾವು ನಿನ್ನನ್ನು ಕಳುಹಿಸಿದ್ದೇವೆ." (21 : 108)

"ಹೇಳು: ಓ ಮನುಷ್ಯರೇ, ದಿಟವಾಗಿಯೂ ನಾನು ನಿಮ್ಮೆಲ್ಲರೆಡೆಗೆ ಅಲ್ಲಾಹನ ಸಂದೇಶವಾಹಕನಾಗಿ ನಿಯೋಜಿತನಾಗಿದ್ದೇನೆ." (7 : 159)

"ನಾವು ನಿನ್ನನ್ನು ಸಕಲ ಮನುಷ್ಯರಿಗೆ ಶುಭವಾರ್ತೆ ನೀಡುವವನಾಗಿಯೂ ಮುನ್ನೆಚ್ಚರಿಕೆಗಾರನಾಗಿಯೂ ಕಳುಹಿಸಿದ್ದೇವೆ. ಆದರೆ ಹೆಚ್ಚಿನ ಜನರು ಮನವರಿಕೆ ಮಾಡುವುದಿಲ್ಲ." (34 : 29)

"ಸರ್ವಲೋಕಕ್ಕೂ ಮುನ್ನೆಚ್ಚರಿಕೆಗಾರನಾಗಲಿಕ್ಕಾಗಿ ತನ್ನ ದಾಸನಿಗೆ ಈ ಸತ್ಯಾಸತ್ಯ ನಿರ್ಣಾಯಕ ಗ್ರಂಥವನ್ನು (ಖುರ್‌ಆನನ್ನು) ಅವತೀರ್ಣಗೊಳಿಸಿದವನು ಅನುಗ್ರಹಪೂರ್ಣನಾಗಿದ್ದಾನೆ." (25 : 2)

ಮೇಲೆ ಉಲ್ಲೇಖಿಸಲಾದ ವಚನಗಳಿರುವ ಪವಿತ್ರ ಖುರ್‌ಆನಿನ ನಾಲ್ಕು ಅಧ್ಯಾಯಗಳು ಮಕ್ಕದಲ್ಲಿ ಅವತೀರ್ಣವಾದವುಗಳೆಂದು ರೊಡ್‌ವೆಲ್ ಒಪ್ಪುತ್ತಾರೆ. ಇದರಿಂದ ತಿಳಿಯುವುದೇನೆಂದರೆ, ಹಝ್ರತ್ ಪ್ರವಾದಿಯವರನ್ನು(ಸ) ಅವರ ಪ್ರವಾದಿತ್ವದ ಆರಂಭ ಕಾಲದಲ್ಲಿಯೇ ಸಾರ್ವಲೌಕಿಕ ಪ್ರವಾದಿ ಎಂದು ನೇಮಿಸಲಾಗಿತ್ತು. ಇಂತಹ ಕಾಲಾನುಕ್ರಮದ ಸಾಕ್ಷ್ಯದ ಪ್ರಕಾರ ಮ್ಯೂರ್‌ರವರ ಆಕ್ಷೇಪ ಸಂಪೂರ್ಣವಾಗಿ ನಿರಾಕರಿಸಲ್ಪಡಬೇಕಾದುದೆಂದು ಸ್ಪಷ್ಟವಾಗುತ್ತದೆ.

ಮೇಲಿನ ಪವಿತ್ರ ಖುರ್‌ಆನಿನ ವಚನಗಳಿಂದ ಸ್ಪಷ್ಟವಾಗುವುದೇನೆಂದರೆ, ಹಝ್ರತ್ ಪ್ರವಾದಿಯವರಿಗೆ(ಸ) ತನ್ನ ಪ್ರವಾದಿತ್ವದ ವ್ಯಾಪ್ತಿಯ ಕುರಿತು ಚೆನ್ನಾಗಿ ತಿಳಿದಿತ್ತು. "ಲೋಕದ ಎಲ್ಲ ಜನರಿಗೆ, ನಿಮ್ಮೆಲ್ಲರೆಡೆಗೆ, ಸಕಲ ಮನುಷ್ಯರಿಗೆ, ಸರ್ವಲೋಕಕ್ಕೆ" ಈ ಶಬ್ದಗಳಿಗೆ ಬೇರೆ ಅರ್ಥಕೊಡಲು ಸಾಧ್ಯವೇ ಇಲ್ಲ. ಪವಿತ್ರ ಖುರ್‌ಆನ್ ಭಾಷಾಂತರಿಸಿದ ರೊಡ್‌ವೆಲ್ ಮತ್ತು ಸೇಲ್‌ರವರು ಈ ವಚನಗಳ ಅರ್ಥ ಬರೆಯುವಾಗ ಎಲ್ಲಾ ಮಾನವರನ್ನು ಸೇರಿಸುವಂತೆ ಅರ್ಥ ನೀಡಿದ್ದಾರೆ. ವಚನ 7 : 158 (159)ರ ಟಿಪ್ಪಣಿಯಲ್ಲಿ ಸೇಲ್ ಹೀಗೆ ಹೇಳುತ್ತಾರೆ: "ಎಲ್ಲಾ ಮಾನವರನ್ನು ಇಲ್ಲಿ ಉದ್ದೇಶಿಸಲಾಗಿದೆ. ಹಿಂದಿನ ಪ್ರವಾದಿಗಳು ಕಳುಹಿಸಲ್ಪಟ್ಟ ಹಾಗೆ ಒಂದು ವಿಶಿಷ್ಟ ಜನಾಂಗವನ್ನು ಇಲ್ಲಿ ಉದ್ದೇಶಿಸಲಾಗಿಲ್ಲ." (Sale's Translation. Fredrick Ware, London Page 160)

## ಎನ್‌ಸೈಕ್ಲೋಪೀಡಿಯಾ ಆಫ್ ಇಸ್ಲಾಮ್ ಪ್ರಕಟಿಸಿದ ಅಜ್ಞತೆ

ಎನ್‌ಸೈಕ್ಲೋಪೀಡಿಯಾ ಆಫ್ ಇಸ್ಲಾಮ್‌ನಲ್ಲಿ "ಮುಹಮ್ಮದ್" ಎಂಬ ಶೀರ್ಷಿಕೆಯಲ್ಲಿ ಬರೆದ ಲೇಖನದಲ್ಲಿ ಲೇಖಕನು ಹೀಗೆ ಹೇಳುತ್ತಾನೆ:

"ತನ್ನ ಧರ್ಮವು ಸಾರ್ವಲೌಕಿಕ ಧರ್ಮವಾಗಿದೆ ಎಂದು ಮುಹಮ್ಮದ್ ಎಂದಾದರೂ ಯೋಚಿಸಿದ್ದರೋ ಎಂಬುದು ಸಂಶಯಕರವಾಗಿದೆ. ಈ ವಾದಕ್ಕೆ ಸಾಕ್ಷ್ಯವಾಗಿ ಉಲ್ಲೇಖಿಸಲಾಗುತ್ತಿರುವ ಮಕ್ಕದಲ್ಲಿ ಅವತೀರ್ಣವಾದ ಅಧ್ಯಾಯಗಳು ಅವುಗಳ ಸನ್ನಿವೇಶಗಳಿಂದ ಸೀಮಿತವಾಗಿವೆ." (Vol. III. E.J. Brill Leiden, 1936, pp 733)

ಮೇಲಿನ ವಚನಗಳು ಯಾವ ಸಂದರ್ಭದಲ್ಲಿ ಅವತೀರ್ಣವಾಗಿವೆ ಎಂಬುದನ್ನು ಪವಿತ್ರ ಖುರ್‌ಆನ್ ನೋಡಿ ದೃಢಪಡಿಸಬಹುದಾಗಿದೆ. ಈ ವಚನಗಳ ಹಿಂದೆ ಅಥವಾ ಮುಂದೆ ಇರುವ ಯಾವುದೇ ಒಂದು ವಚನ ಅಥವಾ ಪವಿತ್ರ ಖುರ್‌ಆನ್‌ನಲ್ಲಿ ಬೇರೆ ಎಲ್ಲಿಯಾದರೂ ಇರುವ ವಚನ ಮೇಲೆ ವಿವರಿಸಿದ ವಚನಗಳಲ್ಲಿ ಪ್ರತಿಪಾದಿಸಿರುವುದನ್ನು ಸೀಮಿತಗೊಳಿಸಿ ಇಸ್ಲಾಮ್ ಸಾರ್ವಲೌಕಿಕ ಧರ್ಮವೆಂಬುದಕ್ಕೆ ವಿರುದ್ಧವಾಗಿ ಏನನ್ನೂ ಸೂಚಿಸುವುದಿಲ್ಲ. ಸತ್ಯವಾದ ಸಂಗತಿಯೇನೆಂದರೆ, ಪವಿತ್ರ ಖುರ್‌ಆನಿನ ಸಂದೇಶ ಸಾರ್ವಲೌಕಿಕವಲ್ಲ ಎಂದಾಗಲು ಸಾಧ್ಯವೇ ಇಲ್ಲ. ಪವಿತ್ರ ಖುರ್‌ಆನ್‌ನಲ್ಲಿ ಯಾವುದೇ ವೈರುಧ್ಯವಿಲ್ಲ. (4 : 83)

ಎನ್‌ಸೈಕ್ಲೋಪೀಡಿಯಾ ಆಫ್ ಇಸ್ಲಾಮ್‌ನಲ್ಲಿರುವ ಲೇಖನ ಹೀಗೆ ಮುಂದುವರಿಯುತ್ತದೆ:

"ಒಂದು ನಿರ್ಣಾಯಕ ಸಂಗತಿಯೇನೆಂದರೆ, ಮುಹಮ್ಮದ್ 'ಅತ್ಯುನ್ನತ ಶಕ್ತಿ' ಗಳಿಸಿದಾಗ ಕೂಡ ಯಹೂದಿಯರು ಮತ್ತು ಕ್ರೈಸ್ತರು ಮುಸ್ಲಿಮರಾಗಬೇಕೆಂದು ಎಂದೂ ಆಗ್ರಹಪಡಿಸಲಿಲ್ಲ. ಅವರು ತನ್ನ ರಾಜಕೀಯ ಅಧಿಕಾರಕ್ಕೆ ಅಧೀನರಾಗಿ ತನಗೆ ತೆರಿಗೆಗಳನ್ನು ಸಂದಾಯಮಾಡಿದರೆ ಸಾಕೆಂಬ ವಿಷಯದಲ್ಲಿ ಮುಹಮ್ಮದ್ ತೃಪ್ತರಾಗಿದ್ದರು... ಸಾರ್ವತ್ರಿಕ ಧರ್ಮ ಪ್ರಚಾರದ ಯೋಚನೆ ಮುಸ್ಲಿಮರಲ್ಲಿ ಕ್ರೈಸ್ತ ಧರ್ಮದವರ ವರ್ತನೆಯ ಪ್ರಭಾವದಿಂದ ಉಂಟಾದುದಾಗಿದೆ."

ಸ್ವತಂತ್ರ ಬುದ್ಧಿಯಿಂದ ಧರ್ಮವನ್ನು ಸ್ವೀಕರಿಸುವುದನ್ನು ಮತ್ತು ರಾಜಕೀಯ ಅಧೀನತೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಲೇಖಕನು ತಬ್ಬಿಬ್ಬುಗೊಂಡಿರುವನು. ಪರಮಾಧಿಕಾರಿ ಎಂಬ ಸ್ಥಾನದಲ್ಲಿದ್ದ ಹಝ್ರತ್ ಪ್ರವಾದಿ(ಸ) ಯಹೂದಿಯರನ್ನಾಗಲೀ ಕ್ರೈಸ್ತರನ್ನಾಗಲೀ ಅಥವಾ ಬೇರೆ ಯಾವುದೇ ಧರ್ಮದ ಅನುಯಾಯಿಯನ್ನಾಗಲೀ ಇಸ್ಲಾಮ್ ಧರ್ಮವನ್ನು ಸ್ವೀಕರಿಸಲು ಎಂದೂ ಬಲಾತ್ಕಾರಮಾಡಲಿಲ್ಲ. ಆದರೆ ದೇವನಿಂದ ನೇಮಿಸಲ್ಪಟ್ಟ ಪ್ರವಾದಿ ಎಂಬ ನೆಲೆಯಲ್ಲಿ ಅವರು ಮಾನವರೆಲ್ಲರನ್ನೂ ಸ್ವಂತ ಇಚ್ಛೆಯಿಂದ ಇಸ್ಲಾಮ್ ಧರ್ಮವನ್ನು ಸ್ವೀಕರಿಸಲು ತನ್ನ ಪ್ರವಾದಿತ್ವದ ಆರಂಭದ ಕಾಲದಿಂದಲೇ ಆಹ್ವಾನಿಸುತ್ತಿದ್ದರು. ನಾವು ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನಗಳು ನಮ್ಮ ಈ ಮಾತನ್ನು ನಿಸ್ಸಂಶಯವಾಗಿ ಸಾಬೀತುಗೊಳಿಸುತ್ತವೆ. ಪವಿತ್ರ ಖುರ್‌ಆನ್ ಯಹೂದಿಯರನ್ನು ಮತ್ತು ಕ್ರೈಸ್ತರನ್ನು ಇಸ್ಲಾಮ್ ಧರ್ಮ ಸ್ವೀಕರಿಸಲು ಕರೆ ನೀಡುತ್ತದೆ. ಅವರು ಈ ಕರೆಗೆ ಓಗೊಡದಿದ್ದರೆ ಅದರ ಪರಿಣಾಮದ ಬಗ್ಗೆ ಅದು ಮುನ್ನೆಚ್ಚರಿಕೆ ನೀಡುತ್ತದೆ.

ಈ ಕೆಳಗಿನ ಪವಿತ್ರ ಖುರ್‌ಆನಿನ ವಚನವನ್ನು ನೋಡಿರಿ:

"ಓ ಗ್ರಂಥ ನೀಡಲ್ಪಟ್ಟವರೇ, (ಯಹೂದಿಯರು ಮತ್ತು ಕ್ರೈಸ್ತರೇ,) ನಿಮ್ಮ ಬಳಿ ಇರುವುದನ್ನು ದೃಢೀಕರಿಸಿಕೊಂಡು ನಾವು ಅವತೀರ್ಣಗೊಳಿಸಿರುವುದನ್ನು ನೀವು ನಂಬಿರಿ - ನಿಮ್ಮ ನೇತಾರರಲ್ಲಿ ಕೆಲವರನ್ನು ನಾವು ಅಪಮಾನಿತರನ್ನಾಗಿ ಮಾಡಿ ಅವರ ಹಿಂಭಾಗಕ್ಕೆ ತಳ್ಳಿಬಿಡುವುದಕ್ಕಿಂತ ಮುಂಚಿತವಾಗಿ ಅಥವಾ ಸಬ್ಬತ್‌ಗಾರರನ್ನು ನಾವು ಶಪಿಸಿದಂತೆ ಅವರನ್ನು ಶಪಿಸುವುದಕ್ಕೆ ಮುಂಚಿತವಾಗಿ, ಅಲ್ಲಾಹನ ಆಜ್ಞೆ ಜಾರಿಗೆ ಬಂದೇ ಬರುತ್ತದೆ." (4 : 48)

ಮದೀನದಲ್ಲಿ ಪ್ರವಾದಿಯವರ(ಸ) ಆಹ್ವಾನವನ್ನು ಅಂಗೀಕರಿಸಿ ಅಬ್ದುಲ್ಲಾ ಬಿನ್ ಸಲಾಮ್ ಎಂಬ ಮದೀನದ ಯಹೂದಿ ವಿದ್ವಾಂಸರಾದ ಮುಖಂಡರು ತನ್ನ ಕುಟುಂಬದೊಂದಿಗೆ ಇಸ್ಲಾಮ್ ಧರ್ಮವನ್ನು ಸೇರಿದರು.

————(17ನೇ ಪುಟಕ್ಕೆ..........)

# M TA (ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ ಇಂಟರ್‌ನ್ಯಾಷನಲ್) ಮೂಲಕ ಕ್ರೈಸ್ತರೊಂದಿಗೆ ಸಂವಾದ

- ಮುಹಮ್ಮದ್ ತಾಹಿರ್ ನದೀಮ್
*M TA ಅರಬಿಕ್ ಡೆಸ್ಕ್ - ಲಂಡನ್*

**ಕೆಲವು ವರ್ಷಗಳಿಂದ ಕ್ರೈಸ್ತ ಮತಪಂಡಿತರು ಅರಬಿ ಭಾಷೆಯಲ್ಲಿ ಇಸ್ಲಾಮ್ ಧರ್ಮದ ವಿರುದ್ಧ ವಿವಿಧ ಆಕ್ಷೇಪಗಳನ್ನು ಮಾಡುತ್ತಾ ಇದ್ದಾರೆ. ಇವುಗಳಿಗೆ ಸಮಂಜಸವಾದ ಉತ್ತರವನ್ನು ಅರಬ್ ಮುಸ್ಲಿಮರಾಗಲೀ ಅರಬಿಯೇತರ ಮುಸ್ಲಿಮರಾಗಲೀ ನೀಡಲು ಸಮರ್ಥರಾಗಲಿಲ್ಲ. ಈಗ ಮುಸ್ಲಿಮ್ ಟೆಲಿವಿಷನ್ ಅಹ್ಮದಿಯಾ ಇಂಟರ್‌ನ್ಯಾಷನಲ್ ಈ ಕೆಲಸವನ್ನು ಚೆನ್ನಾಗಿ ಮಾಡಲು ಪ್ರಾರಂಭಿಸಿದೆ. ಅನೇಕ ಅರಬ್ ಪತ್ರಿಕೆಗಳು ಈ ಟೆಲಿವಿಷನ್ ಕಾರ್ಯಕ್ರಮಗಳನ್ನು ತಮ್ಮ ಪತ್ರಿಕೆಗಳಲ್ಲಿ ಕಂತುಗಳಲ್ಲಿ ಪ್ರಕಟಿಸುತ್ತಾ ಇವೆ. ಈಜಿಪ್ಟಿನ ಕೈರೋದಲ್ಲಿರುವ ಅಲ್‌ಅಝ್‌ಹರ್ ಯುನಿವರ್ಸಿಟಿಯವರು ತಮ್ಮ ಸ್ವಂತ ಪತ್ರಿಕೆಯಲ್ಲಿ ಈ ಕಾರ್ಯಕ್ರಮಗಳ ಪಾಠವನ್ನು ಕ್ರೈಸ್ತರಿಗೆ ನೀಡುವ ಉತ್ತರ ರೂಪದಲ್ಲಿ ಬಳಸಿರುವುದು ಗಮನಾರ್ಹವಾಗಿದೆ. M TA ಕೈಗೊಂಡ ಪ್ರಯತ್ನಗಳ ಸಂಕ್ಷೇಪ ವಿವರಣೆ ಮತ್ತು ವೀಕ್ಷಕರ ಕೆಲವು ಅಭಿಪ್ರಾಯಗಳನ್ನು ಕೆಳಗೆ ಕೊಡಲಾಗಿದೆ.**

2005ರ ಆಗಸ್ಟ್ ಮಾಸದಲ್ಲಿ ಅರಬಿ ಭಾಷೆಯಲ್ಲಿ "ಅಲ್‌ಹಿವಾರುಲ್ ಮುಬಾಶಿರ್" (ನೇರ ಚರ್ಚೆ) ಎಂಬ ಮಾತುಕತೆಯ ಕಾರ್ಯಕ್ರಮ ನೇರವಾಗಿ ಪ್ರಸಾರಮಾಡಲು ಪ್ರಾರಂಭಗೊಳಿಸಲಾಯಿತು. ಈ ಕಾರ್ಯಕ್ರಮ ಈಗಲೂ ಜಾರಿಯಲ್ಲಿದೆ. ಅಹ್ಮದಿಯರಲ್ಲಿ ಮಾತ್ರವಲ್ಲ ಲೋಕದಾದ್ಯಂತ ಇರುವ ಅರಬಿಯರಲ್ಲಿಯೂ ಈ ಕಾರ್ಯಕ್ರಮ ಮೆಚ್ಚಿಗೆಯನ್ನು ಪಡೆದಿದೆ.

## ಹಿನ್ನೆಲೆ

ಕೆಲವು ಕಾಲದಿಂದ ಲೋಕದಾದ್ಯಂತ ಇಸ್ಲಾಮಿಗೆ ವಿರುದ್ಧವಾಗಿರುವ ಶಕ್ತಿಗಳು ಬಹಳ ತೀವ್ರವಾಗಿ ಕಾರ್ಯಪ್ರವೃತ್ತವಾಗಿವೆ. ವಿಶಿಷ್ಟವಾಗಿ ಅರಬ್ ಲೋಕದಲ್ಲಿ ಅವರು ಮಾಡುವ ಆಕ್ರಮಣಗಳು ಹೆಚ್ಚುತ್ತಾ ಹೋಗುತ್ತವೆ. ಕೆಲವು ಸಂದರ್ಭಗಳಲ್ಲಿ ಧನ ವಿನಿಯೋಗಿಸಿ, ಕೆಲವು ಸಂದರ್ಭಗಳಲ್ಲಿ ಧಾರ್ಮಿಕ ಸ್ವಾತಂತ್ರ್ಯದ ರಕ್ಷಣೆಯ ನೆಪದಲ್ಲಿ, ಕೆಲವು ಸಾರಿ ಬೆದರಿಕೆ ಮೂಲಕ, ರಾಜಕೀಯ ಮತ್ತು ಸಂಪರ್ಕ ಮಾಧ್ಯಮಗಳ ಬೆಂಬಲದಿಂದ ಇಸ್ಲಾಮಿನ ವಿರುದ್ಧ ವ್ಯವಸ್ಥಿತ ಅಪಪ್ರಚಾರ ನಡೆಸಲಾಗುತ್ತಿದೆ.

ಅರಬ್ ದೇಶಗಳಲ್ಲಿ ಇಸ್ಲಾಮಿಗೆ ವಿರುದ್ಧವಾಗಿರುವ ಮನ ನೋಯಿಸುವ ಅಭಿಯಾನಗಳಲ್ಲಿ ಒಂದು ದೊಡ್ಡ ಭಾಗ ಅರಬಿ ಭಾಷೆಯಲ್ಲಿ ಪ್ರಸಾರಮಾಡುತ್ತಿರುವ ಒಂದು ಕಾರ್ಯಕ್ರಮವಾಗಿದೆ. ಆ ಕಾರ್ಯಕ್ರಮವನ್ನು ಈಜಿಪ್ಟಿನ ಝಕರಿಯ್ಯಾ ಪಿತ್‌ರಸ್ ಎಂಬ ಅರಬಿ ಪಾದರಿ ಒಂದು ಟಿ.ವಿ. ಚ್ಯಾನೆಲ್‌ನಲ್ಲಿ ಪ್ರಸ್ತುತಪಡಿಸುತ್ತಿದ್ದಾರೆ. ಅದರ ಶೀರ್ಷಿಕೆ "ಅಸ್‌ಇಲತು ಅನಿಲ್‌ಈಮಾನ್" (ವಿಶ್ವಾಸಕ್ಕೆ ಸಂಬಂಧಿಸಿದ ಪ್ರಶ್ನೆಗಳು) ಎಂದಾಗಿದೆ. ಮುಸ್ಲಿಮರ ವಿಶ್ವಾಸಾದರ್ಶಗಳಲ್ಲಿ ತಪ್ಪು ಗ್ರಹಿಕೆಗಳು ಮತ್ತು ಬಿಗಡಾಯಿಸುವಿಕೆ ತಲೆದೋರಿದ ವಿಷಯಗಳ ಕುರಿತು ಅವರು ವಿಶಿಷ್ಟವಾಗಿ ಚರ್ಚಿಸುತ್ತಿದ್ದಾರೆ. ಮುಸ್ಲಿಮರು ಇಂದು ಹೊಂದಿರುವ ವಿಶ್ವಾಸಾದರ್ಶಗಳ ಕುರಿತು ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಹೀಗೆ ಹೇಳಿರುವರು: "ಒಂದು ಕಾಲದಲ್ಲಿ ಇಸ್ಲಾಮ್ ಧರ್ಮಕ್ಕೆ ಎಂತಹ ಸ್ಥಿತಿ ಬರುವುದೆಂದರೆ ಕೇವಲ ಅದರ ಹೆಸರು ಮಾತ್ರ ಬಾಕಿ ಉಳಿಯುವುದು."

ಇದರ ಅರ್ಥವೇನೆಂದರೆ, ಇಸ್ಲಾಮಿನ ತತ್ವಗಳು ಬಿಗಡಾಯಿಸಲ್ಪಡುವುವು. ಕೇವಲ ಇಸ್ಲಾಮ್ ಎಂಬ ಹೆಸರು ಮಾತ್ರ ಬಾಕಿಯಾಗಿ ಉಳಿಯುವುದು. ಮುಸ್ಲಿಮರ ತಪ್ಪು ಗ್ರಹಿಕೆಗಳನ್ನೂ ಬಿಗಡಾಯಿಸಿದ ವಿಶ್ವಾಸಗಳನ್ನೂ ಪರಿಷ್ಕರಿಸಲಿಕ್ಕಾಗಿಯೇ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್‌ರವರನ್ನು[ಅ] ಕಳುಹಿಸಿದನು.

ಪಾದರಿಗೆ ಇಸ್ಲಾಮ್ ಧರ್ಮವನ್ನು ಆಕ್ಷೇಪಿಸಲು ಅನುಕೂಲವಾದ ಸಾಮಾಗ್ರಿಗಳು ವಿವಿಧ ತಫ್‌ಸೀರ್‌ಗಳಲ್ಲಿ ಮತ್ತು ಕೆಲವು ಹಿಂದಿನ ಕಾಲದ ಮತಪಂಡಿತರ ಗ್ರಂಥಗಳಲ್ಲಿ ದೊರಕುತ್ತವೆ.

## ಕ್ರೈಸ್ತ ಪಾದರಿಯ ಟೆಲಿವಿಷನ್ ಕಾರ್ಯಕ್ರಮಗಳ ವಿಷಕಾರಕ ಪ್ರಭಾವ

ಇಸ್ಲಾಮಿಗೆ ವಿರುದ್ಧವಾದ ಈ ಕಾರ್ಯಕ್ರಮಗಳ ವಿಷವು ಕೆಲವು ಮುಸ್ಲಿಮರ ಮೇಲೆ ಬಹಳ ಕೆಟ್ಟ ಪ್ರಭಾವ ಬೀರಿತು. ಕೆಲವು ಅರಬ್ ದೇಶಗಳಲ್ಲಿ ಕ್ರೈಸ್ತ ಧರ್ಮದ ಈ ಆಕ್ರಮಣವು ಎಷ್ಟು ಭೀಕರವಾಗಿತ್ತೆಂದರೆ ಮುಸ್ಲಿಮರಲ್ಲಿ ಹಲವರು ಇಸ್ಲಾಮ್ ಧರ್ಮವನ್ನು ತ್ಯಜಿಸಿ ಕ್ರೈಸ್ತ ಧರ್ಮದ ಬಲೆಯಲ್ಲಿ ಸಿಕ್ಕು ಹಾಕಿಕೊಳ್ಳತೊಡಗಿದರು. ಅವರಲ್ಲಿ ಕೆಲವರು ಇಸ್ಲಾಮಿನ ವಿರುದ್ಧದ ಈ ಅಭಿಯಾನದಲ್ಲಿ ಭಾಗವಹಿಸಲು ಸಹ ಪ್ರಾರಂಭಿಸಿದರು.

ಇಂತಹ ಪರಿಸ್ಥಿತಿ ಉಂಟಾಗಲು ಪ್ರಾಯಶಃ ದೊಡ್ಡ ಕಾರಣವೇನೆಂದರೆ, ಕ್ರೈಸ್ತ ಪಾದರಿ ಮುಸ್ಲಿಮ್ ಮತಪಂಡಿತರ ಗ್ರಂಥಗಳನ್ನು ಉಲ್ಲೇಖಿಸಿ ಆಕ್ಷೇಪಿಸುತ್ತಿದ್ದರು ಮತ್ತು "ನನ್ನ ಆಕ್ಷೇಪಕ್ಕೆ ಏನಾದರೂ ಉತ್ತರ ಇದ್ದರೆ ಕೊಡಿರಿ. ನನ್ನ ಎದುರಿಗೆ ಬಂದು ನನ್ನ ಆಕ್ಷೇಪಗಳನ್ನು ಖಂಡಿಸಬಲ್ಲವನಿದ್ದರೆ ಮುಂದೆ ಬರಲಿ" ಎಂದು ಹೇಳುತ್ತಿದ್ದರು.

ಪಾದರಿಯ ಈ ಪಂಥಾಹ್ವಾನಗಳಿಗೆ ಸಾಮಾನ್ಯ ಮುಸ್ಲಿಮರ ವತಿಯಿಂದ ಯಾವುದೇ ಉತ್ತರ ದೊರಕದ ಕಾರಣ ಬಲಹೀನ ವಿಶ್ವಾಸ ಹೊಂದಿದ ಹಲವರು ಇಸ್ಲಾಮ್ ಧರ್ಮವನ್ನು ಬಿಟ್ಟು ಕ್ರೈಸ್ತ ಧರ್ಮವನ್ನು ಸ್ವೀಕರಿಸಿದರು.

## ಮುಸ್ಲಿಮರ ಅಸಹಾಯಕತೆ

ಪಾದರಿ ಎಲ್ಲಾ ಮುಸ್ಲಿಮರಿಗೆ ಪಂಥಾಹ್ವಾನ ನೀಡುವುದರೊಂದಿಗೆ ಅಲ್‌ಅಝ್‌ಹರ್ ಯುನಿವರ್ಸಿಟಿಯ ವಿದ್ವಾಂಸರನ್ನೂ ಆಹ್ವಾನಿಸಿ ಹೇಳಿದರು: "ಅವರಿಗೆ ಧೈರ್ಯವಿದ್ದರೆ ಅವರು ನನ್ನ ಮುಂದೆ ಬಂದು ಈ ವಿಷಯಗಳ ಕುರಿತು ಉತ್ತರ ಕೊಡಲಿ."

ಈ ಪರಿಸ್ಥಿತಿಯಲ್ಲಿ ಮುಸ್ಲಿಮರು ಈ ಕೆಳಗಿನ ಮೂರು ರೀತಿಗಳಲ್ಲಿ ಪ್ರತಿಕ್ರಿಯಿಸಿದರು:

1. ಭಾವಾವೇಶಭರಿತರಾದ ಕೆಲವು ತಿಳಿಗೇಡಿ ಮುಸ್ಲಿಮರು ಕೆಟ್ಟ ಬೈಗಳನ್ನು ಬಳಸಿ ಕೆಲವು ಮಾತುಗಳನ್ನು ಹೇಳಿ ತಾವು ಇಸ್ಲಾಮನ್ನು ಸಂರಕ್ಷಿಸುವ ಕರ್ತವ್ಯವನ್ನು ಈಡೇರಿಸಿದೆವು ಎಂದು ಭಾವಿಸಿದರು.

2. ಕೆಲವು ಜನರು ಪಾದರಿಯು ಉಲ್ಲೇಖಿಸಿದ ಗ್ರಂಥಗಳ ಉದ್ಧರಣೆಗಳಿಗೆ ತಮ್ಮದೇ ಆದ ವಿವಿಧ ವ್ಯಾಖ್ಯಾನಗಳನ್ನು ವೈಯುಕ್ತಿಕವಾಗಿ ನೀಡಿ ಇಸ್ಲಾಮಿನ ವಿರುದ್ಧ ಮಾಡಿದ ಆಕ್ಷೇಪಗಳಿಂದ ರಕ್ಷಣೆ ಪಡೆಯಲು ನೋಡಿದರು. ಆದರೆ ಅವರ ಪ್ರಯತ್ನ ಪ್ರಯೋಜನಕರವಾಗಲಿಲ್ಲ.

3. ಕೆಲವರು ಧೈರ್ಯಗುಂದಿ ತಮ್ಮ ಅಸಹಾಯಕತೆಯ ಬಗ್ಗೆ ಗೋಳಾಡಲು ಪ್ರಾರಂಭಿಸಿದರು ಮತ್ತು ಸಹಾಯಕ್ಕಾಗಿ ಅಲ್ಲಾಹನನ್ನು ಅತ್ತು ಕರೆದು ಹೀಗೆ ಪ್ರಾರ್ಥಿಸಲು ತೊಡಗಿದರು: ಓ ಅಲ್ಲಾಹ್, ನೀನೇ ಯಾರನ್ನಾದರೂ ಎಬ್ಬಿಸಿ ನಿಲ್ಲಿಸಿ ಪಾದರಿಯ ಬಾಯಿಯನ್ನು ಮುಚ್ಚಿಸುವಂತೆ ಮಾಡು.

ಆದರೆ ಇಸ್ಲಾಮಿನ ಶತ್ರುವಿನ ಹಲ್ಲುಗಳನ್ನು ಕಿತ್ತು ಆತನ ಉಪಾಯಗಳು ಆತನ ಮೇಲೆಯೇ ತಿರುಗಿ ಎರಗುವಂತೆ ಮಾಡಬಲ್ಲ ಯಾರೊಬ್ಬನೂ ಮುಂದೆ ಬರಲಿಲ್ಲ.

## ಭರವಸೆಯ ಕಿರಣ

ಈ ಪರಿಸ್ಥಿತಿಯಲ್ಲಿ ಕಬಾಬೀರ್‌ನಲ್ಲಿರುವ MTA ಕಾರ್ಯಕರ್ತರು ಕ್ರೈಸ್ತ ಪಾದರಿ ಮುಂದಿರಿಸಿದ ದೊಡ್ಡ ದೊಡ್ಡ ಆಕ್ಷೇಪಗಳಿಗೆ ವಿಶದವಾದ ಉತ್ತರವನ್ನೊಳಗೊಂಡ ಹಲವು ಕಾರ್ಯಕ್ರಮಗಳನ್ನು ರೆಕಾರ್ಡ್ ಮಾಡಿದರು ಮತ್ತು ಅವುಗಳು ನಿರಂತರವಾಗಿ MTAದಲ್ಲಿ ಪ್ರಸಾರವಾಗತೊಡಗಿದವು.

ಇನ್ನೊಂದು ಕಡೆ ಕ್ರೈಸ್ತ ಪಾದರಿ ನಿರಂತರವಾಗಿ ಮುಸ್ಲಿಮರನ್ನು ಸಂಬೋಧಿಸಿ, "ನನ್ನನ್ನು ಎದುರಿಸಲು ಯಾರಾದರೂ ಇದ್ದರೆ ಮುಂದೆ ಬನ್ನಿರಿ" ಎಂದು ಪಂಥಾಹ್ವಾನ ನೀಡುತ್ತಾ ಇದ್ದರು. ಆಗ ಅಹ್ಮದೀ ಮುಸ್ಲಿಮರು ಅಹ್ಮದಿಯಾ ಮುಸ್ಲಿಮ್ ಖಿಲಾಫತ್ ವ್ಯವಸ್ಥೆಯ ಮಾರ್ಗ ನಿರ್ದೇಶನದ ಪ್ರಕಾರ ಈ ಪಂಥಾಹ್ವಾನವನ್ನು ಅಂಗೀಕರಿಸಿದರು. ಈಜಿಪ್ಟ್ ದೇಶದ ಅಹ್ಮದೀ ಮುಸ್ಲಿಮ್ ವಿದ್ವಾಂಸರಾದ ಮುಸ್ತಫಾ ಸಾಬಿತ್ ಸಾಹೆಬರು ಕಾಸಿರೆ ಸಲೇಬ್ (ಶಿಲುಬೆಯನ್ನು ಮುರಿದು ಹಾಕುವವರಾದ) ಹಝ್ರತ್ ಮಸೀಹ್ ಮೌಊದ್‌ರವರು[ಅ] ಪ್ರಕಟಿಸಿದ ಜ್ಞಾನ ಭಂಡಾರದ ಸಹಾಯದಿಂದ ಮೂವತ್ತು ಕಂತುಗಳ ಒಂದು ವೀಡಿಯೋ ಪ್ರೋಗ್ರಾಮನ್ನು ರಿಕಾರ್ಡ್ ಮಾಡಿಸಿದರು. ಅದನ್ನು ಬರಹ ರೂಪದಲ್ಲಿಯೂ ಸಂರಕ್ಷಿಸಲಾಯಿತು. ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅಹ್ಮದಿಯಾ ಜಮಾಅತಿನ ಈಗಿನ ಖಲೀಫ) ಈ ಕಾರ್ಯಕ್ರಮವನ್ನು MTAದಲ್ಲಿ ಬಿತ್ತರಿಸಲು ನಿರ್ದೇಶಿಸಿದರು.

## ಸಾಬಿತ್ ಸಾಹೆಬರ ಕಾರ್ಯಕ್ರಮಗಳ ಪರಿಣಾಮ

"ಅಸ್‌ಇಲತು ಅನಿಲ್‌ಈಮಾನ್" ಎಂಬ ಪಾದರಿಯ ಕಾರ್ಯಕ್ರಮಗಳನ್ನು ಖಂಡಿಸಿ "ಅಜ್‌ವಿಬತು ಅನಿಲ್‌ಈಮಾನ್" (ವಿಶ್ವಾಸಕ್ಕೆ ಸಂಬಂಧಿಸಿದ ಉತ್ತರಗಳು) ಎಂಬ ಶೀರ್ಷಿಕೆಯಲ್ಲಿ ಮುಸ್ತಫಾ ಸಾಬಿತ್ ಸಾಹೆಬರು ಉತ್ತರ ನೀಡಿದರು. ಈ ಕಾರ್ಯಕ್ರಮಗಳನ್ನು ಒಂದು ವೆಬ್‌ಸೈಟ್‌ನಲ್ಲಿ ಹಾಕಿ ಅದರ ಪ್ರಯೋಜನ ಸಾಮಾನ್ಯ ಜನರಿಗೂ ದೊರಕುವಂತೆ ಮಾಡಬೇಕೆಂದು ಹಝ್ರತ್ ಖಲೀಫತುಲ್ ಮಸೀಹ್‌ರವರು ನಿರ್ದೇಶಿಸಿದ ಪ್ರಕಾರ ಹಾಗೆಯೇ ಮಾಡಲಾಯಿತು.

ಇದರ ಫಲ ಸ್ವರೂಪವಾಗಿ ಪಾದರಿಯ ಬಾಯಿ ಮುಚ್ಚಿಸಲು ಪುರಾವೆಗಳು ದೊರಕದ ಜನರಿಗೆ ಬಲಯುತವಾದ ಆಯುಧ ದೊರಕಿದಂತಾಯಿತು. ಅನೇಕ ಅರಬಿ ಪತ್ರಿಕೆಗಳು ಈ ಕಾರ್ಯಕ್ರಮಗಳ ಪಾಠವನ್ನು ಕಂತುಗಳಲ್ಲಿ ಪ್ರಕಟಿಸಲು ಪ್ರಾರಂಭಿಸಿದವು. ಎಲ್ಲಕ್ಕಿಂತ ವಿಶೇಷ ಸಂಗತಿಯೇನೆಂದರೆ, ಅಲ್ ಅಝ್‌ಹರ್ ಯುನಿವರ್ಸಿಟಿಯವರು ಈ ಕಾರ್ಯಕ್ರಮಗಳ ಪಾಠವನ್ನು ಕ್ರೈಸ್ತ ಆಕ್ಷೇಪಗಾರರ ಮುಂದೆ ರೂಢಿಯಂತೆ ತಮ್ಮ ಉತ್ತರವಾಗಿ ಪ್ರಕಟಿಸಿದರು.

ಅನೇಕ ಟೆಲಿವಿಷನ್ ಕಾರ್ಯಕ್ರಮಗಳಲ್ಲಿ ಮತ್ತು ವೆಬ್‌ಸೈಟ್‌ಗಳಲ್ಲಿ ಸಹ ಮುಸ್ತಫಾ ಸಾಬಿತ್ ಸಾಹೆಬರ ಕಾರ್ಯಕ್ರಮಗಳ ಬಗ್ಗೆ ಮೆಚ್ಚಿಗೆ ಸೂಚಿಸಲಾಗಿದೆ.

ಈ ಕಾರ್ಯಕ್ರಮಗಳ ಮೂಲಪಾಠ ಪುಸ್ತಕ ರೂಪದಲ್ಲಿ ಈಜಿಪ್ಟ್‌ನಲ್ಲಿ ಪ್ರಕಟವಾಗಿದೆ. ಇದನ್ನು ಜನರು ಬಹಳ ಇಷ್ಟಪಟ್ಟಿದ್ದಾರೆ ಮತ್ತು ಮೆಚ್ಚಿಗೆ ಸೂಚಿಸಿದ್ದಾರೆ.

## ಅಲ್‌ಹಿವಾರುಲ್ ಮುಬಾಶಿರ್ ಕಾರ್ಯಕ್ರಮದ ಪ್ರಾರಂಭ

ಸಾಮಾನ್ಯವಾಗಿ ಜನರಿಗೆ ಬಿಡುವು ದೊರಕದ ಕಾರಣ ಅವರು ಪುಸ್ತಕವನ್ನು ಓದಿ ಜ್ಞಾನ ಗಳಿಸುವುದಕ್ಕೆ ಪ್ರತಿಯಾಗಿ ಟಿ.ವಿ.ಯಲ್ಲಿ ನೇರಪ್ರಸಾರ ನೋಡಲು ಬಯಸುತ್ತಾರೆ. ಆದುದರಿಂದ ಟಿ.ವಿ.ಯಲ್ಲಿ ಅರಬಿ ಭಾಷೆಯಲ್ಲಿ ಜಮಾಅತಿಗೆ ಸಂಬಂಧಿಸಿದ ವಿಷಯಗಳನ್ನು ಮತ್ತು ಉಪದೇಶಗಳನ್ನು ನೇರವಾಗಿ ಪ್ರಸಾರ ಮಾಡಬೇಕೆಂಬ ಸಲಹೆ ಮಾಡಲಾಯಿತು.

ಇಂತಹ ಕಾರ್ಯಕ್ರಮಗಳನ್ನು ರೂಪಿಸಲು ತ್ವರಿತವಾಗಿ ಕಾರ್ಯಪ್ರವೃತ್ತರಾದುದಕ್ಕೆ ಕಾರಣವೇನೆಂದರೆ, ಪ್ಯಾಲೆಸ್ತೀನಿನ ಒಬ್ಬ ಮುಫ್ತಿ ಅಹ್ಮದಿಯಾ ಜಮಾಅತ್ ಕುರಿತು ಮುಸ್ಲಿಮೇತರರೆಂಬ ಫತ್ವ ಹೊರಡಿಸಿದ್ದರು. ಆದುದರಿಂದ ಪ್ರಥಮ ನೇರಪ್ರಸಾರದ ಕಾರ್ಯಕ್ರಮ ಈ ಮುಫ್ತಿಯ ಫತ್ವವನ್ನು ಖಂಡಿಸಿ ಪ್ರಸಾರ ಮಾಡಲಾಯಿತು. ಆ ಸಮಯದಲ್ಲಿ ಈ ಕಾರ್ಯಕ್ರಮಕ್ಕೆ ಅಲ್‌ಹಿವಾರುಲ್ ಮುಬಾಶಿರ್ ಎಂಬ ಹೆಸರಿರಲಿಲ್ಲ.

ಕೆಲವು ಕಾರ್ಯಕ್ರಮಗಳು ಇಸ್ಲಾಮ್ ಧರ್ಮದ ಮೂಲಾಧಾರಗಳ ಕುರಿತು ಸರಿಯಾದ ತಿಳುವಳಿಕೆ ನೀಡಲು ಮತ್ತು ಜನರ ತಪ್ಪು ರೀತಿಗಳನ್ನು ಖಂಡಿಸಲು ಪ್ರಸಾರವಾದುವು. ಹದೀಸುಗಳ ಸ್ಥಾನಮಾನ, ಉಪದೇಶಗಳ ಬಾಹ್ಯಾಚರಣೆಯನ್ನು ಮಾತ್ರವಲ್ಲ ಅವುಗಳ ಮೂಲ ತಿರುಳನ್ನು ಅವಲಂಬಿಸುವುದರ ಕುರಿತು, ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಹಿಜ್‌ರತ್ ಮತ್ತು ಅದರಲ್ಲಿ ಅಡಕವಾಗಿರುವ ನಮಗಿರುವ ಪಾಠ ಮೊದಲಾದುವುಗಳ ಕುರಿತು ಕಾರ್ಯಕ್ರಮಗಳು ಪ್ರಸಾರವಾದುವು.

ಮುಸ್ತಫಾ ಸಾಬಿತ್ ಸಾಹೆಬರ ಕಾರ್ಯಕ್ರಮಗಳು ಜನಪ್ರಿಯವಾದಾಗ ಕ್ರೈಸ್ತರ ವತಿಯಿಂದ ಅನೇಕ ಆಕ್ಷೇಪಗಳು ಕೇಳಿಬರಲು ತೊಡಗಿದವು. ಆದುದರಿಂದ ಅವುಗಳಿಗೆ ಉತ್ತರವನ್ನು ನೇರಪ್ರಸಾರ ಮೂಲಕ ನೀಡಬೇಕೆಂಬ ಸಲಹೆ ಮಾಡಲಾಯಿತು. ಹಝ್ರತ್ ಖಲೀಫತುಲ್ ಮಸೀಹ್‌ರವರು ಇದಕ್ಕೆ ಅನುಮತಿ ನೀಡಿದರು. 2006ರ ಮಾರ್ಚ್ ಮಾಸದಲ್ಲಿ ಈ ಕಾರ್ಯಕ್ರಮವನ್ನು "ಅಲ್‌ಹಿವಾರುಲ್ ಮುಬಾಶಿರ್" ಎಂದು ಹೆಸರಿಸಲಾಯಿತು. ಅಲ್ಲಾಹನ ಅನುಗ್ರಹದಿಂದ ಈ ಕಾರ್ಯಕ್ರಮ ಅಂದಿನಿಂದ ಇಂದಿನವರೆಗೆ ಅತ್ಯಂತ ವಿಜಯಕರವಾಗಿ ಮುಂದುವರಿಯುತ್ತಿದೆ.

ಈ ಕಾರ್ಯಕ್ರಮಗಳ ಹಝ್ರತ್ ಈಸಾ[ಅ] (ಯೇಸುಕ್ರಿಸ್ತರ) ಕುರಿತು ಸಂಶಯಗಳನ್ನು ನಿವಾರಿಸಲು ಬಳಸಲಾಗುತ್ತಿದೆ. ಅವರು ದೇವ ಅಥವಾ ದೇವ

ಸುತನೆಂಬ ವಿಶ್ವಾಸದ ಕುರಿತು, ತ್ರಿತ್ವ ಸಿದ್ಧಾಂತ, ಪಾಪ ಪರಿಹಾರ, ಶಿಲುಬೆಯಿಂದ ಅವರು ರಕ್ಷಿಸಲ್ಪಟ್ಟದ್ದರ ಕುರಿತು, ಪೂರ್ವದೇಶಗಳಿಗೆ ಅವರ ಪ್ರಯಾಣ ಮತ್ತು ಕಾಶ್ಮೀರದಲ್ಲಿ ಅವರ ಸಹಜ ಮರಣ ಮೊದಲಾದುವುಗಳ ಕುರಿತು-ಇಂತಹ ದೊಡ್ಡ ದೊಡ್ಡ ಮತ್ತು ಮುಖ್ಯ ವಿಷಯಗಳ ಕುರಿತು ಸವಿಸ್ತಾರ ಚರ್ಚೆಗಳು ಪ್ರಸಾರಗೊಂಡಿವೆ.

ಕೆಲವು ಸಮಯದ ಹಿಂದೆ ಪೋಪರು ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಘನತೆಯನ್ನು ಧಿಕ್ಕರಿಸುವ ಹೇಳಿಕೆ ನೀಡಿದಾಗ ಅದನ್ನು ಖಂಡಿಸಿ ಮೂರು ಕಾರ್ಯಕ್ರಮಗಳನ್ನು ಪ್ರಸಾರಮಾಡಲಾಯಿತು. ಬೈಬಲಿನಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಆವಿರ್ಭಾವದ ಬಗ್ಗೆ ಇರುವ ಭವಿಷ್ಯವಾಣಿಗಳ ಕುರಿತು ಅನೇಕ ಕಾರ್ಯಕ್ರಮಗಳನ್ನು ಪ್ರಸಾರಮಾಡಲಾಯಿತು.

ಪ್ರತಿ ತಿಂಗಳು ಮೂರು ದಿನಗಳ ಈ ಕಾರ್ಯಕ್ರಮಗಳಿರುತ್ತವೆ. ಒಂದು ದಿನದ ಕಾರ್ಯಕ್ರಮದ ಕಾಲಾವಧಿ 2 ಗಂಟೆಗಳಾಗಿವೆ. ಕಬಾಬೀರ್ ಜಮಾಅತಿನ ಅಧ್ಯಕ್ಷ ಮುಹಮ್ಮದ್ ಶರೀಫ್ ಔದ ಸಾಹೆಬ್ ಕಾರ್ಯಕ್ರಮದ ಅತಿಥೇಯರಾಗಿರುತ್ತಾರೆ. ಮುಸ್ತಫಾ ಸಾಬಿತ್ ಸಾಹೆಬರು ಅವರ ಜೊತೆಗೆ ಗಣ್ಯ ಅತಿಥಿಯಾಗಿ ಭಾಗವಹಿಸುತ್ತಾರೆ. ಅವರಲ್ಲದೆ ಪಾಲೆಸ್ತೀನಿನ ಹಾನೀ ತಾಹಿರ್ ಸಾಹೆಬ್, ಜೋರ್ಡಾನಿನ ತಮೀಮ್ ಅಬೂ ದಖ ಸಾಹೆಬ್, ಈಜಿಪ್ಟಿನ ಫತ್‌ಹೀ ಅಬ್ದುಸ್ಸಲಾಮ್ ಸಾಹೆಬ್ ಮತ್ತು M T A ಅರೆಬಿಕ್ ಡೆಸ್ಕ್‌ನ ಸದಸ್ಯರಾದ ಅಬ್ದುಲ್ ಮೂಮಿನ್ ತಾಹಿರ್ ಸಾಹೆಬ್, ಅಬ್ದುಲ್ ಮಜೀದ್ ಆಮಿರ್ ಸಾಹೆಬ್ ಮತ್ತು ಈ ವಿನೀತ ಮುಹಮ್ಮದ್ ತಾಹಿರ್ ನದೀಮ್ ಭಾಗವಹಿಸುತ್ತಾರೆ.

## ನಮ್ಮ ಕಾರ್ಯವಿಧಾನ

ವಾಸ್ತವಿಕ ಸಂಗತಿಯೇನೆಂದರೆ, ಕ್ರೈಸ್ತರ ಆಕ್ಷೇಪಗಳಿಗೆ ಅಹ್ಮದಿಯಾ ಜಮಾಅತ್ ಹೊರತು ಬೇರೆ ಯಾರೂ ಪ್ರಾಯಶಃ ಉತ್ತರ ನೀಡಲಾರರು. ಇದು ಕೇವಲ ವಾದವಲ್ಲ. ಇದೊಂದು ಬಹಿರಂಗ ಸತ್ಯವಾಗಿದೆ. ಒಬ್ಬ ಕ್ರೈಸ್ತನು "ಇಂತಿಂತಹ ತಫ್ಸೀರ್ ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ" ಎಂದು ಹೇಳಿ ಆಕ್ಷೇಪಿಸಿದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸಲಾಮ್‌ರವರು (ಅಹ್ಮದಿಯಾ ಜಮಾಅತಿನ ಸ್ಥಾಪಕರು) ನಮಗಿತ್ತ ಜ್ಞಾನ ಭಂಡಾರದಿಂದ ಅನುಗ್ರಹ ಪಡೆದ ನಾವು ಹೀಗೆ ಉತ್ತರ ಕೊಡುತ್ತೇವೆ: "ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ನಡೆನುಡಿಗಳಿಗೆ ವಿರುದ್ಧವಾಗಿ ಯಾರಾದರೂ ಬರೆದಿದ್ದರೆ ಆ ವ್ಯಕ್ತಿ ಬರೆದುದು ತಪ್ಪೆಂದು ಸ್ವತಃಸಿದ್ಧವಾಗುತ್ತದೆ. ದೊಡ್ಡ ದೊಡ್ಡ ಮತಪಂಡಿತರಿಗಿಂತ ಅಲ್ಲಾಹನು ಮತ್ತು ಅವನ ಸಂದೇಶವಾಹಕ, ಅಲ್ಲಾಹನ ಗ್ರಂಥ ಮತ್ತು ಅವನ ಧರ್ಮದ ಅಭಿಮಾನ ನಮಗೆ ಪ್ರಿಯಕರವಾಗಿದೆ. ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಉಪದೇಶಗಳಿಗೆ ವಿರುದ್ಧವಾದ ಹೇಳಿಕೆಯನ್ನು ಎಷ್ಟು ದೊಡ್ಡ ಪದವಿ ಪಡೆದ ಮತಪಂಡಿತ ನೀಡಿದರೂ ಅದು ತಪ್ಪು ಮತ್ತು ತಿರಸ್ಕಾರ ಯೋಗ್ಯವಾಗಿರುತ್ತದೆ."

ನಮ್ಮ ನಡೆವಳಿಕೆಗೆ ವಿರುದ್ಧವಾಗಿ ಅಹ್ಮದಿಯೇತರ ಮುಸ್ಲಿಮರು, ಪ್ರಸ್ತಾಪಿತವಾದ ತಫ್ಸೀರ್ ಅಥವಾ ಮತಪಂಡಿತನನ್ನು ಬೆಂಬಲಿಸಿ ಉತ್ತರ ನೀಡುತ್ತಾರೆ. ಇದಕ್ಕೆ ಕಾರಣ ಅವರು ಅದನ್ನು ಅನಸರಿಸುವವರಾಗಿರುತ್ತಾರೆ. ಅಥವಾ ಅದನ್ನು ನಿರಾಕರಿಸಲು ಹಾಗೂ ತಪ್ಪೆಂದು ಹೇಳಲು ಅವರಿಗೆ ಧೈರ್ಯವಿರುವುದಿಲ್ಲ. ಈ ಕಾರಣದಿಂದ ಅವರು ಹೆಚ್ಚು ಕಷ್ಟಕ್ಕೆ ಒಳಗಾಗುತ್ತಾರೆ.

ಕ್ರೈಸ್ತರು ಇಸ್ಲಾಮ್ ಮತ್ತು ಇಸ್ಲಾಮಿನ ಪ್ರವಾದಿಯವರನ್ನು[ಸ] ಆಕ್ಷೇಪಿಸುತ್ತಾರೆ ಮತ್ತು ಹಝ್ರತ್ ಈಸಾರವರನ್ನು[ಅ] ದೇವನೆಂದು ವಾದಿಸುತ್ತಾರೆ. ಅವರು ಮಾಡುವ ವಿವಿಧ ತರ್ಕಗಳಿಗೆ ಉತ್ತರ ನೀಡಲು ಸಾಮಾನ್ಯ ಮುಸ್ಲಿಮರಿಗೆ ಸಾಧ್ಯವಾಗುವುದಿಲ್ಲ. ಏಕೆಂದರೆ ಅಹ್ಮದಿಯೇತರ ಮುಸ್ಲಿಮರಲ್ಲಿ ಬಹುತೇಕ ಜನರು ಹಝ್ರತ್ ಈಸಾರವರ[ಅ] ಕುರಿತು ಅವರು ಆಕಾಶಕ್ಕೆ ಎತ್ತಲ್ಪಟ್ಟರೆಂದು ನಂಬುತ್ತಾರೆ. ಹಝ್ರತ್ ಈಸಾ[ಅ] ದೇವಪುತ್ರನಾಗಿದ್ದರು; ಅವರು ತನ್ನ ಕೆಲಸ ಪೂರ್ಣಗೊಳಿಸಿ ದೇವನ ಬಲಗಡೆ ಕುಳಿತಿದ್ದಾರೆಂಬ ಕ್ರೈಸ್ತರ ಮಿಥ್ಯ ವಿಶ್ವಾಸವನ್ನು ಮುಸ್ಲಿಮರ ನಂಬಿಕೆ ಬಲಪಡಿಸುತ್ತದೆ.

ಇದಕ್ಕೆ ತದ್ವಿರುದ್ಧವಾಗಿ ಹಝ್ರತ್ ಮಸೀಹ್ ಮೌಊದ್ ಹೇಳಿದ "ಈಸಾ[ಅ] ಶಿಲುಬೆಯಲ್ಲಿ ಮೃತರಾಗಲಿಲ್ಲ" ಎಂಬ ಏಕ ವಾಕ್ಯ ಕ್ರೈಸ್ತ ಧರ್ಮದ ಕಟ್ಟಡವನ್ನು ಕೆಡವಿಹಾಕಲು ಸಾಕಷ್ಟು ಶಕ್ತಿಯನ್ನು ಹೊಂದಿದೆ. ಈಸಾ[ಅ] ಶಿಲುಬೆಯಲ್ಲಿ ಮೃತರಾಗಲಿಲ್ಲವಾದರೆ ಅವರು ಯಾರ ಪಾಪಕ್ಕೂ ಪರಿಹಾರವಾಗಲೂ ಇಲ್ಲ.

ವಾಸ್ತವಿಕ ಸಂಗತಿಯೇನೆಂದರೆ, ಈಸಾ[ಅ] ಶಿಲುಬೆಯಲ್ಲಿ ಮೃತರಾಗದೆ ರಕ್ಷಿಸಲ್ಪಟ್ಟರು. ಅನಂತರ ದೀರ್ಘಾಯುಸ್ಸನ್ನು ಪಡೆದು ಮನುಷ್ಯರಿಗೆ ಸಹಜವಾಗಿರುವ ಹಾಗೆ ಮೃತರಾದರು.

ಇದು ಕೇವಲ ಒಂದು ವಾದವಲ್ಲ. ಈ ವಾಸ್ತವಿಕ ವಿಷಯವನ್ನು ಸಾಬೀತುಗೊಳಿಸಲು ನಮ್ಮ ಬಳಿ ಬಲಯುತವಾದ ಸಾಕ್ಷ್ಯಾಧಾರಗಳ ಭಂಡಾರವೇ ಇದೆ. ಈಸಾ[ಅ] ಶಿಲುಬೆಯಲ್ಲಿ ಮೃತರಾಗಿರಲಿಲ್ಲವೆಂದು ಸಾಬೀತಾಗುವಾಗ ಕ್ರೈಸ್ತರು ಸೃಜಿಸಿದ ಈ ಕಥೆ: ವಾರೀಸುದಾರಿಕೆಯ ಪಾಪವು ಕ್ಷಮಿಸಲು ಅಸಾಧ್ಯವಾದುದು; ಅದರ ಪರಿಹಾರಕ್ಕಾಗಿ ದೇವನು ತನ್ನ ಸುತನನ್ನು ಕಳುಹಿಸಿದುದು; ಮತ್ತು ಜನರ ಪಾಪಗಳಿಗೆ ಪರಿಹಾರವಾಗಿ ಆತನು ಶಿಲುಬೆಯಲ್ಲಿ ಮೃತನಾದುದು ಮೊದಲಾದುವು ಸಂಪೂರ್ಣವಾಗಿ ಅವಾಸ್ತವಿಕವೆಂದೂ ನಿರರ್ಥಕ ಕಥೆ ಎಂದೂ ಸಾಬೀತಾಗುವುದು.

ಶಿಲುಬೆಗೆ ಸಂಬಂಧಿಸಿದ ಅವಾಸ್ತವಿಕ ವಿಶ್ವಾಸಗಳನ್ನು ಬಹಿರಂಗಗೊಳಿಸಲು ಆಗಮಿಸಿದ ಹಝ್ರತ್ ಮಸೀಹ್ ಮೌಊದ್[ಅ] ನಮಗೆ ಈ ಕಾಲದಲ್ಲಿ ನೀಡಿದ ಆಯುಧ ಇದೇ ಆಗಿದೆ. ಇಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಪರಿಶುದ್ಧವಾದ ಈ ಊದುವಿಕೆಯಿಂದ ಮಾತ್ರ ಶಿಲುಬೆಯನ್ನು ಮುರಿದುಹಾಕಬಹುದಾಗಿದೆ ಮತ್ತು ಅದು ಈಗ ಮುರಿದು ಬೀಳುತ್ತಾ ಇದೆ.

## ಪಾದರಿ ಝುಕರಿಯಾ ಪಿತ್‌ರಸ್‌ಗೆ ಆಹ್ವಾನ

ಪ್ರಾರಂಭದಲ್ಲಿ ಕೆಲವು ಕ್ರೈಸ್ತರು ಸ್ಪಷ್ಟವಾಗಿ ಮತ್ತು ಕೆಲವರು ಮುಸ್ಲಿಮ್ ಹೆಸರುಗಳನ್ನು ಬಳಸಿಕೊಂಡು ನಮ್ಮೊಂದಿಗೆ ಹೀಗೆ ಹೇಳುತ್ತಿದ್ದರು: ಪಾದರಿ ಝುಕರಿಯಾ, ಮುಸ್ಲಿಮ್ ಮತಪಂಡಿತರು ಬರೆದುದನ್ನು ಉಲ್ಲೇಖಿಸುತ್ತಿದ್ದಾರೆ. ನೀವು ಪಾದರಿ ಎತ್ತಿದ ಪ್ರಶ್ನೆಗಳಿಗೆ ಉತ್ತರ ಕೊಡಿರಿ ಮತ್ತು ಇತರ ಮುಸ್ಲಿಮರು ಮಾಡುವ ಹಾಗೆಯೇ ಮುಸ್ಲಿಮ್ ಮತಪಂಡಿತರು ಬರೆದುದನ್ನು ಬೆಂಬಲಿಸಿ ನಿಮ್ಮ ನಿಲುವನ್ನು ಸ್ಪಷ್ಟಪಡಿಸಿರಿ.

ನಾವು ಪದೇ ಪದೇ ಅವರಿಗೆ ಹೀಗೆ ಹೇಳಿದೆವು: ಮತಪಂಡಿತರ ಅಥವಾ ವ್ಯಾಖ್ಯಾನಗಾರರ ವೈಯುಕ್ತಿಕ ಅಭಿಪ್ರಾಯ ತಪ್ಪಾಗಲು ಸಾಧ್ಯವಿದೆ. ನಾವು ಪವಿತ್ರ ಖುರ್‌ಆನ್‌ಗೆ ಮತ್ತು ಪವಿತ್ರ ಖುರ್‌ಆನ್ ಅವತೀರ್ಣಗೊಳಿಸಲ್ಪಟ್ಟ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಡೆನುಡಿಗಳಿಗೆ ಮಾತ್ರ ಬದ್ಧವಾಗಿದ್ದೇವೆ. ನಾವು ಯಾರದಾದರೂ ತಪ್ಪು ಅಭಿಪ್ರಾಯದ ಬಗ್ಗೆ ಉತ್ತರ ನೀಡಲು ಜವಾಬ್ದಾರರಾಗಲಾರೆವು.

ಕೆಲವು ಕ್ರೈಸ್ತರು ಭಾವಾವೇಶದಿಂದ ಹೀಗೆ ಹೇಳಿದರು: ನೀವು ಧೈರ್ಯಶಾಲಿಗಳಾಗಿದ್ದರೆ ಮತ್ತು ನಿಮ್ಮ ಬಳಿ ಸಮರ್ಪಕವಾದ ಉತ್ತರವಿದ್ದರೆ ಪಾದರಿ ಪಿತ್‌ರಸ್‌ರನ್ನು ನಿಮ್ಮ ಕಾರ್ಯಕ್ರಮಕ್ಕೆ ಆಮಂತ್ರಿಸಿ ಏಕೆ ಮಾತನಾಡಿಸುವುದಿಲ್ಲ?

ನಾವು ಲೋಕದಾದ್ಯಂತ ಇರುವ ಎಲ್ಲಾ ಕ್ರೈಸ್ತರಿಗೆ ಮತ್ತು ವಿಶಿಷ್ಟವಾಗಿ ಪಾದರಿಗಳಿಗೆ ಮತ್ತು ದೊಡ್ಡ ವಿದ್ವಾಂಸರಿಗೆ ನಮ್ಮೊಂದಿಗೆ ಚರ್ಚೆಗೆ ಬರಲು ಆಮಂತ್ರಿಸಿದಾಗ ನಾವು ಪಾದರಿ ಝಕರಿಯಾ ಪಿತ್‌ರಸ್‌ರನ್ನು ಸಹ ಚರ್ಚೆಗೆ ಮುಂದೆ ಬರಲು ಪದೇ ಪದೇ ಆಹ್ವಾನಿಸಿದೆವು. ನಾವು ಟೆಲಿವಿಷನ್ ಮೂಲಕ ನೀಡಿದ ಆಹ್ವಾನಕ್ಕೆ ಪಾದರಿ ಪಿತ್‌ರಸ್ ಉತ್ತರ ನೀಡಲಿಲ್ಲ, ಆಗ ನಾವು ಇ-ಮೇಲ್ ಮೂಲಕ ಒಂದು ಆಹ್ವಾನ ಪತ್ರಿಕೆಯನ್ನು ಪಾದರಿಗೆ ಕಳುಹಿಸಿದಾಗ, "ನಾವು ನಿಮ್ಮ ಆಹ್ವಾನದ ಬಗೆ ಯೋಚಿಸುತ್ತಿದ್ದೇವೆ. ಆದರೆ ನೀವು ಮೊದಲು ನಮಗೆ, ನೀವು ಅಹ್ಲೆ ಸುನ್ನತ್ ಮುಸ್ಲಿಮ್ ವರ್ಗಕ್ಕೆ ಸೇರಿದವರೋ ಅಥವಾ ಶಿಯಾ ಮುಸ್ಲಿಮ್ ವರ್ಗಕ್ಕೆ ಸೇರಿದವರೋ? ಎಂದು ತಿಳಿಸಿರಿ." ಆಗ ನಾವು ನೀಡಿದ ಉತ್ತರ: "ನಾವು ಮುಸ್ಲಿಮರು. ನಾವು ಇಸ್ಲಾಮ್ ಧರ್ಮದ ರಕ್ಷಣೆ ಮಾಡುತ್ತಿದ್ದೇವೆ. ನಿಮಗೆ ಇಸ್ಲಾಮಿನ ಕುರಿತು ಆಕ್ಷೇಪವಿದ್ದರೆ ನಾವು ನಿಮ್ಮ ಆಕ್ಷೇಪಗಳಿಗೆ ಉತ್ತರ ನೀಡುವೆವು" ಎಂದಾಗಿತ್ತು.

ಅನಂತರ ಪಾದರಿ ಪಿತ್‌ರಸ್ ನಮಗೆ ನೇರವಾಗಿ ಉತ್ತರ ನೀಡಲಿಲ್ಲ. ಪಾದರಿ ಪ್ರಸಾರಗೊಳಿಸಿದ ಒಂದು ಟಿಲಿವಿಷನ್ ಕಾರ್ಯಕ್ರಮದಲ್ಲಿ ಹೀಗೆ ಹೇಳಿದರು: "ಅಹ್ಮದಿಯತ್‌ಗೆ ಸೇರಿದವರು ನನ್ನನ್ನು ತಮ್ಮ ಟಿ.ವಿ. ಕಾರ್ಯಕ್ರಮದಲ್ಲಿ ಭಾಗವಹಿಸಲು ಕರೆದಿದ್ದಾರೆ. ಇಸ್ಲಾಮ್ ವಿರುದ್ಧ ನಾನು ಮಾಡುವ ಆಕ್ಷೇಪಗಳಿಗೆ ಅವರು ಉತ್ತರ ಹೇಳ ಬಯಸುತ್ತಾರೆ ಮತ್ತು ಇಸ್ಲಾಮನ್ನು ರಕ್ಷಿಸಲು ಬಯಸುತ್ತಾರೆ. ಆದರೆ ನಾನು ಅವರೊಂದಿಗೆ ಹೀಗೆ ಹೇಳ ಬಯಸುತ್ತೇನೆ: ಅವರು ತಮ್ಮ ಬಗ್ಗೆ ಅಲ್‌ಅಝ್‌ಹರ್‌ನವರೊಂದಿಗೆ ವಿಚಾರಿಸಲಿ. ಅಲ್ ಅಝ್‌ಹರ್‌ನವರ ಫತ್ವ ಪ್ರಕಾರ ಅಹ್ಮದಿಯರು ಮುಸ್ಲಿಮರೇ ಅಲ್ಲ....."

ಅಹ್ಮದಿಯರಾದ ನಾವು ಇಂತಹ ಮಾತುಗಳನ್ನು ಎಷ್ಟೋ ಕೇಳಿದ್ದೇವೆ. ಆದರೆ ನಮ್ಮೊಂದಿಗೆ ಸಹಮತವನ್ನು ಹೊಂದಿದ ಅಹ್ಮದಿಯೇತರ ಮುಸ್ಲಿಮರಿಗೆ ನಿಶ್ಚಯವಾಗಿ ಈ ವಿಷಯ ಆಶ್ಚರ್ಯದಾಯಕವಾಗಬಲ್ಲದು. ಅವರು ಹೀಗೆ ಖಂಡಿತವಾಗಿಯೂ ಯೋಚಿಸಿರಬಹುದು: ಕ್ರೈಸ್ತ ಧರ್ಮದ ವಿರುದ್ಧ ಹೋರಾಡಲು ಕೇವಲ ಒಂದೇ ಒಂದು ಜಮಾಅತ್ ರಣರಂಗದಲ್ಲಿ ಹೋರಾಟ ಮಾಡುವ ಸೈನಿಕನಂತೆ ಎದ್ದು ನಿಂತಿರುವಾಗ ಇಸ್ಲಾಮಿಕ ಜಗತ್ತು ತನ್ನೆಲ್ಲಾ ಶಕ್ತಿ ಪ್ರಯೋಗಿಸಿ ಇಸ್ಲಾಮಿನ ವಲಯದಿಂದ ಅದನ್ನು ಹೊರಹಾಕಲು ಪ್ರಯತ್ನಿಸುತ್ತಾ ಇದೆ. ಇಸ್ಲಾಮೀ ಲೋಕ, ಮುಸ್ಲಿಮ್ ಸರಕಾರಗಳು, ಸಂಘಟನೆಗಳು, ಮದ್‌ರಸಗಳು, ಮತಪಂಡಿತರು ಮತ್ತು ಇತರ ಗಣ್ಯರು ಈ ಕ್ಷೇತ್ರದಲ್ಲಿ ದೂರ ದೂರದಲ್ಲಿ ಸಹ ಕಾಣಿಸಿಕೊಳ್ಳುತ್ತಾ ಇಲ್ಲ. ಈ ಸ್ಥಿತಿಯಲ್ಲಿ ಈ ಪದ್ಯ ನೆನಪಿಗೆ ಬರುತ್ತದೆ:

*ಉಠ್‌ಕೆ ಏಕ್ 'ಬೇ ವಫಾನೆ ದೇ ದೀ ಜಾನ್*
*ರಹ್‌ಗಯೇ ಸಾರೇ 'ಬಾ ವಫಾ ಬೈಠೆ.*

(ಎದ್ದು ನಿಂತು 'ನಿಷ್ಠಾಹೀನನು' ತನ್ನ ಜೀವವನ್ನು ಕೊಟ್ಟನು. ಎಲ್ಲಾ 'ನಿಷ್ಠಾವಂತರು' ಕುಳಿತುಕೊಂಡೇ ಇದ್ದರು.)

ನೀವು ಯಾರನ್ನಾದರೂ ನಿಷ್ಠಾಹೀನರೆಂದು ಕರೆದುದರ ಕಾರಣದಿಂದ ಅವರು ನಿಷ್ಠಾಹೀನರಾಗಲಾರರು. ನೀವು ಯಾರಾದರೂ ನಿಜವಾದ ಸ್ಥಿತಿ ತಿಳಿಯಲು ಬಯಸುವಿರಾದರೆ ಅವರ ಕೆಲಸವನ್ನು ನೋಡಿರಿ. ತನ್ನ ಜೀವವನ್ನು ಅರ್ಪಿಸಲು ಸಿದ್ಧನಾಗುವವನೇ ನಿಷ್ಠಾವಂತನು. ನಾಮ ಮಾತ್ರ ನಿಷ್ಠಾವಂತರು ತ್ಯಾಗದ ಸಂದರ್ಭ ಬಂದಾಗ ಸುಮ್ಮನೆ ಕುಳಿತುಕೊಳ್ಳುವವರಾದರೆ ಅವರೇ ನಿಜವಾಗಿಯೂ ನಿಷ್ಠಾಹೀನರೆಂದು ತಿಳಿದುಕೊಳ್ಳಿರಿ. ಇದೇ ವಿಷಯ ಇಲ್ಲಿಯೂ ಸತ್ಯವೆಂದು ಸಾಬೀತಾಗುತ್ತದೆ

## ನಮ್ಮ ಕಾರ್ಯಕ್ರಮಗಳ ಪರಿಶುದ್ಧ ಪ್ರಭಾವ

ನಮ್ಮ ಕಾರ್ಯಕ್ರಮಗಳಿಂದ ಕ್ರೈಸ್ತರು ನಿದ್ರೆಗೆಡುವಂತೆ ಆಗಿರುವಾಗ ನಾವು ಇಸ್ಲಾಮ್ ಮತ್ತು ಇಸ್ಲಾಮಿನ ಪ್ರವಾದಿಯವರನ್ನು(ಸ) ಬೆಂಬಲಿಸಿ ಆಕ್ಷೇಪಗಳಿಗೆ ಉತ್ತರ ನೀಡಿದುದರಿಂದ ಮುಸ್ಲಿಮರ ಹೃದಯಗಳು ತಂಪಾಗುವಂತೆಯೂ ಆಯಿತು.

ಕ್ರೈಸ್ತರು ಸಹ ನಮ್ಮ ಕಾರ್ಯಕ್ರಮದ ರೀತಿ ನೀತಿಗಳನ್ನು ಮೆಚ್ಚಿದರು. "ಕ್ರೈಸ್ತ ಧರ್ಮವನ್ನು ಖಂಡಿಸಿ ಇಷ್ಟು ಸಭ್ಯ ರೀತಿಯಲ್ಲಿ ಇದರ ಮೊದಲು ಯಾರೂ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿರಲಿಲ್ಲ" ಎಂದು ಅವರು ಹೇಳಿದರು. ಅರಬ್ ದೇಶಗಳಿಂದ ಮಾತ್ರವಲ್ಲ ಲೋಕದ ಎಲ್ಲಾ ಕಡೆಗಳಿಂದಲೂ ವಿವಿಧ ದೇಶಗಳಿಂದಲೂ ಫೋನ್ ಕರೆಗಳು ಲಭಿಸುತ್ತಾ ಇರುತ್ತವೆ. ಆದರೆ ಸಮಯದ ಕೊರತೆಯ ಕಾರಣದಿಂದ ಇಪ್ಪತ್ತರಿಂದ ಇಪ್ಪತ್ತೈದು ಜನರ ಕರೆಗಳಿಗೆ ಮಾತ್ರ ಪ್ರತಿ ಕಾರ್ಯಕ್ರಮದಲ್ಲಿ ಉತ್ತರ ನೀಡಲು ಸಾಧ್ಯವಾಗುತ್ತಿದೆ.

ಈ ಕಾರ್ಯಕ್ರಮದಲ್ಲಿ ಈಜಿಪ್ಟಿನ ಒಬ್ಬ ಪ್ರಸಿದ್ಧ ಪಾದರಿ ಅಬ್ದುಲ್ ಮಸೀಹ್ ಜೊತೆ ಅನೇಕ ದಿನಗಳ ತನಕ ವಾದ ವಿವಾದದ ರೀತಿಯಲ್ಲಿ ಚರ್ಚೆ ನಡೆಸಲಾಯಿತು. ಕೊನೆಗೆ ಸಾಕ್ಷ್ಯಾಧಾರಗಳಿಗೆ ಉತ್ತರ ನೀಡಲು ಆ ಪಾದರಿಗೆ ಸಾಧ್ಯವಾಗದೆ ಚರ್ಚೆಯಿಂದ ದೂರಸರಿಯಲು ಎದ್ದು ನಿಂತಾಗ ಅವರು ಹೀಗೆ ಹೇಳಿದರು: "ಇನ್ನು ಮುಂದೆ ನಿಮ್ಮೊಂದಿಗೆ ನಾನು ಮಾತನಾಡಲಾರೆನು. ನಾನು ನನ್ನ ಅನುಯಾಯಿಗಳೊಂದಿಗೆ ಸಹ, ಅವರು ಈ ಟಿ.ವಿ. ಕಾರ್ಯಕ್ರಮವನ್ನು ವೀಕ್ಷಿಸಬಾರದೆಂದು ಹೇಳುವೆನು."

ಇದೇ ರೀತಿ ಜೆರುಸಲೇಮಿನ ಒಬ್ಬ ಪಾದರಿ ಪೀಟರ್ ಮದ್‌ರೂಸ್‌ರೊಂದಿಗೆ ಅನೇಕ ಕಾರ್ಯಕ್ರಮಗಳಲ್ಲಿ ಚರ್ಚೆ ಮಾಡಲಾಯಿತು. ಆ ಕಾರ್ಯಕ್ರಮ ವೀಕ್ಷಿಸಿದವರು, ಪಾದರಿಯು ತನ್ನ ಮಾತುಗಳಿಗೆ ಯಾವುದೇ ಸಾಕ್ಷ್ಯಾಧಾರ ನೀಡಿಲ್ಲವೆಂದೂ ಇಂತಿಂತಹ ವಿಷಯಕ್ಕೆ ಸಂಬಂಧಿಸಿ ಪಾದರಿಯ ಬಳಿ ಯಾವುದೇ ಉತ್ತರವಿರಲಿಲ್ಲವೆಂದೂ ಸ್ಪಷ್ಟವಾಗಿ ಹೇಳಿದರು.

2006 ನವೆಂಬರ್‌ನಲ್ಲಿ ಪ್ರಸಾರಗೊಳಿಸಲಾದ ಒಂದು ಟಿ.ವಿ. ಕಾರ್ಯಕ್ರಮದಲ್ಲಿ ಪಾದರಿ ಮದ್‌ರೂಸ್ ಒಂದು ಪ್ರಶ್ನೆಗೆ ಉತ್ತರವಾಗಿ ಹೀಗೆ ಹೇಳಿದರು: "ಈ ಪ್ರಶ್ನೆಗೆ ಉತ್ತರ ಕೊಡುವ ಯೋಗ್ಯತೆ ನನಗಿಲ್ಲ." ಒಂದು ರೀತಿಯಲ್ಲಿ ಈ ಪಾದರಿ ತನ್ನ ಸೋಲನ್ನು ಬಹಿರಂಗವಾಗಿ ಒಪ್ಪಿಕೊಂಡಂತೆ ಆಯಿತು.

2007ರ ಫೆಬ್ರವರಿಯಲ್ಲಿ ಪಾದರಿ ಪೀಟರ್ ಮದ್‌ರೂಸ್ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಚಡಪಡಿಸಿದಾಗ, ಪಾದರಿ ಅಬ್ದುಲ್ ಮಸೀಹ್ ಫೋನ್ ಮಾಡಿದರು. ಈ ಅಬ್ದುಲ್ ಮಸೀಹ್, "ನಾನು ಇನ್ನು ಮುಂದೆ ನಿಮ್ಮ ಕಾರ್ಯಕ್ರಮಗಳನ್ನು ನೋಡಲಾರೆನು ಮತ್ತು ಕ್ರೈಸ್ತರು ಸಹ ನೋಡಬಾರದೆಂದು ಅವರೊಡನೆ ಹೇಳುವೆನು" ಎಂದು ಹೇಳಿದ ವ್ಯಕ್ತಿಯಾಗಿದ್ದರು. ಪಾದರಿ ಅಬ್ದುಲ್ ಮಸೀಹ್‌ರು ಪಾದರಿ ಪೀಟರ್ ಮದ್‌ರೂಸ್‌ರನ್ನು ಕಷ್ಟದಿಂದ ಪಾರು ಮಾಡಲು ಪ್ರಯತ್ನ ಮಾಡಿದರಾದರೂ ಅವರಿಗೆ ಅದು ಸಾಧ್ಯವಾಗಲಿಲ್ಲ. ಪಾದರಿ ಅಬ್ದುಲ್ ಮಸೀಹ್ ನಮ್ಮ ಕಾರ್ಯಕ್ರಮಗಳನ್ನು ನೋಡುತ್ತಾ ಇದ್ದರೆಂದು ಈ ಮೂಲಕ ತಿಳಿಯಿತು. ಈ ಸಂದರ್ಭದಲ್ಲಿ ಅವರು ಪೀಟರ್ ಮದ್‌ರೂಸ್‌ರಿಗೆ ಸಹಾಯ ಮಾಡಲು ಮುಂದೆ ಬಂದರು. ಆದರೆ ನಮ್ಮ ಪ್ರಶ್ನೆಗಳಿಗೆ ಅವರ ಬಳಿ ಯಾವ ಉತ್ತರವೂ ಇರಲಿಲ್ಲವೆಂದೂ ನಮ್ಮ ಸಾಕ್ಷ್ಯಾಧಾರಗಳನ್ನು ಖಂಡಿಸಲು ಅವರಿಗೆ ಸಾಧ್ಯವಾಗಲಿಲ್ಲವೆಂದೂ ಎಲ್ಲಾ ವೀಕ್ಷಕರು ಸಾಕ್ಷ್ಯ ನೀಡಿದರು.

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್‌ರವರು ನಮ್ಮ ಕಾರ್ಯಕ್ರಮಗಳ ಕುರಿತು 2006ರ ಲಂಡನ್ ಜಲ್ಸಾದಲ್ಲಿ (ಸಮ್ಮೇಳನದಲ್ಲಿ) ಹೀಗೆ ಹೇಳಿದರು:

"ಒಬ್ಬ ಕ್ರೈಸ್ತ ಪಾದರಿ ಒಂದು ಅರಬಿ ಟಿ.ವಿ. ಚ್ಯಾನೆಲ್‌ನಲ್ಲಿ ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧ ಆಕ್ಷೇಪಗಳನ್ನು ಮಾಡಿ, ಯಾರ ಬಳಿಯಾದರೂ ಇದಕ್ಕೆ ಉತ್ತರವಿದ್ದರೆ ಮುಂದೆ ಬನ್ನಿರಿ, ಎಂದು ಪಂಥಾಹ್ವಾನ ನೀಡಿದರು. ಪಾದರಿಯ ಈ ಆಹ್ವಾನಕ್ಕೆ ಸಮರ್ಪಕವಾಗಿ ಉತ್ತರ ನೀಡಿ ಪಾದರಿಯ ಬಾಯಿಯನ್ನು ಮುಚ್ಚಿಸುವ ಸೌಭಾಗ್ಯವನ್ನು ಅಲ್ಲಾಹನು ಮುಸ್ತಫಾ ಸಾಬಿತ್ ಸಾಹೆಬರಿಗೆ ದಯಪಾಲಿಸಿದನು. ಅವರ ಉತ್ತರಗಳನ್ನು ರೆಕಾರ್ಡ್ ಮಾಡಲಾಗಿದೆ. MTAದಲ್ಲಿ ಒಂದಕ್ಕಿಂತ ಹೆಚ್ಚು ಸಲ ಅದನ್ನು ಪ್ರಸಾರಮಾಡಲಾಗಿದೆ. ಈ ಉತ್ತರಗಳು ಪುಸ್ತಕ ರೂಪದಲ್ಲಿ 'ಅಜ್‌ವಿಬತು ಅನಿಲ್‌ಈಮಾನ್' ಎಂಬ ಹೆಸರಲ್ಲಿ ಪ್ರಕಟವಾಗಿದೆ. ಇದಕ್ಕೆ ಮೊದಲು ಅರಬ್ ದೇಶದ ಮುಸ್ಲಿಮರು ಪಾದರಿಯ ಆಕ್ಷೇಪಗಳಿಗೆ ಉತ್ತರ ನೀಡಲು ಅಲ್‌ಅಝ್‌ಹರ್ ಎಂಬ ಈಜಿಪ್ಟಿನ ದೊಡ್ಡ ಮುಸ್ಲಿಮ್ ವಿಶ್ವವಿದ್ಯಾಲಯದ ಮೇಲೆ ಬಹಳ ಒತ್ತಡ ಹೇರಿದ್ದರು. ಆದರೆ ಅಲ್‌ಅಝ್‌ಹರ್‌ನವರು ಯಾವುದೇ ಉತ್ತರ ನೀಡಲು ಮುಂದಾಗಲಿಲ್ಲ. ಮುಸ್ತಫಾ ಸಾಬಿತ್ ಸಾಹೆಬರು ಪ್ರಶ್ನೆಗಳಿಗೆ ಖಂಡನೆಯನ್ನು ಬರೆದಾಗ ಅಲ್‌ಅಝ್‌ಹರ್‌ನವರು ಈ ಉತ್ತರಗಳನ್ನು ತಮ್ಮ ರೂಢಿಯ ಉತ್ತರದ ರೂಪದಲ್ಲಿ ತಮ್ಮ ಪತ್ರಿಕೆಯಲ್ಲಿ ಕಂತುಗಳಲ್ಲಿ ಪ್ರಕಟಿಸುತ್ತಾ ಇದ್ದಾರೆ. ಇದು ಇಂಟರ್‌ನೆಟ್‌ನಲ್ಲಿಯೂ ಬಂದಿದೆ.

ಕ್ರೈಸ್ತರ ಆಕ್ಷೇಪಗಳಿಗೆ ಉತ್ತರ ನೀಡುವ ಅಭಿಯಾನವನ್ನು ಬಿಡದೆ ಮುಂದುವರಿಸಲಿಕ್ಕಾಗಿ ಅರಬಿ ಭಾಷೆಯಲ್ಲಿ ಪ್ರತಿ ತಿಂಗಳು ಮೂರು ಕಾರ್ಯಕ್ರಮಗಳನ್ನು M T Aದಲ್ಲಿ ನೇರಪ್ರಸಾರ ಮಾಡಲಾಗುತ್ತಿದೆ. ಅಲ್ಲಾಹನ ಅನುಗ್ರಹದಿಂದ ಈ ಕಾರ್ಯಕ್ರಮಗಳಿಂದ ಉತ್ತಮ ಪ್ರಭಾವ ಉಂಟಾಗಿದೆ. ಸಾವಿರಾರು ಇ-ಮೇಲ್‌ಗಳು ಬರುತ್ತಾ ಇವೆ. ಜನರು ಬಹಳ ಭಾವಾವೇಶದಿಂದ ಈ ಕಾರ್ಯಕ್ರಮಗಳನ್ನು ಮೆಚ್ಚುತ್ತಾ ಇದ್ದಾರೆ. ಅವರು ರೆಕಾರ್ಡ್ ಮಾಡಿ ಇತರರಿಗೂ ಹಂಚುತ್ತಿದ್ದಾರೆ. ಈ ಕಾರ್ಯಕ್ರಮ 'ಅಲ್‌ಹಿವಾರುಲ್ ಮುಬಾಶಿರ್' ಎಂಬ ಹೆಸರಲ್ಲಿ ಪ್ರಸಾರವಾಗುತ್ತಿದೆ.

ಒಬ್ಬ ಅಹ್ಮದಿಯೇತರ ಸ್ನೇಹಿತರಾದ ನಾಸಿರ್ ಅಲಿ ಸಾಲಿಹ್ ಸಾಹೆಬ್ ಹೀಗೆ ನನಗೆ ಬರೆದಿದ್ದಾರೆ:

'ಅಲ್ಲಾಹನು ತಮಗೆ ಅತ್ಯುತ್ತಮ ಪ್ರತಿಫಲವನ್ನು ದಯಪಾಲಿಸಲಿ. ನೀವು ಇಸ್ಲಾಮ್ ಮತ್ತು ಮುಸ್ಲಿಮರ ಸೇವೆ ಮತ್ತು ರಕ್ಷಣೆ ಮಾಡಿದಿರಿ. ಕ್ರೈಸ್ತರ ಆಕ್ಷೇಪಗಳಿಗೆ ಉತ್ತರ ನೀಡಿ ನಮ್ಮ ಪ್ರಿಯ ಧರ್ಮದ ಸರಿಯಾದ ವಿವರಣೆ ನೀಡಿದಿರಿ. ಇಂತಹ ಕಾರ್ಯಕ್ರಮಗಳನ್ನು ಇನ್ನಷ್ಟು ಹೆಚ್ಚಿಗೆ ಪ್ರಸಾರ ಮಾಡಿರಿ. MTAದಲ್ಲಿ ಇದಕ್ಕಾಗಿ ಹೆಚ್ಚಿನ ಕಾಲ ನಿಗದಿಪಡಿಸಿರಿ. ನೀವು ಈ ಕೆಲಸ ಬೇಗನೆ ಮಾಡಿರಿ. ಇಸ್ಲಾಮ್ ಮತ್ತು ಪ್ರವಾದಿಯವರ(ಸ) ಸತ್ಯವು ಲೋಕಕ್ಕೆ ಸಾಬೀತಾಗಲಿ.'

ಸೌದಿ ಅರೇಬಿಯಾದಿಂದ ಒಬ್ಬ ಅಹ್ಮದಿಯೇತರ ಮಹಿಳೆ ಈ ಕಾರ್ಯಕ್ರಮ ಜಾರಿಯಲ್ಲಿದ್ದಾಗ ಮಧ್ಯದಲ್ಲಿ ಫೋನ್ ಮಾಡಿ ಹೇಳಿದರು:

'ನಾನು ಪ್ರತಿದಿನ ತಹಜ್ಜುದ್ ನಮಾಝ್ ಮಾಡುವಾಗ ಅತ್ತುಕೊಂಡು ದೇವನ ಸನ್ನಿಧಿಯಲ್ಲಿ ಅರಿಕೆ ಮಾಡುತ್ತಾ ಇದ್ದೆನು: ಓ ಅಲ್ಲಾಹ್, ನಾವು ಬಲಹೀನರಾಗಿರುವುದು ಸತ್ಯವಾಗಿದೆ. ನಾವು ಧಾರ್ಮಿಕ ಕರ್ಮಗಳನ್ನು ಅನುಷ್ಠಾನ ಮಾಡುವವರಾಗಿಲ್ಲ ಎಂಬುದು ಸಹ ಸತ್ಯವಾಗಿದೆ. ಆದರೆ ನಿನ್ನ ಪ್ರವಾದಿಯವರ(ಸ) ಗೌರವದ ಪ್ರಶ್ನೆ ಈಗ ಎದುರಾಗಿದೆ. ಈ ಪಾದರಿಯ ಬಾಯಿಮುಚ್ಚಿಸಬಲ್ಲ ಒಬ್ಬನೇ ಒಬ್ಬ ಮುಸ್ಲಿಂ ವಿದ್ವಾಂಸನು ಕೂಡ ಈಗ ಬಾಕಿಯಾಗಿ ಉಳಿದಿಲ್ಲವೇ? ಇಂದು ಅಲ್‌ಹಿವಾರುಲ್ ಮುಬಾಶಿರ್‌ನಲ್ಲಿ ಪಾದರಿಯ ಆಕ್ಷೇಪಗಳಿಗಿರುವ ಉತ್ತರಗಳನ್ನು ಕೇಳಿ ನನ್ನ ಸ್ಥಿತಿಯು ವಿಸ್ಮಯಕರವಾಗಿದೆ. ನಿಶ್ಚಯವಾಗಿಯೂ ನನ್ನ ದೇವನು ನಾನು ತಹಜ್ಜುದ್ ನಮಾಝ್‌ನಲ್ಲಿ ಮಾಡಿದ ಪ್ರಾರ್ಥನೆಗಳನ್ನು ಆಲಿಸಿರುವನು. ಅಲ್ಲಾಹನು ತಮ್ಮ ಜೊತೆಗಿರಲಿ.'

ದುಬೈಯಿಂದ ಒಬ್ಬ ವ್ಯಕ್ತಿ ಈ ಕಾರ್ಯಕ್ರಮದ ಮಧ್ಯೆ ಹೇಳಿದರು: 'ಕ್ರೈಸ್ತರು ಇಸ್ಲಾಮ್ ಧರ್ಮದ ಮೇಲೆ ಆಕ್ಷೇಪಗಳಿಂದ ಆಕ್ರಮಣ ಮಾಡಿ, ಯಾವುದೇ ಅರಬಿ ಚ್ಯಾನೆಲ್ ಈ ಆಕ್ಷೇಪಗಳಿಗೆ ಉತ್ತರ ನೀಡಲು ಅನುಮತಿಸದು ಎಂದು ಭಾವಿಸಿದ್ದರು. ಆದರೆ ಅವರ ಪ್ರತೀಕ್ಷೆಗಳಿಗೆ ವಿಪರೀತವಾಗಿ MTA ಅವರ ಆಕ್ಷೇಪಗಳಿಗೆ ಉತ್ತರ ನೀಡಲು ಮುಂದೆ ಬಂದಿದೆ.'

ಈ ಕಾರ್ಯಕ್ರಮಗಳನ್ನು ವೀಕ್ಷಿಸಿ ತಮ್ಮ ಕಣ್ಣುಗಳು ಆನಂದಾಶ್ರುಭರಿತವಾದುವು ಎಂದು ಅನೇಕ ಮುಸ್ಲಿಮರು ನಮಗೆ ಬರೆದಿದ್ದಾರೆ.

ಒಬ್ಬರು ಹೇಳಿದರು: 'ಅಲ್ಲಾಹನಾಣೆ, ನೀವು ನಮಗೆ ಸಹಾಯ ಮಾಡಲು ಬಂದಿದ್ದೀರಿ. ಅಲ್ಲಾಹನು ನಿಮಗೆ ಸಹಾಯ ಮತ್ತು ಮಾರ್ಗದರ್ಶನ ನೀಡಲಿ. ನಾವು ನಿಮ್ಮ ಜೊತೆಗಿದ್ದೇವೆ.'

ಇನ್ನೊಬ್ಬರು ಹೀಗೆ ಬರೆದರು: 'ನೀವು ಪವಿತ್ರ ಖುರ್‌ಆನ್‌ಗೆ ನೀಡುವ ವ್ಯಾಖ್ಯಾನದ ರೀತಿ ನಮಗೆ ಬಹಳ ಇಷ್ಟಕರವಾಗುತ್ತದೆ.'

ಅಲ್ಲಾಹನ ಅನುಗ್ರಹದಿಂದ ಅರಬ್ ಲೋಕದಲ್ಲಿ ಈ ಮೂಲಕ ಅಹ್ಮದಿಯತ್ ಬಗ್ಗೆ ಹೆಚ್ಚಿನ ಪರಿಚಯವಾಗಿದೆ. ಇಸ್ಲಾಮ್ ಧರ್ಮಕ್ಕೆ ಕೆಟ್ಟ ಹೆಸರು ತರಲು ಪಾದರಿ ಮಾಡಿದ ಪ್ರಯತ್ನದ ಕಾರಣದಿಂದ ಅಲ್ಲಾಹನು ನಮಗೆ ಪ್ರಚಾರದ ಮಾರ್ಗಗಳನ್ನು ತೆರೆದಿರುವನು.

ಬೈಬಲಿನ ಪಂಡಿತರಾದ ಅಬ್ದುಸ್ಸಲಾಮ್ ಮುಹಮ್ಮದ್ ಎಂಬವರು ಹೇಳುತ್ತಾರೆ: 'ಈ ವಿಜಯಕರ ಕಾರ್ಯಕ್ರಮಕ್ಕಾಗಿ ನಾನು ನಿಮಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಈ ಕಾರ್ಯಕ್ರಮವು ಬಹಳ ಪ್ರಭಾವಶಾಲಿ; ಮಾತುಕತೆ ಬಹಳ ಉಚ್ಚಮಟ್ಟದ್ದು; ವಿವರಣೆ ನೀಡುವುದು ಅತ್ಯಂತ ಸಭ್ಯ ರೀತಿಯಲ್ಲಿ. ಅಲ್ಲಾಹನು ತಮಗೆ ಸಂತೋಷವನ್ನು ದಯಪಾಲಿಸಲಿ. ಬಹಳ ಗೌರವ ನೀಡಲಿ. ಏಕೆಂದರೆ, ನೀವು ಇಸ್ಲಾಮಿನ ವಿರುದ್ಧ ಇರುವ ಶಂಕೆಗಳನ್ನು ನಿವಾರಣೆ ಮಾಡಿ ನಮ್ಮ ಹೃದಯಗಳನ್ನು ಸಂತೋಷಪಡಿಸಿರುವಿರಿ. ನಮ್ಮ ಪುತ್ರರೂ ಪುತ್ರಿಯರೂ ಸಂತೋಷ ಮತ್ತು ಅಭಿಮಾನದಿಂದ ಪುನಃ ಮುಗುಳ್ನಗಲು ಪ್ರಾರಂಭಿಸಿರುವರು.'

ಅವರು ಪುನಃ ಬರೆಯುತ್ತಾರೆ:

'ಇತರ ಅರಬಿ ಟಿ.ವಿ. ಚ್ಯಾನೆಲ್‌ಗಳು ಜ್ಞಾನ ಸಂಬಂಧವಾಗಿ ಮತ್ತು ವೈಚಾರಿಕವಾಗಿ ಬಹಳ ಕೀಳುಮಟ್ಟದ್ದಾಗಿರುವುದು ಖೇದಕರವಾಗಿದೆ. ಅಪಮಾನ ಮತ್ತು ಭಯ ಅವುಗಳನ್ನು ಸುತ್ತುವರಿದಿವೆ. ಅವರ ಇಸ್ಲಾಮ್ ಧರ್ಮವು, ಗಡ್ಡ, ಪರದೆ, ಜಿನ್ನ್, ಭೂತ, ಮಾಟ ಮಂತ್ರಗಳಂತಹ ಉಪಪ್ರಶ್ನೆಗಳಿಗೆ ಸೀಮಿತವಾಗಿದೆ. ಈ ವಿಷಯಗಳಲ್ಲಿ ಈ ಜನರು ಒಬ್ಬರು ಇನ್ನೊಬ್ಬರ ನಿಲುವಿಗೆ ವಿರುದ್ಧವಾದ ಫತ್ವ (ಧಾರ್ಮಿಕ ತೀರ್ಪು) ನೀಡುತ್ತಾರೆ ಮತ್ತು ಮುಸ್ಲಿಮ್ ಸಮುದಾಯವನ್ನು ಇನ್ನಷ್ಟು ವಿಭಜಿಸುತ್ತಿದ್ದಾರೆ.'

ಅಲ್ಜೀರಿಯರ್ಸ್‌ನಿಂದ ಒಬ್ಬರು ಸ್ನೇಹಿತರು ಬರೆದರು:

'ನಾನು ಈ ಕಾರ್ಯಕ್ರಮಗಳನ್ನು ರಿಕಾರ್ಡ್ ಮಾಡಿ ಹಂಚುತ್ತಿದ್ದೇನೆ. ಕ್ರೈಸ್ತ ಧರ್ಮದ ವಿರುದ್ಧ ಹೋರಾಡಲಿಕ್ಕೆ ಶಸ್ತ್ರಸಜ್ಜಿತರಾಗಲು ಹೀಗೆ ಮಾಡುತ್ತಿದ್ದೇನೆ.'

ಒಬ್ಬ ಅಹ್ಮದಿಯೇತರ ವೃದ್ಧರು ಕಾರ್ಯಕ್ರಮದ ಮಧ್ಯೆ ಫೋನ್‌ನಲ್ಲಿ ಹೇಳಿದರು:

'ನಾನು ನಿಮ್ಮ ವಿರುದ್ಧ ಬಹಳ ಓದಿರುವೆನು. ಆದರೆ ಈ ದಿನ ನಾನು ಎಲ್ಲರ ಮುಂದೆ ಹೇಳುತ್ತೇನೆ: ಲೋಕದ ಜನರು ಅವರಿಗಿಷ್ಟ ಬಂದಂತೆ ಹೇಳುತ್ತಾ ಹೋಗಲಿ. ನಿಜವಾದ ಇಸ್ಲಾಮ್ ಇದೇ ಇಸ್ಲಾಮ್ ಆಗಿದೆ. ನಿಜವಾದ ಮುಸ್ಲಿಮರು ಈ ಜಮಾಅತ್‌ಗೆ ಸೇರಿದವರಾಗಿದ್ದಾರೆ.'

ಅಯರ್ಲೇಂಡ್‌ನಿಂದ ಒಬ್ಬ ಇರಾಖಿ ಅರಬಿ ಹೇಳಿದರು:

'ನನ್ನ ಪತ್ನಿ ಅಯರ್ಲೇಂಡ್‌ನವಳು. ಆಕೆಯ ತಾಯಿ ಕ್ರೈಸ್ತ ಸನ್ಯಾಸಿನಿ. ನಾನು ಒಂದು ದಿನ ಈ ಕಾರ್ಯಕ್ರಮವನ್ನು ಭಾಷಾಂತರಿಸಿ ಆಕೆಗೆ ಹೇಳುತ್ತಾ ಇದ್ದೆನು. ಆಕೆ ಹೇಳಿದರು: ನಾನು ಮುಸಲ್ಮಾನಳಾಗಲಾರೆ. ಆದರೆ ಈ ದಿನದಿಂದ ನಾನು ದೇವನೊಬ್ಬನೇ ಎಂದು ನಂಬುತ್ತೇನೆ.'

ಈ ಕಾರ್ಯಕ್ರಮದಲ್ಲಿ ಈಜಿಪ್ಟಿನ ಬಹಳ ಪ್ರಸಿದ್ಧ ಪಾದರಿ ಅಬ್ದುಲ್ ಮಸೀಹ್‌ರೊಂದಿಗೆ ಹಲವು ದಿನ ವಾದ ವಿವಾದಗಳ ರೀತಿಯಲ್ಲಿ ಪ್ರತಿ ಸಲ ಒಂದು ಗಂಟೆಗಿಂತಲೂ ಹೆಚ್ಚಿನ ಕಾಲ ನಿರಂತರವಾಗಿ ಚರ್ಚೆ ನಡೆಸಲಾಯಿತು. ಈ ಪಾದರಿ ಹಲವು ಗ್ರಂಥಗಳನ್ನೂ ಬರೆದಿದ್ದಾರೆ. ಈಜಿಪ್ಟ್‌ನಲ್ಲಿ ಕ್ರೈಸ್ತ ಧರ್ಮ ಪ್ರಚಾರ ಮಾಡುವುದರಲ್ಲಿ ಅವರು ಪ್ರಸಿದ್ಧರಾಗಿದ್ದಾರೆ. ಈ ಪಾದರಿಗೆ ಇಸ್ಲಾಮ್ ಧರ್ಮದ ಸತ್ಯತೆ ಬಗ್ಗೆ ಸಾಕ್ಷ್ಯಾಧಾರ ಒದಗಿಸುವ ಭಾಗ್ಯ ನಮಗೆ ಅಲ್ಲಾಹನು ದಯಪಾಲಿಸಿದನು. ಅನೇಕ ಕ್ರೈಸ್ತರು ಭಾವೋದ್ವೇಗದಿಂದ ಫೋನ್ ಮಾಡಿದರು. ಪಾದರಿಗೆ ಉತ್ತರ ನೀಡುವ ರೀತಿ ಗೊತ್ತಿಲ್ಲ ಎಂದು ಕೆಲವರು ಹೇಳಿದರು. ಈ ಪಾದರಿ ಕೊನೆಗೆ ನಿರುತ್ತರರಾದರು ಮತ್ತು ಓಡಿಹೋಗಲಿಕ್ಕಾಗಿ ಹೇಳಿದರು: 'ನಾನು ಇನ್ನು ಮುಂದೆ ನಿಮ್ಮೊಂದಿಗೆ ಮಾತನಾಡಲಾರೆ.' ಆದರೆ ಈ ಕಾರ್ಯಕ್ರಮದಲ್ಲಿ ಬೇರೆ ಕ್ರೈಸ್ತರು ಭಾಗವಹಿಸುತ್ತಾ ಇದ್ದಾರೆ.'" (ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್‌ರವರು 29-07-2006ರ ಜಲ್ಸಾ ಸಾಲಾನ ಲಂಡನ್‌ನಲ್ಲಿ ನೀಡಿದ ಭಾಷಣದ ಆಯ್ದ ಭಾಗ)

ಅಲ್ಲಾಹನ ಅನುಗ್ರಹದಿಂದ ಈ ಕಾರ್ಯಕ್ರಮಗಳ ಫಲಸ್ವರೂಪವಾಗಿ ಅನೇಕ ಜನರು ಅಹ್ಮದಿಯಾ ಜಮಾಅತನ್ನು ಪ್ರವೇಶಿಸುತ್ತಿದ್ದಾರೆ.

## ಈ ಕಾರ್ಯಕ್ರಮಗಳ ನೇರಪ್ರಸಾರದಲ್ಲಿ ಭಾಷಾಂತರ

ಅನೇಕರು ಫೋನ್ ಮಾಡಿ ಈ ಕಾರ್ಯಕ್ರಮಗಳನ್ನು ವಿವಿಧ ಭಾಷೆಗಳಲ್ಲಿ ನೇರಪ್ರಸಾರದಲ್ಲಿ ಭಾಷಾಂತರಿಸಲು ಕೋರಿದರು. ಒಂದೆರಡು ಭಾಷೆಗಳಲ್ಲಲ್ಲ; ಹತ್ತು ಭಾಷೆಗಳಲ್ಲಿ ಭಾಷಾಂತರಿಸಬೇಕೆಂದು ಕೆಲವರು ಹೇಳಿದರು.

ಈಗ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ನಿರ್ದೇಶನದ ಪ್ರಕಾರ ಉರ್ದು ಮತ್ತು ಇಂಗ್ಲಿಷ್ ಭಾಷಾಂತರಗಳು ಪ್ರಸಾರವಾಗುತ್ತಾ ಇವೆ. ಹಾಗೆ ಈ ಕಾರ್ಯಕ್ರಮದ ವ್ಯಾಪ್ತಿ ಇನ್ನೂ ವಿಸ್ತಾರಗೊಂಡಿದೆ. ಉರ್ದು ಭಾಷಾಂತರ ಜರ್ಮನ್ ಫ್ರೀಕ್ವೆನ್ಸಿಯಲ್ಲೂ ಇಂಗ್ಲಿಷ್ ಭಾಷಾಂತರ ಫ್ರೆಂಚ್ ಫ್ರೀಕ್ವೆನ್ಸಿಯಲ್ಲೂ ಪ್ರಸಾರವಾಗುತ್ತಾ ಇದೆ.

## ಈ ಕಾರ್ಯಕ್ರಮಗಳ ಪರಿಣಾಮ

ಈ ಕಾರ್ಯಕ್ರಮಗಳ ಕಾರಣ ಅನೇಕ ಅಮೂಲ್ಯ ಫಲಗಳು ಲಭಿಸಿವೆ. ಇದರಿಂದ ಲಭಿಸಿದ ಒಂದು ಮಹತ್ವಪೂರ್ಣ ಪರಿಣಾಮವೇನೆಂದರೆ, ನಿನ್ನೆಯ ತನಕ ನಮ್ಮನ್ನು ಧರ್ಮಭ್ರಷ್ಟರೆಂದೂ ಅವಿಶ್ವಾಸಿಗಳಿಗಿಂತ ಕೆಟ್ಟವರೆಂದೂ ಗಣಿಸುತ್ತಿದ್ದ ಮುಸ್ಲಿಮರಲ್ಲಿ ಹಲವರು ನಾವು ಇಸ್ಲಾಮಿಗೋಸ್ಕರ ಕೈಗೊಂಡ ಭವ್ಯವಾದ ಈ ರಕ್ಷಣೆಯ ಅಭಿಯಾನದ ಕಾರಣದಿಂದ, ಬಹಿರಂಗವಾಗಿ ಹೀಗೆ ಪ್ರಕಟಿಸಿದರು: ನಮ್ಮ ಭಿನ್ನಾಭಿಪ್ರಾಯಗಳು ಕೇವಲ ನಮ್ಮ ಒಳಗಿನದಾಗಿವೆ ಮತ್ತು ಸಾಮಾನ್ಯವಾದ ಭಿನ್ನಾಭಿಪ್ರಾಯಗಳಾಗಿವೆ. ನಾವು ಕುಳಿತುಕೊಂಡು ಪರಸ್ಪರ ಚರ್ಚೆಮಾಡಿ ಅವುಗಳನ್ನು ಬಗೆಹರಿಸಿಕೊಳ್ಳುವೆವು. ಆದರೆ ಇಸ್ಲಾಮಿನ ಗೌರವ ಮತ್ತು ಪ್ರವಾದಿಯವರ(ಸ) ಅಭಿಮಾನದ ಪ್ರಶ್ನೆ ಬಂದಾಗ ನಿಮ್ಮ ಮತ್ತು ನಮ್ಮ ಮಧ್ಯೆ ಯಾವ ವ್ಯತ್ಯಾಸವೂ ಇರಲಾರದು. ನಾವು ನಿಮ್ಮ ಭುಜಗಳಿಗೆ ನಮ್ಮ ಭುಜಗಳನ್ನು ಕೊಟ್ಟು ನಿಮ್ಮ ಈ ಜಿಹಾದಿನಲ್ಲಿ ಭಾಗವಹಿಸುವೆವು.

ಹಝ್ರತ್ ಈಸಾ(ಅ) ಮೃತರಾಗಿರುವರೆಂದು ಹೇಳುವವರನ್ನು ನಿನ್ನೆ ತನಕ 'ಅವಿಶ್ವಾಸಿಗಳು' ಎಂದು ಘೋಷಿಸುತ್ತಿದ್ದವರು ಇಂದು ಬಹಿರಂಗವಾಗಿ ಈಸಾ(ಅ) ಮೃತರಾದ ಬಗ್ಗೆ ಪುರಾವೆಗಳನ್ನು ನೀಡುತ್ತಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಈ ಮಾತು ಬಹಳ ಭವ್ಯವಾಗಿ ಸತ್ಯವೆಂದು ಸಾಬೀತಾಗುತ್ತಾ ಇದೆ:

"ಈಸಾರವರನ್ನು(ಅ) ಮಡಿಯಲು ಬಿಡಿರಿ. ಅದರಲ್ಲಿ ಇಸ್ಲಾಮ್ ಧರ್ಮದ ಜೀವಿತ ಇದೆ."

(ಅಲ್‌ಫಝ್ಲ್ ಇಂಟರ್‌ನ್ಯಾಷನಲ್,
ಲಂಡನ್ 23-03-2007ರ ಸಂಚಿಕೆಯಿಂದ ಭಾಷಾಂತರಿಸಿದ್ದು)

❖

# ಅಹ್ಮದಿಯಾ ವಿಶ್ವಾಸಗಳು

-ಹರ್ಝುರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್

ಅಹ್ಮದಿಯಾ ಜಮಾಅತ್ ಯಾವುದೇ ಹೊಸ ಧರ್ಮಕ್ಕೆ ಬದ್ಧವಾಗಿರುವುದಿಲ್ಲ. ಇಸ್ಲಾಮ್ ಮಾತ್ರ ಅದರ ಧರ್ಮವಾಗಿದೆ. ಆದರಿಂದ ಒಂದು ಹೆಜ್ಜೆ ಅಚೆ ಈಚೆ ಆಗುವುದನ್ನು ಅದು ನಿಷಿದ್ಧವೆಂದೂ ದುರದೃಷ್ಟಕರವೆಂದೂ ಭಾವಿಸುತ್ತದೆ. ಅದರ ಹೊಸ ಹೆಸರು ಹೊಸ ಧರ್ಮವನ್ನು ಸೂಚಿಸಿರುವುದಾಗಿರುವುದಿಲ್ಲ. ತಮ್ಮನ್ನು ಇಸ್ಲಾಮ್ ಧರ್ಮದ ಅನುಯಾಯಿಗಳೆಂದು ಹೇಳಿಕೊಳ್ಳುತ್ತಿರುವ ಬೇರೆ ಜನರಿಂದ ನಮ್ಮನ್ನು ಪ್ರತ್ಯೇಕಿಸಿ ಜನರ ಮುಂದೆ ತೋರಿಸಿಕೊಡುವ ಉದ್ದೇಶದಿಂದ ಮಾತ್ರ ಈ ಹೆಸರನ್ನು ನಾವು ಇರಿಸಿಕೊಂಡಿದ್ದೇವೆ.

"ಇಸ್ಲಾಮ್" ಎಂಬ ಹೆಸರು ಬಹಳ ಪ್ರಿಯಕರವಾದುದು. ಅಲ್ಲಾಹನೇ ಸ್ವತಃ ಈ ಹೆಸರನ್ನು ಹರ್ಝುರತ್ ಮುಹಮ್ಮದ್ ಪೈಗಂಬರರ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ಸಮುದಾಯಕ್ಕೆ ದಯಪಾಲಿಸಿದನು. ಈ ಹೆಸರಿಗೆ ಎಂತಹ ಘನತೆಯನ್ನು ಅಲ್ಲಾಹನು ನೀಡಿರುವನೆಂದರೆ ಅದರ ಬಗ್ಗೆ ಹಿಂದೆ ಆಗಮಿಸಿದ ಪ್ರವಾದಿಗಳ ಮೂಲಕ ದೇವನು ಶುಭವಾರ್ತೆಗಳನ್ನು ನೀಡುತ್ತಾ ಇದ್ದನು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

"ಅವನು (ಅಲ್ಲಾಹನು) ಇದಕ್ಕೆ ಮುಂಚೆ ಮತ್ತು ಈ ಗ್ರಂಥದಲ್ಲಿ ನಿಮಗೆ ಮುಸ್ಲಿಮರು ಎಂದು ಹೆಸರಿಟ್ಟಿರುವನು." (ಪವಿತ್ರ ಖುರ್‌ಆನ್ 22:79)

ಹಿಂದಿನ ದಿವ್ಯಗ್ರಂಥಗಳನ್ನು ನೋಡುವುದಾದರೆ ಬೈಬಲಿನಲ್ಲಿರುವ ಯೆಶಾಯ ಪ್ರವಾದಿಯ ಪುಸ್ತಕದಲ್ಲಿ ಹೀಗೆ ಬರೆದಿರುವುದನ್ನು ಇಂದೂ ಸಹ ಕಾಣಬಹುದಾಗಿದೆ:

"ಕರ್ತನ ಬಾಯಿ ನೇಮಿಸಿದ ಹೊಸ ಹೆಸರು ನಿನಗೆ ದೊರೆಯುವದು."

(ಯೆಶಾಯ 62 : 2)

ಇಸ್ಲಾಮ್ ಎಂಬ ಹೆಸರಿಗಿಂತ ಹೆಚ್ಚು ಪವಿತ್ರವಾದ ಹೆಸರು ಬೇರೆ ಯಾವುದು ತಾನೆ ಆಗಲು ಸಾಧ್ಯ? ಈ ಹೆಸರನ್ನು ದೇವನೇ ತನ್ನ ದಾಸರಿಗಾಗಿ ಆಯ್ಕೆ ಮಾಡಿದನು ಮತ್ತು ಆ ಹೆಸರಿಗೆ ಎಂತಹ ಮಹಿಮೆ ದಯಪಾಲಿಸಿದನೆಂದರೆ ಹಿಂದೆ ಆಗಮಿಸಿದ ಪ್ರವಾದಿಗಳ ಮೂಲಕ ಅದರ ಬಗ್ಗೆ ಶುಭವಾರ್ತೆಗಳನ್ನು ನೀಡುವಂತೆ ಮಾಡಿದನು. ಇಂತಹ ಪವಿತ್ರ ಹೆಸರನ್ನು ಬಿಟ್ಟುಬಿಡಲು ಬಯಸಬಲ್ಲವನಾದರೂ ಯಾರು? ನಾವು ಈ ಹೆಸರನ್ನು ನಮ್ಮ ಜೀವಕ್ಕಿಂತಲೂ ಹೆಚ್ಚು ಪ್ರಿಯಕರವಾದುದೆಂದು ಗಣಿಸುತ್ತೇವೆ. ಇಸ್ಲಾಮ್ ಧರ್ಮವು ನಮಗೆ ನೈಜ ಜೀವದಾಯಕವಾಗಿದೆ.

ಈ ಕಾಲದಲ್ಲಿ ವಿವಿಧ ಗುಂಪುಗಳ ಜನರು ತಮ್ಮದೇ ಆದ ಅಭಿಪ್ರಾಯಗಳಿಗೆ ಹೊಂದಿಕೊಂಡು ತಮ್ಮನ್ನು ವಿವಿಧ ಹೆಸರುಗಳಿಂದ ಕರೆಸಿಕೊಳ್ಳುತ್ತಿದ್ದಾರೆ. ಆದುದರಿಂದ ಈ ಜನರಿಂದ ನಮ್ಮನ್ನು ಬೇರೆಯಾಗಿ ಪರಿಚಯಿಸಿಕೊಡಲು ಯಾವುದಾದರೊಂದು ಹೆಸರನ್ನು ಇರಿಸಿಕೊಳ್ಳುವುದು ಆವಶ್ಯಕವಾಯಿತು. ಈ ಕಾಲದ ಸ್ಥಿತಿಗತಿಗಳನ್ನು ಪರಿಗಣಿಸುವುದಾದರೆ ಅತ್ಯುತ್ತಮವಾದ ಹೆಸರು "ಅಹ್ಮದೀ" ಎನ್ನುವುದೇ ಆಗಿದೆ. ಈ ಕಾಲವು ಹರ್ಝುರತ್ ಮುಹಮ್ಮದ್ ಪೈಗಂಬರರು[ಸ] ತಂದ ಸಂದೇಶವನ್ನು ಲೋಕದಾದ್ಯಂತ ಪ್ರಕಟಿಸುವ ಕಾಲವೇ ಆಗಿದೆ. ಅಲ್ಲದೆ ಅಲ್ಲಾಹನ ಸ್ತುತಿಯನ್ನು (ಹಮ್ದ್) ಲೋಕದಾದ್ಯಂತ ಪ್ರಸಾರ ಮಾಡುವ ಕಾಲವು ಸಹ ಇದೇ ಆಗಿದೆ. ಹರ್ಝುರತ್ ಪೈಗಂಬರರ[ಸ] ಅಹ್ಮದ್ ಎಂಬ ನಾಮದ ಪ್ರಕಟಣೆಯ ಕಾಲವು ಇದಾಗಿರುವುದರಿಂದ "ಅಹ್ಮದೀ" ಎಂಬ ಹೆಸರಿಗಿಂತ ಉತ್ತಮವಾದ ವೈಶಿಷ್ಟ್ಯಪೂರ್ಣವಾದ ಇನ್ನೊಂದು ಹೆಸರು ಇರಲು ಸಾಧ್ಯವಿಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ, ನಾವು ಹೃತ್ಪೂರ್ವಕವಾಗಿ ಮುಸಲ್ಮಾನರಾಗಿದ್ದೇವೆ. ನೈಜ ಮುಸಲ್ಮಾನನು ನಂಬಲೇ ಬೇಕಾದ ಪ್ರತಿಯೊಂದು ವಿಷಯವನ್ನು ನಾವು ನಂಬುತ್ತೇವೆ. ಯಾವ ವಿಷಯಗಳನ್ನು ತಿರಸ್ಕರಿಸುವುದು ಒಬ್ಬ ನೈಜ ಮುಸಲ್ಮಾನನಿಗೆ ಆವಶ್ಯಕವಾಗಿವೆಯೋ ಅವುಗಳನ್ನು ನಾವು ತಿರಸ್ಕರಿಸುತ್ತೇವೆ. ಎಲ್ಲಾ ಸತ್ಯಗಳನ್ನು ಅಂಗೀಕರಿಸಿ ಅಲ್ಲಾಹನ ಎಲ್ಲಾ ಆಜ್ಞೆಗಳನ್ನು ಪಾಲಿಸುತ್ತಾ ಇರುವ ನಮ್ಮ ವಿರುದ್ಧ ಕುಫ್ರ್ (ಅವಿಶ್ವಾಸ) ಆರೋಪ ಮಾಡುತ್ತಾ ನಮ್ಮನ್ನು ನವೀನ ಧರ್ಮದ ಅನುಯಾಯಿಗಳೆಂದು ಯಾರು ಕರೆಯುತ್ತಿರುವರೋ ಅವರು ನಮ್ಮ ಮೇಲೆ ಅನ್ಯಾಯ ಮಾಡುತ್ತಾರೆ. ಅಂತಹ ಜನರು ಅಲ್ಲಾಹನ ಸನ್ನಿಧಾನದಲ್ಲಿ ಉತ್ತರ ನೀಡಬೇಕಾದೀತು.

ಮನುಷ್ಯನು ಹಿಡಿಗೂಡಲ್ಪಡುವುದು ಅವನು ನುಡಿದ ಮಾತುಗಳಿಗಾಗಿಯೇ ಹೊರತು ಅವನು ಯೋಚಿಸಿದುದಕ್ಕಾಗಿ ಅಲ್ಲ. ಯಾರ ಹೃದಯದಲ್ಲಿ ಯಾವ ಯೋಚನೆ ಇದೆ ಎಂದು ಹೇಳಲು ಯಾರಿಗೆ ತಾನೆ ಸಾಧ್ಯ? ಒಬ್ಬನು ಇನ್ನೊಬ್ಬನ ಕುರಿತು "ಅವನು ಹೇಳುವ ಮಾತು ಅವನ ಹೃದಯದಲ್ಲಿ ಇಲ್ಲ" ಎಂದು ಆರೋಪಿಸುವವನು ತಾನು ದೇವಗುಣವನ್ನು ಹೊಂದಿರುವವನೆಂದು ವಾದಿಸುವವನಾಗಿದ್ದಾನೆ. ಏಕೆಂದರೆ ಹೃದಯಗಳ ಸ್ಥಿತಿಯನ್ನು ಬಲ್ಲವನು ದೇವನು ಮಾತ್ರ. ಒಬ್ಬನ ಹೃದಯದಲ್ಲಿ ಏನಿದೆ ಎಂಬುದನ್ನು ಅಲ್ಲಾಹನ ಹೊರತು ಬೇರೆ ಯಾರಿಗೂ ಹೇಳಲು ಸಾಧ್ಯವಿಲ್ಲ.

ಹರ್ಝುರತ್ ಪೈಗಂಬರರಿಗಿಂತ[ಸ] ಹೆಚ್ಚು ಜ್ಞಾನ ಸಂಪನ್ನರು ಬೇರೆ ಯಾರಿದ್ದಾರೆ? ಅವರು ತಮ್ಮ ಬಗ್ಗೆ ಹೀಗೆ ಹೇಳಿದ್ದಾರೆ:

"ನಿಮ್ಮವರಲ್ಲಿ ಕೆಲವರು ನನ್ನ ಬಳಿಗೆ ತಮ್ಮ ವ್ಯಾಜ್ಯಗಳನ್ನು ತರುತ್ತಾರೆ. ನಾನು ಕೇವಲ ಒಬ್ಬ ಮನುಷ್ಯನಾಗಿದ್ದೇನೆ. ಕೆಲವರು ತಮ್ಮ ಎದುರುವಾದಿಗಿಂತ ಉತ್ತಮವಾಗಿ ತಮ್ಮ ವಾದವನ್ನು ಮಂಡಿಸುವವರಾಗಿರಲೂಬಹುದು. ಯಾರಿಗಾದರೂ ಆತನ ಸಹೋದರನ ಹಕ್ಕನ್ನು ನಾನು ನೀಡಿದರೆ ಅವನಿಗೆ ಅಗ್ನಿಯ ತುಂಡನ್ನು ನಾನು ಕೊಡುತ್ತಿದ್ದೇನೆಂದು ತಿಳಿದುಕೊಳ್ಳಬೇಕು. ಅವನು ಅದನ್ನು ತೆಗೆದುಕೊಳ್ಳಬಾರದು." (ಬುಖಾರಿ - ಸಂಪುಟ 2)

ಇನ್ನೊಂದು ಹದೀಸು (ಪ್ರವಾದಿ ವಚನ) ಹೀಗಿದೆ:

ಉಸಾಮ[ರ] ಬಿನ್ ಝೈದ್‌ರವರನ್ನು[ರ] ಹರ್ಝುರತ್ ಪೈಗಂಬರರು[ಸ] ಒಂದು ಸೈನ್ಯದ ದಂಡನಾಯಕನನ್ನಾಗಿ ಮಾಡಿ ಕಳುಹಿಸಿದ್ದರು.

ಅವಿಶ್ವಾಸಿಗಳಲ್ಲೊಬ್ಬ ಅವರ ಎದುರಿಗೆ ಬಂದಾಗ ಆತನ ಮೇಲೆ ಆಕ್ರಮಣ ಮಾಡಿ ಆ ಅವಿಶ್ವಾಸಿಯನ್ನು ಕೊಲ್ಲಲು ಉದ್ಯುಕ್ತರಾದಾಗ ಆತನು ಶಹಾದತ್ ಕಲಿಮ (ಇಸ್ಲಾಮ್ ಧರ್ಮದ ಮೂಲಮಂತ್ರ) ಉಚ್ಚರಿಸಿದನು. ಆದರೆ ಉಸಾಮ(ರ) ಆತನನ್ನು ಕೊಂದರು. ಈ ಘಟನೆಯ ಸಮಾಚಾರ ಹಝ್ರತ್ ಪೈಗಂಬರರಿಗೆ(ಸ) ತಿಳಿದಾಗ ಅವರು ಉಸಾಮರೊಂದಿಗೆ(ರ) ಕೇಳಿದರು: "ನೀವು ಏಕೆ ಹಾಗೆ ಮಾಡಿದಿರಿ?" ಆಗ ಉಸಾಮ(ರ) ಹೇಳಿದರು: "ಪ್ರವಾದಿವರ್ಯರೇ, ಆತನು ಹೆದರಿಕೆಯ ಕಾರಣದಿಂದ ಇಸ್ಲಾಮ್ ಧರ್ಮ ಸ್ವೀಕಾರದ ಘೋಷಣೆ ಮಾಡಿದ್ದನು." ಆಗ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು:

"ನೀವು ಆತನ ಹೃದಯವನ್ನು ತೆರೆದು ನೋಡಿದ್ದೀರಾ?"

(ಮುಸ್‌ನದ್ ಇಮಾಮ್ ಅಹ್ಮದ್)

ಅಂದರೆ, ಹಝ್ರತ್ ಪೈಗಂಬರರು(ಸ) ಹೀಗೆ ಹೇಳಲು ಉದ್ದೇಶಿಸಿದ್ದರು: ಆತನು ತಾನು ಮುಸ್ಲಿಮನಾದೆನೆಂದು ಹೇಳಿದುದು ಹೆದರಿಕೆಯಿಂದಲೋ ಅಥವಾ ಹೃತ್ಪೂರ್ವಕವಾಗಿಯೋ ಎಂದು ನಿಮಗೆ ತಿಳಿಯಲು ಹೇಗೆ ತಾನೆ ಸಾಧ್ಯ? ಹೃದಯದ ಸ್ಥಿತಿ ಮನುಷ್ಯನಿಗೆ ಅಗೋಚರವಾಗಿರುತ್ತದೆ.

ಬಾಯಿಯ ಮಾತಿನ ಬಗ್ಗೆ ತೀರ್ಪು ನೀಡಬೇಕೇ ಹೊರತು ಹೃದಯದ ಯೋಚನೆಗಳ ಬಗ್ಗೆ ಅಲ್ಲ. ಏಕೆಂದರೆ ಹೃದಯದ ಯೋಚನೆಗಳು ಅಲ್ಲಾಹನಿಗೆ ಮಾತ್ರ ತಿಳಿದಿರುತ್ತವೆ. ಒಬ್ಬ ಮನುಷ್ಯನು ಇನ್ನೊಬ್ಬ ಮನುಷ್ಯನ ಹೃದಯದ ಯೋಚನೆಗಳ ಕುರಿತು ತೀರ್ಪು ನೀಡುವುದಾದರೆ ಅವನು ಸುಳ್ಳುಗಾರನೂ ಅಲ್ಲಾಹನ ಶಿಕ್ಷೆಗೆ ಅರ್ಹನೂ ಆಗುತ್ತಾನೆ.

ಅಹ್ಮದಿಯಾ ಜಮಾಅತ್‌ಗೆ ಸೇರಿದ ನಾವು, "ನಾವು ಮುಸಲ್ಮಾನರು" ಎಂದು ಹೇಳುತ್ತಾ ಇರುವಾಗ, "ಅವರ ಇಸ್ಲಾಮ್ ಕೇವಲ ತೋರಿಕೆಗಾಗಿದೆ. ಅವರ ಹೃದಯಗಳು ಇಸ್ಲಾಮ್ ಧರ್ಮವನ್ನು ನಿರಾಕರಿಸುತ್ತವೆ. ಅವರು ಮುಹಮ್ಮದ್ ಪೈಗಂಬರರನ್ನು(ಸ) ನಂಬುವುದಿಲ್ಲ. ಅವರು ಹೊಸ ಕಲಿಮ ಉಚ್ಚರಿಸುತ್ತಾರೆ. ಅವರು ಹೊಸ ಖಿಬ್ಲ ಮಾಡಿಕೊಂಡಿದ್ದಾರೆ" ಎಂದೆಲ್ಲಾ ಅಪವಾದ ಹೊರಿಸಲು ಯಾರಿಗೂ ಅಧಿಕಾರವಿಲ್ಲ. ಹಾಗೆ ಅಪವಾದ ಹೊರಿಸುವುದು ಅನುಮತಿಸಲ್ಪಡಬಹುದಾದರೆ, ನಾವು ಸಹ ಅಪವಾದ ಹೊರಿಸುವವರ ವಿರುದ್ಧವಾಗಿ, "ಅವರು ಬಹಿರಂಗವಾಗಿ ಇಸ್ಲಾಮ್ ಧರ್ಮದ ಅನುಯಾಯಿಗಳೆಂದು ಹೇಳಿಕೊಳ್ಳುತ್ತಿರುವರಾದರೂ ಹೃದಯದಲ್ಲಿ ಹಝ್ರತ್ ಮುಹಮ್ಮದ್(ಸ) ಮತ್ತು ಅಲ್ಲಾಹನನ್ನು ನಿರಾಕರಿಸುತ್ತಾರೆ" ಎಂದು ಹೇಳಬಹುದು. ಆದರೆ ಯಾರಾದರೂ ನಮ್ಮನ್ನು ವಿರೋಧಿಸುವ ಕಾರಣದಿಂದ ನಾವು ಸತ್ಯವನ್ನು ಬಿಟ್ಟುಬಿಡಲಾರೆವು. ಒಬ್ಬನ ಕುರಿತು "ಅವನು ಬಹಿರಂಗವಾಗಿ ಹೀಗೆ ಮಾಡುತ್ತಾನೆ. ಆದರೆ ಅವನ ಹೃದಯದಲ್ಲಿ ಬೇರೆಯೇ ಇದೆ" ಎಂದು ಅವನ ವಿರುದ್ಧ ತೀರ್ಪು ನೀಡಲಾರೆವು. ಒಬ್ಬ ಮನುಷ್ಯನು ತನ್ನ ಬಗ್ಗೆ ಏನು ಹೇಳುತ್ತಾನೋ ಅದರ ಬಗ್ಗೆ ಮಾತ್ರ ನಾವು ಇಸ್ಲಾಮಿನ ನಿಯಮ ಸಂಹಿತೆ (ಶರೀಅತ್) ಪ್ರಕಾರ ಚರ್ಚಿಸುತ್ತೇವೆ.

ಮೇಲಿನ ಪ್ರಾಸ್ತಾವಿಕ ನುಡಿಗಳ ನಂತರ ನಾನು ಇನ್ನು ಮುಂದೆ ನಮ್ಮ ಜಮಾಅತಿನ ವಿಶ್ವಾಸಗಳನ್ನು ವಿವರಿಸುತ್ತೇನೆ. ಇವುಗಳಲ್ಲಿ ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾದುದು ಏನಾದರೂ ಇದೆಯೋ ಎಂದು ಪರಾಂಬರಿಸಿರಿ.

1. ಸೃಷ್ಟಿಕರ್ತನಾದ ದೇವನೊಬ್ಬನಿದ್ದಾನೆಂದು ನಾವು ದೃಢವಾಗಿ ನಂಬುತ್ತೇವೆ. ಅವನ ಅಸ್ತಿತ್ವದಲ್ಲಿ ನಂಬಿಕೆ ಇರಿಸುವುದು ಅತ್ಯಂತ ಹಿರಿದಾದ ಸತ್ಯವನ್ನು ಸಂಶಯಾತೀತವಾಗಿ ಒಪ್ಪಿಕೊಳ್ಳುವುದಾಗಿದೆ.

2. ದೇವನೊಬ್ಬನೇ; ಭೂಮ್ಯಾಕಾಶಗಳಲ್ಲಿ ಅವನ ಸಹಭಾಗಿ ಯಾರೂ ಇಲ್ಲ ಎಂದು ನಾವು ದೃಢವಾಗಿ ನಂಬುತ್ತೇವೆ. ಅವನ ಹೊರತು ಉಳಿದ ಎಲ್ಲವೂ ಅವನು ಸೃಷ್ಟಿಸಿದವುಗಳಾಗಿವೆ. ಪ್ರತಿ ಕ್ಷಣದಲ್ಲಿ ದೇವನ ಸಹಾಯ ಮತ್ತು ಆಶ್ರಯ ಅವುಗಳಿಗೆಲ್ಲ ಅನಿವಾರ್ಯವಾಗಿ ಅಗತ್ಯವಾಗಿವೆ. ಅವನಿಗೆ ಯಾವ ಪುತ್ರನೂ ಇಲ್ಲ; ಪುತ್ರಿಯೂ ಇಲ್ಲ. ಅವನಿಗೆ ಮಾತಾಪಿತೃಗಳಿಲ್ಲ. ಅವನಿಗೆ ಪತ್ನಿಯಾಗಲೀ ಸಹೋದರನಾಗಲೀ ಇಲ್ಲ. ಅವನು ತನ್ನ ಏಕತೆಯಲ್ಲಿ ಅದ್ವಿತೀಯನಾಗಿದ್ದಾನೆ.

3. ದೇವನು ಪರಿಶುದ್ಧನಾಗಿದ್ದಾನೆ. ಅವನು ಎಲ್ಲಾ ನ್ಯೂನತೆಗಳಿಂದಲೂ ವಿಮುಕ್ತನಾಗಿದ್ದಾನೆ. ಅವನು ಎಲ್ಲಾ ಒಳಿತುಗಳನ್ನು ಒಗ್ಗೂಡಿಸಿಕೊಂಡಿರುವವನಾಗಿದ್ದಾನೆ. ಅವನಲ್ಲಿ ಯಾವುದೇ ನ್ಯೂನತೆ ಇಲ್ಲ. ಅವನಲ್ಲಿ ಇರದ ಯಾವುದೇ ಒಳಿತು ಸಹ ಇಲ್ಲ. ಅವನ ಶಕ್ತಿ ಸಾಮರ್ಥ್ಯಗಳು ಅಪರಿಮಿತವಾಗಿವೆ. ಅವನ ಜ್ಞಾನವು ಸೀಮಾತೀತವಾಗಿದೆ. ಅವನು ಪ್ರತಿಯೊಂದು ವಸ್ತುವನ್ನು ಸುತ್ತುವರಿದಿದ್ದಾನೆ. ಅವನನ್ನು ಸುತ್ತುವರಿಯಬಲ್ಲಂತಹ ವಸ್ತು ಯಾವುದೂ ಇಲ್ಲ. ಅವನೇ ಆದಿ; ಅವನೇ ಅಂತಿಮವಾಗಿ ಉಳಿಯುವವನು. ಅವನು ಬಹಿರಂಗವಾಗಿಯೂ ಇದ್ದಾನೆ. ಅವನು ಅಂತರಿಕವಾಗಿಯೂ ಇದ್ದಾನೆ. ಅವನು ಸರ್ವಲೋಕಗಳ ಸೃಷ್ಟಿಕರ್ತನಾಗಿದ್ದಾನೆ. ಅವನು ಎಲ್ಲಾ ಸೃಷ್ಟಿಗಳ ಮಾಲಿಕನಾಗಿದ್ದಾನೆ. ಅವನ ಶಕ್ತಿ ಸಾಮರ್ಥ್ಯಗಳು ಹಿಂದೆ ಎಂದಾದರೂ ನಿಷ್ಕ್ರಿಯವಾಗಿರಲಿಲ್ಲ, ಈಗ ನಿಷ್ಕ್ರಿಯವಾಗಿಲ್ಲ, ಮುಂದೆ ನಿಷ್ಕ್ರಿಯವಾಗಲಾರದು. ಅವನು ಜೀವಂತವಾಗಿದ್ದಾನೆ. ಅವನನ್ನು ಮೃತ್ಯು ಎಂದೂ ಬಾಧಿಸದು. ಅವನು ಸ್ಥಿರವಾಗಿ ನೆಲೆ ನಿಲ್ಲುವವನಾಗಿದ್ದಾನೆ. ಅವನಿಗೆ ಎಂದೂ ಅವನತಿ ಇಲ್ಲ. ಅವನ ಎಲ್ಲಾ ಕೆಲಸಗಳು ಅವನ ನಿರ್ಧಾರ ಪ್ರಕಾರ ನಡೆಯುತ್ತವೆ. ಅವನು ಯಾವುದೇ ಕೆಲಸವನ್ನು ನಿರ್ಬಂಧಿತನಾಗಿ ಮಾಡುವುದಿಲ್ಲ. ಅವನು ಹಿಂದೆ ವಿಶ್ವದ ಆಡಳಿತೆ ನಡೆಸುತ್ತಿದ್ದ ರೀತಿಯಲ್ಲಿಯೇ ಇಂದು ಸಹ ಆಡಳಿತೆ ನಡೆಸುತ್ತಾನೆ. ಅವನ ಗುಣ ವಿಶೇಷಗಳು ಎಂದೂ ಸ್ಥಗಿತಗೊಳ್ಳಲಾರದು. ಅವನು ಎಲ್ಲಾ ಕಾಲಗಳಲ್ಲಿಯೂ ತನ್ನ ಶಕ್ತಿ ಸಾಮರ್ಥ್ಯಗಳನ್ನು ಪ್ರದರ್ಶಿಸುತ್ತಾ ಇರುತ್ತಾನೆ.

4. ದೇವದೂತರು (ಮಲಾಯಿಕ) ದೇವನ ಸೃಷ್ಟಿಗಳೆಂದು ನಾವು ದೃಢವಾಗಿ ನಂಬುತ್ತೇವೆ. "ಅವರಿಗೆ ಆಜ್ಞಾಪಿಸಿದ ಪ್ರಕಾರ ಅವರು ವರ್ತಿಸುತ್ತಾರೆ" (16 : 51) ಎಂದು ಪವಿತ್ರ ಖುರ್‌ಆನ್ ಹೇಳಿದ ಪ್ರಕಾರ ಅವರು ನಡೆಯುತ್ತಾರೆ. ದೇವನು ತನ್ನ ಪರಿಪೂರ್ಣ ಜಾಣ್ಮೆಯ ಪ್ರಕಾರ ಅವರನ್ನು ವಿವಿಧ ಕೆಲಸಗಳಿಗಾಗಿ ಸೃಷ್ಟಿಸಿದ್ದಾನೆ. ಅವರು ವಾಸ್ತವಿಕವಾಗಿಯೂ ಅಸ್ತಿತ್ವದಲ್ಲಿದ್ದಾರೆ. ಅವರ ಬಗ್ಗೆ ಪ್ರಸ್ತಾಪಿಸಿರುವುದು ಅಲಂಕಾರಿಕವಾಗಿ ಅಲ್ಲ. ಮನುಷ್ಯರು ಮತ್ತು ಇತರ ಸೃಷ್ಟಿಗಳಿಗೆ ದೇವನ ಆಶ್ರಯವು ಆವಶ್ಯಕವಾಗಿರುವ ಹಾಗೆ ದೇವದೂತರಿಗೂ ಆವಶ್ಯಕವಾಗಿದೆ. ತನ್ನ ಶಕ್ತಿಸಾಮರ್ಥ್ಯಗಳ ಪ್ರಕಟಣೆಗೆ ದೇವನಿಗೆ ಅವರ ಆವಶ್ಯಕತೆ ಇಲ್ಲ. ದೇವನು ಇಚ್ಛಿಸುತ್ತಿದ್ದರೆ ಅವರನ್ನು ಸೃಷ್ಟಿಸದೆ ಸಹ ತನ್ನ ಇಚ್ಛೆಯನ್ನು ಈಡೇರಿಸುತ್ತಿದ್ದನು. ಆದರೆ ದೇವನ ಪರಿಪೂರ್ಣ ಜಾಣ್ಮೆಯು ದೇವದೂತರನ್ನು ಸೃಷ್ಟಿಸಲು ಇಚ್ಛಿಸಿತು. ಹಾಗೆ ಅವರು ಸೃಷ್ಟಿಸಲ್ಪಟ್ಟರು. ಸೂರ್ಯನ ಪ್ರಕಾಶದಿಂದ ಮನುಷ್ಯರ ಕಣ್ಣುಗಳನ್ನು ಬೆಳಗಿಸುವಾಗ ಮತ್ತು ರೊಟ್ಟಿಯಿಂದ ಮನುಷ್ಯರ ಹೊಟ್ಟೆಗಳನ್ನು

ತುಂಬಿಸುವಾಗ ದೇವನು ಸೂರ್ಯನ ಮತ್ತು ರೊಟ್ಟಿಯ ಆಶ್ರಯವನ್ನು ಪಡೆಯುವುದಿಲ್ಲ. ಇದೇ ರೀತಿ ದೇವದೂತರ ಮೂಲಕ ತನ್ನ ಕೆಲವು ನಿರ್ಧಾರಗಳನ್ನು ಈಡೇರಿಸುವಾಗ ದೇವನು ದೇವದೂತರ ಆಶ್ರಯವನ್ನು ಪಡೆದವನಾಗುವುದಿಲ್ಲ.

5. ದೇವನು ತನ್ನ ದಾಸರೊಂದಿಗೆ ಮಾತನಾಡುತ್ತಾನೆ ಮತ್ತು ತನ್ನ ಇಚ್ಛೆಯನ್ನು ಅವರಿಗೆ ಪ್ರಕಟಿಸುತ್ತಾನೆ ಎಂದು ನಾವು ದೃಢ ವಿಶ್ವಾಸವನ್ನು ಹೊಂದಿದ್ದೇವೆ. ಈ ವಾಣಿ ವಿಶಿಷ್ಟ ಶಬ್ದಗಳಲ್ಲಿ ಅವತೀರ್ಣವಾಗುತ್ತದೆ. ಇವುಗಳ ಅವತೀರ್ಣವಾಗುವಿಕೆಯಲ್ಲಿ ಮನುಷ್ಯನ ಯಾವುದೇ ಹಸ್ತಕ್ಷೇಪ ಇರುವುದಿಲ್ಲ. ಇದು ಮನುಷ್ಯನ ಯೋಚನೆಗೆ ಅನುಗುಣವಾಗಿ ಸಹ ಇರುವುದಿಲ್ಲ. ಅದರ ಶಬ್ದಗಳು ಮನುಷ್ಯನು ಸೂಚಿಸಿದವುಗಳಾಗಿರುವುದಿಲ್ಲ. ಅವುಗಳ ಅರ್ಥ ಸಹ ದೇವನಿಂದ ಬರುತ್ತವೆ ಮತ್ತು ಶಬ್ದಗಳು ಸಹ ಅವನಿಂದಲೇ ಬರುತ್ತವೆ. ದೇವ ವಾಣಿಯೇ ಮನುಷ್ಯನ ನಿಜವಾದ ಆಧ್ಯಾತ್ಮಿಕ ಆಹಾರವಾಗಿದೆ. ಅದರ ಮೂಲಕವೇ ಮನುಷ್ಯನು ಜೀವಂತವಾಗಿ ಇರುತ್ತಾನೆ ಮತ್ತು ಅದರ ಮೂಲಕವೇ ದೇವನೊಂದಿಗೆ ಸಂಬಂಧವು ಸ್ಥಾಪಿತವಾಗುತ್ತದೆ. ಆ ವಾಣಿ ತನ್ನ ಶಕ್ತಿ ಮತ್ತು ಭವ್ಯತೆಯಲ್ಲಿ ಅದ್ವಿತೀಯವಾಗಿರುತ್ತದೆ. ಅದಕ್ಕೆ ಸಮಾನವಾದುದನ್ನು ಮನಷ್ಯನು ತರಲಾರನು. ಅದು ಜ್ಞಾನದ ಅಪರಿಮಿತ ನಿಧಿಗಳನ್ನು ತನ್ನೊಂದಿಗೆ ತರುತ್ತದೆ. ಅದೊಂದು ಗಣಿಯ ಹಾಗೆ ಇರುತ್ತದೆ. ಅದನ್ನು ಎಷ್ಟು ಅಗೆದರೂ ಅದರೊಳಗಿಂದ ಬೆಲೆಬಾಳುವ ವಜ್ರಗಳು ಹೊರಬರುತ್ತಾ ಇರುತ್ತವೆ. ಅದು ಗಣಿಗಳಿಗಿಂತಲೂ ಮಿಗಿಲಾದುದಾಗಿದೆ. ಏಕೆಂದರೆ ಗಣಿಗಳ ನಿಕ್ಷೇಪಗಳು ಮುಗಿಯುತ್ತಾ ಹೋಗುತ್ತವೆ. ಆದರೆ ದೇವ ವಾಣಿಯ ಜ್ಞಾನ ಭಂಡಾರಗಳು ಮುಗಿದು ಹೋಗಲಾರವು. ದೇವ ವಾಣಿ ಒಂದು ಸಮುದ್ರದ ಹಾಗಿದೆ. ಅದರ ಮೇಲ್ಭಾಗದಲ್ಲಿ ಪರಿಮಳ ದ್ರವ್ಯವಾದ ಅಂಬರ್ ತೇಲಾಡುತ್ತಾ ಇರುತ್ತದೆ. ಅದರ ತಳದಲ್ಲಿ ಮುತ್ತುಗಳು ಹರಡಿಕೊಂಡಿರುತ್ತವೆ. ಅದರ ಬಾಹ್ಯರೂಪದ ಮೇಲೆ ದೃಷ್ಟಿ ಇರಿಸುವವನು ಅದರ ಸುವಾಸನೆಯಿಂದ ತನ್ನ ಬುದ್ಧಿಯನ್ನು ಪರಿಮಳಯುಕ್ತವನ್ನಾಗಿ ಮಾಡಿಕೊಳ್ಳುತ್ತಾನೆ. ಅದರೊಳಗೆ ನೆಗೆಯುವನು ಜ್ಞಾನದ ನಿಧಿಯಿಂದ ಐಶ್ವರ್ಯಭರಿತನಾಗುತ್ತಾನೆ.

ದೇವ ವಾಣಿಗಳು ಅನೇಕ ವಿಧಗಳಲ್ಲಿವೆ. ಅವುಗಳಲ್ಲಿ ಕೆಲವು ನಿಯಮ ಸಂಹಿತೆಯ ಆಜ್ಞೆಗಳನ್ನು ಒಳಗೊಂಡಿರುತ್ತವೆ. ಕೆಲವು ಉಪದೇಶಗಳನ್ನು ಹೊಂದಿರುತ್ತವೆ. ಅವುಗಳಲ್ಲಿ ಕೆಲವು ಅದೃಶ್ಯ ಜ್ಞಾನದ ಬಾಗಿಲುಗಳನ್ನು ತೆರೆಯುತ್ತವೆ. ಕೆಲವು ಆಧ್ಯಾತ್ಮಿಕ ಜ್ಞಾನದ ನಿಧಿ ನಿಕ್ಷೇಪಗಳನ್ನು ಬಹಿರಂಗಗೊಳಿಸುತ್ತವೆ. ದೇವನು ತನ್ನ ದಾಸನ ಬಗ್ಗೆ ತನ್ನ ತೃಪ್ತಿಯನ್ನು ಕೆಲವು ವಾಣಿಗಳ ಮೂಲಕ ಪ್ರಕಟಿಸುತ್ತಾನೆ. ಕೆಲವು ವಾಣಿಗಳ ಮೂಲಕ ತನ್ನ ಅತೃಪ್ತಿಯನ್ನು ದೇವನು ಪ್ರಕಟಿಸುತ್ತಾನೆ. ಕೆಲವು ಸಾರಿ ಪ್ರೀತಿ ಮತ್ತು ವಾತ್ಸಲ್ಯದ ಮಾತುಗಳಿಂದ ದೇವನು ತನ್ನ ದಾಸನ ಹೃದಯವನ್ನು ಸಂತೋಷಪಡಿಸುತ್ತಾನೆ. ಕೆಲವು ಸಾರಿ ಎಚ್ಚರಿಕೆ ನೀಡಿ ತನ್ನ ದಾಸನಿಗೆ ಅವನ ಕರ್ತವ್ಯಗಳ ಕಡೆಗೆ ಗಮನಹರಿಸುತ್ತಾನೆ. ಕೆಲವು ಸಾರಿ ಉತ್ತಮ ಸ್ವಭಾವ ಗುಣಳ ಸೂಕ್ಷ್ಮ ರಹಸ್ಯಗಳನ್ನು ದೇವನು ತೆರೆಯುತ್ತಾನೆ. ಕೆಲವು ಸಾರಿ ಗುಪ್ತ ದುರ್ಗುಣಗಳ ಜ್ಞಾನವನ್ನು ನೀಡುತ್ತಾನೆ.

ಒಟ್ಟಾರೆ ಹೇಳುವುದಾದರೆ, ದೇವನು ತನ್ನ ದಾಸರೊಂದಿಗೆ ಮಾತನಾಡುತ್ತಾನೆ ಎಂದು ನಾವು ನಂಬುತ್ತೇವೆ. ದೇವ ವಾಣಿಗಳು ವಿವಿಧ ಪರಿಸ್ಥಿತಿಗಳಲ್ಲಿ ವಿವಿಧ ಮನುಷ್ಯರಿಗೆ ಅನ್ವಯಿಸುವಂತೆ ವಿವಿಧ ಮಟ್ಟಗಳನ್ನು ಹೊಂದಿರುತ್ತವೆ. ವಿವಿಧ ರೀತಿಗಳಲ್ಲಿ ಅವು ಅವತೀರ್ಣವಾಗುತ್ತವೆ. ದೇವನು ಮನುಷ್ಯನಿಗೆ ಅವತೀರ್ಣಗೊಳಿಸಿದ ಎಲ್ಲಾ ವಾಣಿಗಳಲ್ಲಿ ಪವಿತ್ರ ಖುರ್‌ಆನ್ ಅತ್ಯಂತ ಉನ್ನತವಾದುದೂ ಅತ್ಯಂತ ಅನುಗ್ರಹದಾಯಕವೂ ಅತ್ಯಂತ ಪರಿಪೂರ್ಣವೂ ಆಗಿದೆ. ಅದರಲ್ಲಿ ಅವತೀರ್ಣಗೊಳಿಸಲ್ಪಟ್ಟ ಶರೀಅತ್ (ನಿಯಮ ಸಂಹಿತೆ) ಮತ್ತು ಅದರಲ್ಲಿರುವ ಮಾರ್ಗದರ್ಶನವು ಎಲ್ಲಾ ಕಾಲಗಳಿಗಾಗಿದೆ. ಇನ್ನು ಮುಂದೆ ಯಾವುದೇ ದೇವ ವಾಣಿ ಅದನ್ನು ರದ್ದುಗೊಳಿಸಲಾರದು.

6. ನಾವು ಹೀಗೆಯೂ ದೃಢವಾಗಿ ನಂಬುತ್ತೇವೆ: ಲೋಕದಲ್ಲಿ ಅಂಧಕಾರವು ವ್ಯಾಪಿಸಿ ಜನರು ದುರ್ಗುಣಗಳನ್ನು ಹೊಂದಿ ದುಷ್ಕೃತ್ಯಗಳಲ್ಲಿ ನಿರತರಾದಾಗ ಮತ್ತು ದೈವಿಕ ಸಹಾಯವಿಲ್ಲದೆ ಶೈತಾನನ ಹಿಡಿತದಿಂದ ಮುಕ್ತಿಯನ್ನು ಗಳಿಸುವುದು ಅವರಿಗೆ ಅಸಾಧ್ಯವಾಗುವಾಗ ದೇವನು ತನ್ನ ಅತ್ಯಂತ ವಾತ್ಸಲ್ಯದ ಮತ್ತು ಅಪರಿಮಿತ ಕರುಣೆಯ ಕಾರಣದಿಂದ ತನ್ನ ಸಾತ್ವಿಕ, ಪರಿಶುದ್ಧ ಮತ್ತು ನಿಷ್ಠಾವಂತ ದಾಸರಿಂದ ಕೆಲವರನ್ನು ಆಯ್ಕೆಮಾಡಿ ಲೋಕದ ಮಾರ್ಗದರ್ಶನಕ್ಕಾಗಿ ಕಳುಹಿಸುತ್ತಾ ಇರುತ್ತಾನೆ. ಈ ಬಗ್ಗೆ ದೇವನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿರುತ್ತಾನೆ:

> "ಓರ್ವ ಮುನ್ನೆಚ್ಚರಿಕೆಗಾರನು ಬಂದಿರದ ಯಾವುದೇ ಜನಾಂಗವಿಲ್ಲ." (35 : 25)

ಒಬ್ಬ ಪ್ರವಾದಿಯು ಆಗಮಿಸಿರದಂತಹ ಯಾವುದೇ ಜನಾಂಗವಿಲ್ಲವೆಂದು ಈ ವಚನ ಸೂಚಿಸುತ್ತದೆ. ಈ ಪ್ರವಾದಿಗಳು ತಮ್ಮ ಪರಿಶುದ್ಧ ಜೀವಿತದ ಮೂಲಕ ಮತ್ತು ಕಳಂಕ ರಹಿತ ನಡೆವಳಿಕೆಗಳಿಂದ ಜನರಿಗೆ ಮಾರ್ಗದರ್ಶಕರಾಗುತ್ತಾ ಇದ್ದರು. ಅವರ ಮೂಲಕ ದೇವನು ತನ್ನ ಇಚ್ಛೆಯನ್ನು ಲೋಕಕ್ಕೆ ತಿಳಿಸುತ್ತಾ ಇದ್ದನು. ಪ್ರವಾದಿಗಳನ್ನು ಅನುಸರಿಸದೆ ಮುಖ ತಿರುಗಿಸಿಕೊಂಡು ಹೋದವರು ನಾಶವಾದರು. ಪ್ರವಾದಿಗಳನ್ನು ಪ್ರೀತಿಸಿದವರು ದೇವನಿಗೆ ಪ್ರಿಯರಾದರು. ಅನುಗ್ರಹಗಳ ಬಾಗಿಲುಗಳು ಅವರಿಗೆ ತೆರೆಯಲ್ಪಟ್ಟವು. ದೇವನ ಕಾರುಣ್ಯ ಅವರಿಗೆ ಇಳಿಸಲ್ಪಟ್ಟಿತು. ಅವರ ನಂತರ ಬರುವವರಿಗೆ ಅವರು ನಾಯಕರಾಗಿ ನೇಮಿಸಲ್ಪಟ್ಟರು. ಇಹ ಪರಲೋಕಗಳ ಒಳಿತುಗಳು ಅವರಿಗೆ ನಿಶ್ಚಯಿಸಲ್ಪಟ್ಟವು.

ನಾವು ಹೀಗೆಯೂ ದೃಢವಾಗಿ ನಂಬುತ್ತೇವೆ: ಲೋಕವನ್ನು ಕೆಡುಕಿನ ಅಂಧಕಾರದಿಂದ ಹೊರಗೆ ತಂದು ಒಳಿತಿನ ಬೆಳಕಿನ ಕಡೆಗೆ ತರುತ್ತಾ ಇದ್ದ ದೇವನೇಮಿತ ಮಹಾನುಭಾವರು ವಿವಿಧ ಪದವಿಗಳನ್ನು, ವಿವಿಧ ಅಂತಸ್ತುಗಳನ್ನು ಪಡೆದಿದ್ದರು. ಅವರೆಲ್ಲರ ನಾಯಕ ಹಝ್ರತ್ ಮುಹಮ್ಮದ್ ಪೈಗಂಬರ್‌ರ್ಸ ಆಗಿದ್ದರು. ದೇವನು ಅವರನ್ನು ಮನುಷ್ಯ ಕುಲದ ನಾಯಕನೆಂದು ಕರೆದಿರುವನು. ಸಕಲ ಮನುಷ್ಯರಿಗಾಗಿ ಅವರನ್ನು ಕಳುಹಿಸಲಾಯಿತು. (ಪವಿತ್ರ ಖುರ್‌ಆನ್ 34 : 29) ಅವರಿಗೆ ದೇವನು ಎಲ್ಲಾ ಪರಿಪೂರ್ಣ ಜ್ಞಾನಗಳನ್ನು ಕಲಿಸಿದನು. ಅವರಿಗೆ ದೇವನು ಎಂತಹ ಘನತೆ ಮತ್ತು ವೈಭವ ದಯಪಾಲಿಸಿದನೆಂದರೆ ದೊಡ್ಡ ದೊಡ್ಡ ನಿರಂಕುಶ ಶಕ್ತಿಶಾಲಿ ಅರಸರು ಅವರ ಹೆಸರನ್ನು ಆಲಿಸಿದಾಗ ಭಯಭೀತರಾಗುತ್ತಿದ್ದರು. ಅವರಿಗಾಗಿ ಭೂಮಿಯಲ್ಲಿ ಎಲ್ಲಾ ಕಡೆಗಳಲ್ಲೂ ದೇವನಿಗೆ ಸಾಷ್ಟಾಂಗ ಪ್ರಣಾಮ ಮಾಡುವ

ಸ್ಥಳವನ್ನಾಗಿ ಮಾಡಲಾಯಿತು (ಬುಖಾರಿ). ಈ ಕಾರಣದಿಂದ ಅವರ ಅನುಯಾಯಿಗಳು ಭೂಮಿಯ ಎಲ್ಲಾ ಕಡೆಗಳಲ್ಲೂ ಏಕದೇವನಿಗೆ ಸಾಷ್ಟಾಂಗ ಪ್ರಣಾಮ ಮಾಡಿದರು. ಲೋಕವು ನ್ಯಾಯ ಮತ್ತು ನೀತಿಯಿಂದ ತುಂಬಿತು. ಅದರ ಮೊದಲು ಅದು ಹಿಂಸೆ ಮತ್ತು ದೌರ್ಜನ್ಯದಿಂದ ತುಂಬಿ ತುಳುಕುತ್ತಿತ್ತು.

ಈ ಪರಿಪೂರ್ಣ ಪ್ರವಾದಿಯವರ(ಸ) ಕಾಲದಲ್ಲಿ, ಪೂರ್ವ ಕಾಲದಲ್ಲಿ ಆಗಮಿಸಿದ ಪ್ರವಾದಿಗಳು ಇರುತ್ತಿದ್ದರೆ ಅವರಿಗೆ ಈ ಪ್ರವಾದಿಯನ್ನು ಅನುಸರಿಸದೆ ಇರಲು ಸಾಧ್ಯವಾಗುತ್ತಿರಲಿಲ್ಲವೆಂದು ನಾವು ದೃಢವಾಗಿ ನಂಬುತ್ತೇವೆ.

ಇದರ ಬಗ್ಗೆಯೇ ಅಲ್ಲಾಹನು ಹೀಗೆ ಹೇಳಿದ್ದಾನೆ:

"ಅಲ್ಲಾಹನು ಪ್ರವಾದಿಗಳಿಂದ ಒಪ್ಪಂದ ಪಡೆದ ಸಂದರ್ಭ (ಜ್ಞಾಪಿಸಿರಿ) - 'ನಾನು ನಿಮಗೆ ಯಾವುದೇ ಗ್ರಂಥವನ್ನೂ ಸುಜ್ಞಾನವನ್ನೂ ನೀಡಿದ ಬಳಿಕ ನಿಮ್ಮ ಬಳಿಯಿರುವುದನ್ನು (ಸಂದೇಶವನ್ನು) ದೃಢೀಕರಿಸುವ ಒಬ್ಬ ಪ್ರವಾದಿ ನಿಮ್ಮ ಹತ್ತಿರ ಬಂದರೆ ಕಡ್ಡಾಯವಾಗಿಯೂ ನೀವು ಆತನನ್ನು ನಂಬಿ ಆತನಿಗೆ ನೆರವೀಯಬೇಕು.' (ಪವಿತ್ರ ಖುರ್‌ಆನ್ 3 : 82)

ಈ ಬಗ್ಗೆ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೀಗೆ ಹೇಳಿದ್ದಾರೆ:

"ಮೂಸಾ(ಅ) ಮತ್ತು ಈಸಾ(ಅ) ಇವರಿಬ್ಬರೂ ಜೀವಿಸಿರುತ್ತಿದ್ದರೆ ನನ್ನನ್ನು ಅನುಸರಿಸದೆ ಇರಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ."

7. ದೇವನು ತನ್ನ ದಾಸರ ಪ್ರಾರ್ಥನೆಗಳನ್ನು ಆಲಿಸುತ್ತಾನೆಂದೂ ಅವರ ಕಷ್ಟಗಳನ್ನು ಪರಿಹರಿಸುತ್ತಾನೆಂದೂ ನಾವು ದೃಢವಾಗಿ ನಂಬುತ್ತೇವೆ. ದೇವನು ಸದಾಕಾಲ ಜೀವಂತವಾಗಿ ಇರುವವನಾಗಿದ್ದಾನೆ. ಮನುಷ್ಯನು ಎಲ್ಲಾ ಕಾಲಗಳಲ್ಲೂ ಎಲ್ಲಾ ಸಮಯಗಳಲ್ಲೂ ಅವನ ಅಸ್ತಿತ್ವವನ್ನು ಮನವರಿಕೆ ಮಾಡಿಕೊಳ್ಳುತ್ತಾನೆ. ಅವನ ಉದಾಹರಣೆ ಬಾವಿಯನ್ನು ನಿರ್ಮಿಸುವವನು ತಯಾರಿಸುವ ಏಣಿಯ ಹಾಗೆ ಅಲ್ಲ. ಬಾವಿಯನ್ನು ಪೂರ್ಣವಾಗಿ ನಿರ್ಮಿಸಿದ ನಂತರ ಆ ಏಣಿಯನ್ನು ಮುರಿದು ಹಾಕಲಾಗುತ್ತದೆ. ಆ ಏಣಿ ನಿಷ್ಪ್ರಯೋಜಕವಾಗಿ ಪರಿಣಮಿಸಿ ಕೆಲಸಕ್ಕೆ ಅಡಚಣೆಯನ್ನು ಉಂಟುಮಾಡುತ್ತದೆ. ದೇವನ ಉದಾಹರಣೆ ಪ್ರಕಾಶದಂತೆ. ಅದರ ಹೊರತು ಎಲ್ಲವೂ ಅಂಧಕಾರಮಯವಾಗುತ್ತದೆ. ಅವನ ಉದಾಹರಣೆ ಆತ್ಮದ ಹಾಗಿದೆ. ಅದರ ಹೊರತು ನಾಲ್ಕು ದಿಕ್ಕುಗಳಲ್ಲೂ ಮೃತ್ಯುವೇ ಮೃತ್ಯು ಇದೆ. ಆತ್ಮವನ್ನು ಮನುಷ್ಯರಿಂದ ಬೇರ್ಪಡಿಸಿದರೆ ಕೇವಲ ಚೈತನ್ಯರಹಿತ ಶರೀರ ಬಾಕಿಯಾಗಿ ಉಳಿಯುತ್ತದೆ. ದೇವನು ಯಾವಾಗಲೋ ಒಮ್ಮೆ ಲೋಕವನ್ನು ಸೃಷ್ಟಿಸಿದನು; ಈಗ ಅವನು ಮೌನವಾಗಿ ಕುಳಿತಿರುವನು ಎನ್ನುವುದು ಸರಿಯಲ್ಲ. ಅವನು ಎಲ್ಲಾ ಸಮಯಗಳಲ್ಲೂ ತನ್ನ ದಾಸರೊಂದಿಗೆ ಸಂಬಂಧವನ್ನು ಹೊಂದಿದ್ದಾನೆ. ಅವನು ತನ್ನ ದಾಸರ ದೈನ್ಯತೆಯ ಬಗ್ಗೆ ಗಮನಿಸುತ್ತಾನೆ. ಅವರು ಅವನನ್ನು ಮರೆತರೆ ಅವನು ಸ್ವತಃ ತನ್ನ ಅಸ್ತಿತ್ವವನ್ನು ಅವರಿಗೆ ನೆನಪಿಸಿಕೊಡುತ್ತಾನೆ. ಅವನು ತನ್ನ ವಿಶಿಷ್ಟ ಸಂದೇಶವಾಹಕರ ಮೂಲಕ ತನ್ನ ದಾಸರಿಗೆ ಹೀಗೆ ತಿಳಿಸುತ್ತಾನೆ:

"ಖಂಡಿತವಾಗಿಯೂ ನಾನು ಸಮೀಪದಲ್ಲಿಯೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದುದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ." (ಪವಿತ್ರ ಖುರ್‌ಆನ್ 2 : 187)

8. ದೇವನು ತನ್ನ ವಿಶಿಷ್ಟವಾದ ಕಾರ್ಯ ವಿಧಾನವನ್ನು ಲೋಕದಲ್ಲಿ ಜಾರಿಗೊಳಿಸುತ್ತಾ ಇರುತ್ತಾನೆಂದು ನಾವು ದೃಢವಾಗಿ ನಂಬುತ್ತೇವೆ. ಅವನ ವತಿಯಿಂದ ನೈಸರ್ಗಿಕ ನಿಯಮಗಳು ಜಾರಿಗೊಳ್ಳುತ್ತಿವೆ ಮಾತ್ರವಲ್ಲದೆ ಅವನು ತನ್ನದೇ ಆದ ಒಂದು ವಿಶಿಷ್ಟ ಕಾರ್ಯ ವಿಧಾನವನ್ನೂ ಜಾರಿಗೊಳಿಸುತ್ತಾನೆ. ಅವನು ಅದರ ಮೂಲಕ ತನ್ನ ಶಕ್ತಿ ವೈಭವಗಳನ್ನು ಪ್ರದರ್ಶಿಸುತ್ತಾನೆ ಮತ್ತು ತನ್ನ ಸಾಮರ್ಥ್ಯವನ್ನು ತೋರಿಸಿ ಕೊಡುತ್ತಾನೆ. ಇದು ಎಂತಹ ವಿಶಿಷ್ಟ ಕಾರ್ಯ ವಿಧಾನವೆಂದರೆ ಕೆಲವು ತಿಳಿಗೇಡಿಗಳು ತಮ್ಮ ಅಜ್ಞಾನದ ಕಾರಣದಿಂದ ಅದನ್ನು ನಿರಾಕರಿಸುತ್ತಾರೆ. ಅವರು ನೈಸರ್ಗಿಕ ನಿಯಮಗಳ ಹೊರತು ಅನ್ಯ ಯಾವುದೇ ದೈವಿಕ ನಿಯಮವನ್ನು ಅಲ್ಲಗಳೆಯುತ್ತಾರೆ. ಅವರು ನೈಸರ್ಗಿಕ ನಿಯಮಗಳನ್ನು ಮಾತ್ರ ದೈವಿಕ ನಿಯಮಗಳೆಂದು ಕರೆಯುತ್ತಾರೆ. ನೈಸರ್ಗಿಕ ನಿಯಮಗಳು ಮಾತ್ರವಲ್ಲ ಬೇರೆ ದೈವಿಕ ನಿಯಮಗಳು ಸಹ ಇವೆ. ಅವುಗಳ ಮೂಲಕ ದೇವನು ತನಗೆ ಪ್ರಿಯರಾದವರಿಗೆ ಸಹಾಯಮಾಡುತ್ತಾನೆಮತ್ತು ಅವರ ಶತ್ರುಗಳನ್ನು ನಾಶಮಾಡುತ್ತಾನೆ. ಇಂತಹ ನಿಯಮಗಳು ಇಲ್ಲದಿರುತ್ತಿದ್ದರೆ ಬಲಹೀನರಾದ ಪ್ರವಾದಿ ಮೂಸಾ(ಅ) ಫಿರ್‌ಔನನ ಹಾಗಿರುವ ನಿರಂಕುಶ ಪ್ರಭುವನ್ನು ಜಯಿಸಲು ಹೇಗೆ ಸಾಧ್ಯವಾಗುತ್ತಿತ್ತು? ಪ್ರವಾದಿ ಮೂಸಾ(ಅ) ಬಲಹೀನರಾಗಿದ್ದರೂ ಜಯಗಳಿಸಿದರು. ಫಿರ್‌ಔನ್ ಶಕ್ತಿಶಾಲಿಯಾಗಿದ್ದರೂ ನಾಶವಾದನು.

ದೇವನ ವಿಶಿಷ್ಟ ನಿಯಮಗಳು ಇಲ್ಲದಿದ್ದರೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಾಶವನ್ನು ಎಲ್ಲಾ ಅರಬಿಗಳು ಅಗ್ರಹಪೂರ್ಣವಾಗಿ ಆಶಿಸುತ್ತಿದ್ದು ಅದಕ್ಕಾಗಿ ಪ್ರಯತ್ನಿಸುತ್ತಾ ಇದ್ದರೂ ಹಝ್ರತ್ ಪೈಗಂಬರರು(ಸ) ಎಲ್ಲಾ ಕ್ಷೇತ್ರಗಳಲ್ಲಿ ಜಯಶಾಲಿಯಾದುದಾದರೂ ಹೇಗೆ? ಅವರು ಶತ್ರುಗಳ ಆಕ್ರಮಣಗಳಿಂದ ರಕ್ಷಿಸಲ್ಪಟ್ಟರು. ಅವರು ಹತ್ತು ಸಾವಿರ ಪರಿಶುದ್ಧರೊಂದಿಗೆ ಮಕ್ಕವನ್ನು ಜಯಿಸಿದರು. ಅವರು ತನ್ನ ನಿಷ್ಠಾವಂತನಾದ ಒಬ್ಬ ಅನುಯಾಯಿಯೊಂದಿಗೆ ಹಿಂದೆ ಅಲ್ಲಿಂದ ಹೊರಟು ಹೋಗಬೇಕಾಗಿ ಬಂದಿತ್ತು. ಏನು, ನೈಸರ್ಗಿಕ ನಿಯಮಗಳು ಇಂತಹ ಘಟನೆಗಳನ್ನು ಸೃಷ್ಟಿಸಬಲ್ಲವೇ? ಖಂಡಿತವಾಗಿಯೂ ಇಲ್ಲ. ನೈಸರ್ಗಿಕ ನಿಯಮದ ಪ್ರಕಾರ ಬಲಹೀನ ಶಕ್ತಿ ಬಲಶಾಲಿ ಶಕ್ತಿಯ ಎದುರು ಸೋತು ಹೋಗುತ್ತದೆ. ಪ್ರತಿಯೊಬ್ಬ ಬಲಹೀನನು ಬಲಶಾಲಿಯ ಕೈಯಿಂದ ನಾಶಗೊಳಿಸಲ್ಪಡುತ್ತಾನೆ.

9. ಮೃತನಾದ ನಂತರ ಮನುಷ್ಯನು ಪುನಃ ಎಬ್ಬಿಸಲ್ಪಡುವನು ಎಂದು ನಾವು ದೃಢವಾಗಿ ನಂಬುತ್ತೇವೆ. ಅವನು ಇಹಲೋಕದಲ್ಲಿ ಮಾಡಿದ ಕೆಲಸಗಳ ಕುರಿತು ಅವನ ಲೆಕ್ಕಾಚಾರ ಮಾಡಲಾಗುವುದು. ಸತ್ಕಾರ್ಯಗಳನ್ನು ಮಾಡಿದವನೊಂದಿಗೆ ದೇವನು ಉತ್ತಮವಾಗಿ ವರ್ತಿಸುವನು. ದೇವನ ಆಜ್ಞೆಗಳನ್ನು ಉಲ್ಲಂಘಿಸಿದವನನ್ನು ಶಿಕ್ಷೆಗೆ ಗುರಿಪಡಿಸಲಾಗುವುದು. ಈ ಪುನರುಜ್ಜೀವನದಿಂದ ಮನುಷ್ಯನನ್ನು ರಕ್ಷಿಸಲು ಯಾರಿಗೂ ಸಾಧ್ಯವಿಲ್ಲ. ಮನುಷ್ಯನ ದೇಹವನ್ನು ಆಕಾಶದಲ್ಲಿ ಹಾರುವ ಹದ್ದುಗಳು ಅಥವಾ ಕಾಡಿನ ಹಿಂಸ್ರ ಪ್ರಾಣಿಗಳು ತಿಂದು ಹಾಕಿದರೂ ಭೂಮಿಯ ಕ್ರಿಮಿ ಕೀಟಗಳು ಅವನ ದೇಹವನ್ನು ಪುಡಿಪುಡಿ ಮಾಡಿದರೂ ಅದನ್ನು ಬೇರೆ ರೂಪಕ್ಕೆ ಪರಿವರ್ತಿಸಿದರೂ ದೇಹವನ್ನು ಎಲುಬುಗಳ ಸಹಿತ ಸುಟ್ಟು ಹಾಕಿದರೂ ಮನುಷ್ಯನನ್ನು ಪುನರುಜ್ಜೀವಿಸಿ ಎಬ್ಬಿಸಲಾಗುವುದು. ಅವನು ತನ್ನ ಸೃಷ್ಟಿಕರ್ತನ ಮುಂದೆ ತನ್ನ ಲೆಕ್ಕವನ್ನು ನೀಡಬೇಕಾಗುವುದು. ಒಬ್ಬ ಮನುಷ್ಯನ ಮೊದಲಿನ ದೇಹವಿದ್ದರೆ ಮಾತ್ರ ಆತನು ಪುನರುಜ್ಜೀವಿಸಲ್ಪಡಲು ಸಾಧ್ಯ ಎಂದಿಲ್ಲ. ದೇವನು ಮನುಷ್ಯನ ದೇಹದ ಸೂಕ್ಷ್ಮಾತಿ ಸೂಕ್ಷ್ಮ ಕಣಗಳಿಂದಲೂ ಆತ್ಮದ ಸೂಕ್ಷ್ಮ ಭಾಗದಿಂದಲೂ ಮನುಷ್ಯನನ್ನು ಪುನರುಜ್ಜೀವಿಸುವಂತೆ ಮಾಡಬಲ್ಲನು.

ಮನುಷ್ಯನ ದೇಹವು ನಾಶವಾದರೂ ಅದರ ಸೂಕ್ಷ್ಮ ಕಣಗಳು

ನಾಶವಾಗುವುದಿಲ್ಲ ಮತ್ತು ಮನುಷ್ಯ ಶರೀರದಲ್ಲಿ ಇರುವ ಆತ್ಮ ಸಹ ಅಲ್ಲಾಹನ ಅನುಮತಿಯಿಲ್ಲದೆ ನಾಶವಾಗಲಾರದು.

10. ನಾವು ಹೀಗೆಯೂ ದೃಢವಾಗಿ ನಂಬುತ್ತೇವೆ: ದೇವನ ಅಸ್ತಿತ್ವವನ್ನು ನಿರಾಕರಿಸುವವರನ್ನು ಮತ್ತು ಅವನ ಧರ್ಮದ ಶತ್ರುಗಳನ್ನು ದೇವನು ತನ್ನ ಪರಿಪೂರ್ಣ ಕರುಣೆಯಿಂದ ಕ್ಷಮಿಸದಿದ್ದರೆ ಅವರನ್ನು ನರಕಕ್ಕೆ (ಜಹನ್ನಮ್‌ಗೆ) ಹಾಕಲಾಗುವುದು. ಅದರಲ್ಲಿ ಅಗ್ನಿಯ ಮತ್ತು ಕಠೋರ ಶೈತ್ಯದ ಶಿಕ್ಷೆ ನೀಡಲಾಗುವುದು. ಆ ಜನರಿಗೆ ಕಷ್ಟ ಕೊಡುವುದನ್ನು ಮಾತ್ರವಲ್ಲ ಅವರ ಮುಂದಿನ ಸುಧಾರಣೆ ಸಹ ಗಮನದಲ್ಲಿರಿಸಲಾಗುವುದು. ಆ ಸ್ಥಳದಲ್ಲಿ ಗೋಳಾಡುವುದು, ಎದೆಗೆ ಬಡಿದುಕೊಳ್ಳುವುದು ಮತ್ತು ಹಲ್ಲು ಕಡಿಯುವುದು ಹೊರತು ಇನ್ನೇನೂ ಇರದು. ದೇವನ ಕಾರುಣ್ಯವು ಎಲ್ಲಾ ವಿಷಯಗಳ ಮೇಲೆ ಜಯಗಳಿಸುವುದರಿಂದ ಅವರನ್ನು ಕೊನೆಗೆ ಅದು ಆವರಿಸುವುದು ಮತ್ತು ದೇವನ ಈ ವಾಗ್ದಾನವು ಈಡೇರುವುದು:

"ನರಕದಲ್ಲಿ ಒಬ್ಬನಾದರೂ ಬಾಕಿಯಾಗಿ ಉಳಿಯದ ಒಂದು ಕಾಲವು ಬರಲಿರುವುದು. ಅದರ ಬಾಗಿಲುಗಳನ್ನು ತಂಗಾಳಿಯು ಅಲುಗಾಡಿಸುತ್ತಾ ಇರುವುದು." (ಮಆಲಿಮುತ್ತನ್‌ಝೀಲ್ ಎಂಬ ಪವಿತ್ರ ಖುರ್‌ಆನಿನ ತಫ್ಸೀರ್ ಗ್ರಂಥದಲ್ಲಿ ಸೂರತುಲ್ ಹೂದ್‌ನಲ್ಲಿರುವ ವ ಅಮ್ಮಲ್ಲಝೀನ ಶಖೂ.... ಎಂಬ ವಚನದ ವ್ಯಾಖ್ಯಾನದಲ್ಲಿ ಉಲ್ಲೇಖಿತವಾದ ಹದೀಸು)

11. ನಾವು ಹೀಗೆಯೂ ದೃಢವಾಗಿ ನಂಬುತ್ತೇವೆ:

ಅಲ್ಲಾಹನಲ್ಲೂ ಅವನ ಪ್ರವಾದಿಗಳಲ್ಲೂ ದೇವದೂತರಲ್ಲೂ ದೈವಿಕ ಗ್ರಂಥಗಳಲ್ಲೂ ನಂಬಿಕೆಯನ್ನು ಇರಿಸುವವರು, ದೇವನ ಆಜ್ಞೆಗಳನ್ನು ಹೃತ್ಪೂರ್ವಕವಾಗಿ ನಿಷ್ಠೆಯಿಂದ ಪಾಲಿಸುವವರು, ವಿನಯ ಮತ್ತು ಅಹಂಕಾರರಹಿತರಾಗಿ ವರ್ತಿಸುವವರು, ಹಿರಿಯರಾದರೂ ಕಿರಿಯರಾಗಿ ವರ್ತಿಸುವವರು, ಐಶ್ವರ್ಯವಂತರಾಗಿದ್ದರೂ ಬಡವರ ಹಾಗೆ ಜೀವಿಸುವವರು, ದೇವನ ಸೃಷ್ಟಿಗಳ ಸೇವೆ ಮಾಡುವವರು, ತಮ್ಮ ಸುಖಕ್ಕಿಂತ ಅನ್ಯರ ಸುಖಕ್ಕೆ ಆದ್ಯತೆ ನೀಡುವವರು, ದೌರ್ಜನ್ಯ, ಅತಿರೇಕ ವರ್ತನೆ ಮತ್ತು ವಿಶ್ವಾಸ ವಂಚನೆಯನ್ನು ಮಾಡದವರು, ಸುಸ್ವಭಾವ ಹೊಂದಿರುವವರು, ಎಲ್ಲಾ ಕೆಟ್ಟ ಸ್ವಭಾವಗಳನ್ನು ತ್ಯಜಿಸಿದವರು, ಸ್ವರ್ಗ (ಜನ್ನತ್) ಎಂಬ ಸ್ಥಳದಲ್ಲಿ ಪ್ರವೇಶಿಸಲ್ಪಡುವರು. ಅಲ್ಲಿ ಸುಖ ಮತ್ತು ನೆಮ್ಮದಿ ಮಾತ್ರವಿರುವುದು. ದುಃಖ ಮತ್ತು ಕಷ್ಟದ ಕುರುಹು ಕೂಡ ಅಲ್ಲಿರದು. ದೇವನ ತೃಪ್ತಿ ಆ ಮನುಷ್ಯರಿಗೆ ಲಭಿಸುವುದು. ಅವನನ್ನು ದರ್ಶಿಸುವ ಭಾಗ್ಯ ಲಭಿಸುವುದು. ಅವರು ದೇವನ ಅನುಗ್ರಹದ ಚಾದರದಲ್ಲಿ ಸುತ್ತಲ್ಪಡುವರು. ದೇವನ ಎಂತಹ ಸಾಮೀಪ್ಯ ಅವರಿಗೆ ಲಭಿಸುವುದೆಂದರೆ ಆ ಜನರು ದೇವನ ಕನ್ನಡಿಯಾಗುವರು. ದೇವನ ಗುಣಗಳು ಆ ಜನರಲ್ಲಿ ಪರಿಪೂರ್ಣವಾಗಿ ಪ್ರಕಾಶಿಸುವುದು. ಆ ಜನರ ಎಲ್ಲಾ ನೀಚ ಆಶೆಗಳು ನಿರ್ನಾಮವಾಗುವುದು. ಅಂತಹ ಮನುಷ್ಯರ ಇಚ್ಛೆ ದೇವನ ಇಚ್ಛೆಯಂತಾಗುವುದು. ಅಂತಹ ಜನರು ಶಾಶ್ವತ ಜೀವಿತವನ್ನು ಪಡೆದು ದೇವನ ಗುಣಗಳ ಪ್ರಕಟಣೆ ಮಾಡುವವರಾಗುವರು.

ಮೇಲೆ ವಿವರಿಸಿದವು ನಮ್ಮ ದೃಢ ನಂಬಿಕೆಗಳಾಗಿವೆ. ಇಸ್ಲಾಮ್ ಧರ್ಮದಲ್ಲಿ ಪ್ರವೇಶಗೊಳ್ಳಲು ಇವುಗಳ ಹೊರತು ಬೇರೆ ಯಾವ ನಂಬಿಕೆಗಳಿವೆ ಎಂಬುದು ನಮಗೆ ತಿಳಿಯದು. ಎಲ್ಲಾ ಧಾರ್ಮಿಕ ನೇತಾರರು ಇವುಗಳನ್ನೇ ಇಸ್ಲಾಮ್ ಧರ್ಮದ ವಿಶ್ವಾಸಗಳಾಗಿ ಗಣಿಸುತ್ತಾ ಬರುತ್ತಿರುವರು. ನಾವು ಈ ವಿಷಯದಲ್ಲಿ ಅವರೊಂದಿಗೆ ಒಮ್ಮತವನ್ನು ಹೊಂದಿದ್ದೇವೆ. ✪

(.......6ನೇ ಪುಟದಿಂದ)

ತನ್ನ ಸಮುದಾಯ ಸಹ ಇಸ್ಲಾಮ್‌ಗೆ ಸೇರಬೇಕೆಂದು ಅವರು ಉಪದೇಶಿಸಿದರು. ಹಲವು ಯಹೂದಿಯರು ಅನಂತರ ಮುಸ್ಲಿಮರಾದರು. ಉದಾಹರಣೆಗೆ, ತಲಬ ಬಿನ್ ಸೈಯ, ಉಸೈದ್ ಬಿನ್ ಸೈಯ, ಅಸದ್ ಬಿನ್ ಉಬೈದ್ ಮೊದಲಾದವರು. (ಇಬ್ನು ಇಸ್‌ಹಾಖರ ಸೀರತ್ ರಸೂಲುಲ್ಲಾಹ್ ನೋಡಿರಿ).

ಅದೇ ರೀತಿ ಕ್ರೈಸ್ತರಾದ ಫಾರ್ಸಿ ವಂಶಜ ಸಲ್ಮಾನ್, ಸುಹೈಬ್ ರೂಮೀ ಮತ್ತು ಬೇರೆ ಅನೇಕ ಕ್ರೈಸ್ತರು ಇಸ್ಲಾಮ್ ಧರ್ಮಕ್ಕೆ ಸೇರಿದರು.

ಇಸ್ಲಾಮ್ ಇತರ ಎಲ್ಲಾ ಧರ್ಮಗಳ ಮೇಲೆ ತಾತ್ವಿಕವಾದ ವಿಜಯ ಸಾಧಿಸುವುದೆಂದು ಪವಿತ್ರ ಖುರ್‌ಆನ್ ಘೋಷಿಸಿರುವಾಗ ಯಹೂದಿ ಮತ್ತು ಕ್ರೈಸ್ತ ಧರ್ಮಗಳು ಅದಕ್ಕೆ ಹೊರತಾಗಲಾರವು.

"ಎಲ್ಲಾ ಧರ್ಮಗಳು" ಎಂದು ಮೇಲಿನ ಖುರ್‌ಆನ್ ವಚನದಲ್ಲಿ ಹೇಳಿದುದು "ಎಲ್ಲಾ ಧರ್ಮಗಳ ಎಲ್ಲಾ ಅನುಯಾಯಿಗಳು" ಎಂಬ ಅರ್ಥದಲ್ಲಿ ಆಗಿದೆ. ಇದು ಸಕಲ ಮಾನವರನ್ನು ಒಳಗೊಂಡಿದೆ. ಹಝ್ರತ್ ಪ್ರವಾದಿಯವರು(ಸ) ತಾನು ಲೋಕದಾದ್ಯಂತ ಇರುವ ಮಾನವರಿಗಾಗಿ ನೇಮಿಸಲ್ಪಟ್ಟ ಪ್ರವಾದಿ ಎಂಬ ಸಂಗತಿ ಚೆನ್ನಾಗಿ ಮನವರಿಕೆ ಮಾಡಿಕೊಂಡಿದ್ದಾರೆಂಬುದನ್ನು ಸ್ಪಷ್ಟಪಡಿಸಲು ಮೇಲಿನ ವಚನ ಮಾತ್ರ ಸಾಕು. ಹಳೆಕಾಲದ ಕ್ರೈಸ್ತ ಓರಿಯಂಟಲಿಸ್ಟರು ಧಾರ್ಮಿಕವಾದ ಪೂರ್ವಗ್ರಹವನ್ನು ಹೊಂದಿರುವುದರಿಂದ ಈ ಸತ್ಯವನ್ನು ನಿಶ್ಚಯವಾಗಿಯೂ ನಿರಾಕರಿಸುವರು. ಹೊಸಯುಗದ ಓರಿಯೆಂಟಲಿಸ್ಟರು ಸಹ ಸ್ವಲ್ಪ ವಿಭಿನ್ನವಾದ ಪದಗಳನ್ನು ಬಳಸಿಕೊಂಡು ಇದೇ ವಾದವನ್ನು ಮಂಡಿಸುತ್ತಾರೆ.

ಪವಿತ್ರ ಖುರ್‌ಆನನ್ನು ದೇವವಚನವೆಂದು ಓರಿಯೆಂಟಲಿಸ್ಟರು ಅಂಗೀಕರಿಸುವುದಿಲ್ಲವಾದರೂ ಅದರ ಪ್ರತಿಯೊಂದು ವಚನ ಪ್ರವಾದಿ ಸ್ವತಃ ರಚಿಸಿದ, ಯಾವುದೇ ಬದಲಾವಣೆಗೆ ಗುರಿಯಾಗದ ಕೃತಿಯೆಂದು ಅವರು ಅಂಗೀಕರಿಸುತ್ತಾರೆ. ಮ್ಯೂರ್ ಹೀಗೆ ಹೇಳುತ್ತಾರೆ:

"ನಾವು ಬಲಯುತವಾದ ಸಾಕ್ಷ್ಯಾಧಾರಗಳ ಮೂಲಕ ಒತ್ತಿ ಹೇಳುತ್ತೇವೆ: ಖುರ್‌ಆನ್‌ನಲ್ಲಿರುವ ಪ್ರತಿಯೊಂದು ವಚನ ಮುಹಮ್ಮದ್ ಸ್ವತಃ ರಚಿಸಿದ, ಯಾವುದೇ ಬದಲಾವಣೆಗೆ ಒಳಗಾಗದ ಕೃತಿಯಾಗಿದೆ. ನಾವು ವಾನ್ ಹ್ಯಾಮರ್ ಹೇಳಿದ ತೀರ್ಪನ್ನು ಅಂಗೀಕರಿಸಿ ಹೇಳುತ್ತೇವೆ: ಮುಹಮ್ಮದೀಯರು ಖುರ್‌ಆನನ್ನು ದೇವ ವಚನವೆಂದು ಅಂಗೀಕರಿಸಿ ದೃಢವಾಗಿ ಹೇಳುವ ರೀತಿಯಲ್ಲಿ ನಾವು ಅದನ್ನು ಮುಹಮ್ಮದರ ವಚನವೆಂದು ದೃಢವಾಗಿ ಹೇಳುತ್ತೇವೆ." (ಲೈಫ್ ಆಫ್ ಮುಹಮ್ಮದ್- ಪುಟ 563)

ಮೇಲಿನ ಹೇಳಿಕೆಯ ಪ್ರಕಾರ ಪ್ರವಾದಿಯವರ ಆಶಯಗಳನ್ನೂ ವಿಚಾರಗಳನ್ನೂ ಪವಿತ್ರ ಖುರ್‌ಆನ್ ಚಿತ್ರಿಸುತ್ತದೆ. ಮೇಲೆ ಉಲ್ಲೇಖಿಸಲಾದ ಪವಿತ್ರ ಖುರ್‌ಆನ್ ವಚನಗಳು ಇಸ್ಲಾಮ್ ಸಾರ್ವಲೌಕಿಕ ಧರ್ಮವೆಂದು ಸ್ಪಷ್ಟವಾಗಿ ಹೇಳಿರುವುದರಿಂದ ಅದು ಸಕಲ ಮಾನವರ ಸೇವೆಗಾಗಿ ಇರುವ ಧರ್ಮವೆಂಬುದು ನಿರ್ಣಾಯಕವಾಗಿ ಸಾಬೀತಾಗುತ್ತದೆ. ✻

ಮಕ್ಕಳ ಪಂಕ್ತಿ

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ಪ್ರವಾದಿಗಳು

ಜನರು ದಾರಿ ತಪ್ಪಿ ನಡೆದು ಅಲ್ಲಾಹನನ್ನು ಮರೆತು ಬಿಡುವಾಗ ಅಲ್ಲಾಹನು ತನ್ನ ಪ್ರವಾದಿಗಳನ್ನೂ ಸಂದೇಶವಾಹಕರನ್ನೂ ಲೋಕದ ಮಾರ್ಗದರ್ಶನಕ್ಕಾಗಿ ಕಳುಹಿಸುತ್ತಾನೆ. ಅವರು ತಮಗೆ ಲಭಿಸುವ ಅಲ್ಲಾಹನ ಸಂದೇಶಗಳನ್ನು ಜನರಿಗೆ ತಿಳಿಸಿಕೊಡುತ್ತಾ, ಸದುಪದೇಶ ಮತ್ತು ಉತ್ತಮ ಮಾದರಿ ಮೂಲಕ ಜನರನ್ನು ಸರಿಯಾದ ದಾರಿಯಲ್ಲಿ ನಡೆಸುತ್ತಾರೆ. ಅವರು ಪರಿಶುದ್ಧರೂ ಸತ್ಯವಂತರೂ ಆಗಿದ್ದಾರೆ. ಅಲ್ಲಾಹನಿಗೆ ಅನುಸಾರವಾಗಿ ಹೊರತು ಅವರು ಏನನ್ನೂ ಮಾಡಲಾರರು; ಏನನ್ನೂ ಹೇಳಲಾರರು. ಅಲ್ಲಾಹನು ಅವರಿಗೆ ಎಲ್ಲ ಕಾಲದಲ್ಲಿಯೂ ಸಹಾಯ ಮಾಡುತ್ತಾನೆ. ಲೋಕದಲ್ಲಿ ಹಲವು ಕಾಲಘಟ್ಟಗಳಲ್ಲಿ ವಿವಿಧ ಸಮುದಾಯಗಳಲ್ಲಿ ಅನೇಕ ಪ್ರವಾದಿಗಳು ಆಗಮಿಸಿದ್ದಾರೆ. ಪ್ರವಾದಿ ಆಗಮಿಸದೆ ಇದ್ದ ಯಾವುದೇ ಸಮುದಾಯವಿಲ್ಲವೆಂದು ಖುರ್‌ಆನ್ ಹೇಳುತ್ತದೆ. ಇಂದಿನ ತನಕ ಲೋಕದಲ್ಲಿ ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರ ಪ್ರವಾದಿಗಳು ಆಗಮಿಸಿದ್ದಾರೆಂದು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಹೇಳಿದ್ದಾರೆ. ಆದರೆ ಕೆಲವು ಪ್ರವಾದಿಗಳ ಹೆಸರುಗಳು ಮಾತ್ರ ಪವಿತ್ರ ಖುರ್‌ಆನಿನಲ್ಲಿ ಉಲ್ಲೇಖಿತವಾಗಿವೆ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಿಗೆ ಮುಂಚಿತವಾಗಿ ಲೋಕದಲ್ಲಿ ಆಗಮಿಸಿರುವುದಾಗಿ ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಲ್ಪಟ್ಟ ಪ್ರವಾದಿಗಳ ಹೆಸರುಗಳು ಈ ಕೆಳಗಿನಂತಿವೆ:

| | | | | | |
|---|---|---|---|---|---|
| 1. | ಹಝ್ರತ್ ಆದಮ್ | ಅಲೈಹಿಸ್ಸಲಾಮ್ | 13. | ಹಝ್ರತ್ ಶುಐಬ್ | ಅಲೈಹಿಸ್ಸಲಾಮ್ |
| 2. | ಹಝ್ರತ್ ಇದ್ರೀಸ್ | ಅಲೈಹಿಸ್ಸಲಾಮ್ | 14. | ಹಝ್ರತ್ ಮೂಸಾ | ಅಲೈಹಿಸ್ಸಲಾಮ್ |
| 3. | ಹಝ್ರತ್ ನೂಹ್ | ಅಲೈಹಿಸ್ಸಲಾಮ್ | 15. | ಹಝ್ರತ್ ಹಾರೂನ್ | ಅಲೈಹಿಸ್ಸಲಾಮ್ |
| 4. | ಹಝ್ರತ್ ಹೂದ್ | ಅಲೈಹಿಸ್ಸಲಾಮ್ | 16. | ಹಝ್ರತ್ ಅಲ್‌ಯಸಅ್ | ಅಲೈಹಿಸ್ಸಲಾಮ್ |
| 5. | ಹಝ್ರತ್ ಸಾಲಿಹ್ | ಅಲೈಹಿಸ್ಸಲಾಮ್ | 17. | ಹಝ್ರತ್ ಸುಲೈಮಾನ್ | ಅಲೈಹಿಸ್ಸಲಾಮ್ |
| 6. | ಹಝ್ರತ್ ಇಬ್ರಾಹೀಮ್ | ಅಲೈಹಿಸ್ಸಲಾಮ್ | 18. | ಹಝ್ರತ್ ದಾವೂದ್ | ಅಲೈಹಿಸ್ಸಲಾಮ್ |
| 7. | ಹಝ್ರತ್ ಲೂತ್ | ಅಲೈಹಿಸ್ಸಲಾಮ್ | 19. | ಹಝ್ರತ್ ಝುಲ್‌ಕಿಫ್‌ಲ್ | ಅಲೈಹಿಸ್ಸಲಾಮ್ |
| 8. | ಹಝ್ರತ್ ಇಸ್ಮಾಈಲ್ | ಅಲೈಹಿಸ್ಸಲಾಮ್ | 20. | ಹಝ್ರತ್ ಇಲ್‌ಯಾಸ್ | ಅಲೈಹಿಸ್ಸಲಾಮ್ |
| 9. | ಹಝ್ರತ್ ಇಸ್‌ಹಾಖ್ | ಅಲೈಹಿಸ್ಸಲಾಮ್ | 21. | ಹಝ್ರತ್ ಯೂನುಸ್ | ಅಲೈಹಿಸ್ಸಲಾಮ್ |
| 10. | ಹಝ್ರತ್ ಯಅ್‌ಖೂಬ್ | ಅಲೈಹಿಸ್ಸಲಾಮ್ | 22. | ಹಝ್ರತ್ ಝಕರಿಯ್ಯಾ | ಅಲೈಹಿಸ್ಸಲಾಮ್ |
| 11. | ಹಝ್ರತ್ ಅಯ್ಯೂಬ್ | ಅಲೈಹಿಸ್ಸಲಾಮ್ | 23. | ಹಝ್ರತ್ ಯಹ್‌ಯಾ | ಅಲೈಹಿಸ್ಸಲಾಮ್ |
| 12. | ಹಝ್ರತ್ ಯೂಸುಫ್ | ಅಲೈಹಿಸ್ಸಲಾಮ್ | 24. | ಹಝ್ರತ್ ಈಸಾ | ಅಲೈಹಿಸ್ಸಲಾಮ್ |

ಪ್ರವಾದಿಗಳ ಸ್ಥಾನಗಳಲ್ಲಿ ವ್ಯತ್ಯಾಸಗಳಿವೆ. ಅವರಲ್ಲಿ ಕೆಲವರ ಸ್ಥಾನ ಬೇರೆ ಕೆಲವರ ಸ್ಥಾನಗಳಿಗಿಂತ ಶ್ರೇಷ್ಠವಾಗಿದೆ. ನಮ್ಮ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಬೇರೆ ಎಲ್ಲ ಪ್ರವಾದಿಗಳಿಗಿಂತ ಶ್ರೇಷ್ಠರಾಗಿದ್ದಾರೆ. ಅವರು ಖಾತಮುನ್ನಬಿಯ್ಯೀನ್ ಆಗಿದ್ದಾರೆ. ಅವರು ಪ್ರವಾದಿಗಳಿಗೆ ಅಂಗೀಕಾರ ನೀಡುವ ಮುದ್ರೆಯಾಗಿದ್ದಾರೆ. ಅವರ ಅಂಗೀಕಾರದ ಮುದ್ರೆ ಲಭಿಸಿರುವ ಕಾರಣದಿಂದಲೇ ನಾವು ಇತರ ಪ್ರವಾದಿಗಳನ್ನು ನಂಬುತ್ತೇವೆ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಆಗಮನದ ನಂತರ, ಅವರನ್ನು ಅನುಸರಿಸದೆ ಪ್ರವಾದಿಯಾಗಲು ಯಾರಿಗೂ ಸಾಧ್ಯವಿಲ್ಲ. ಹಝ್ರತ್ ಪೈಗಂಬರರು ತಂದ ಶರೀಅತ್ (ಧಾರ್ಮಿಕ ನಿಯಮ ಸಂಹಿತೆ) ಪುನರುತ್ಥಾನ ದಿನದ ತನಕ ನೆಲೆನಿಲ್ಲುವುದು.

ಎಲ್ಲ ಪ್ರವಾದಿಗಳನ್ನು ನಂಬುವುದು ಮತ್ತು ಅವರನ್ನು ಗೌರವಿಸುವುದು ಪ್ರತಿಯೊಬ್ಬ ಮುಸ್ಲಿಮರಿಗೆ ಕಡ್ಡಾಯವಾಗಿದೆ.

ಪ್ರವಾದಿವರ್ಯರಾದ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಸಹಿತ ಎಲ್ಲಾ ಪ್ರವಾದಿಗಳು ಮೃತಪಟ್ಟಿದ್ದಾರೆ. ಅವರ ಪೈಕಿ ಯಾರೂ ಈ ಲೋಕಕ್ಕೆ ಹಿಂತಿರುಗಿ ಬರಲಾರರು.

ಪ್ರವಾದಿಗಳಿಗೆ ಅಲ್ಲಾಹನ ಸನ್ನಿಧಿಯಲ್ಲಿ ಉನ್ನತ ಸ್ಥಾನವಿದ್ದರೂ ತಿನ್ನುವ, ಕುಡಿಯುವ ಮತ್ತು ನಿದ್ರಿಸುವ ಶಾರೀರಿಕ ಅವಶ್ಯಕತೆಗಳು ಇತರ ಮನುಷ್ಯರಂತೆ ಅವರಿಗೆ ಸಹ ಇದೆ. ಅವರ ಪೈಕಿ ಯಾರನ್ನೂ ಅಲ್ಲಾಹನು ಮೃತಪಡಿಸದೆ ಉಳಿಸಿಲ್ಲ. ಅವರೆಲ್ಲರೂ ಭೂಮಿಯಲ್ಲಿ ಜೀವಿಸಿದ್ದರು. ಭೂಮಿಯಲ್ಲೇ ಅವರು ಮೃತರಾದರು. ಅವರ ಪೈಕಿ ಯಾರೂ ಆಕಾಶಕ್ಕೆ ಹೋಗಲಿಲ್ಲ. ಹಝ್ರತ್ ಈಸಾ ಅಲೈಹಿಸ್ಸಲಾಂ ಆಕಾಶಕ್ಕೇರಿ ಹೋಗಿರುವರೆಂದೂ ಅವರು ಅಲ್ಲೇ ಈಗಲೂ ಜೀವಿಸಿರುವರೆಂದೂ ಹಲವರು ತಪ್ಪಾಗಿ ನಂಬುತ್ತಾರೆ. ಅದು ಕೇವಲ ಅಂಧ ವಿಶ್ವಾಸವಾಗಿದೆ.

# ಅಹ್ಮದಿಯಾ ಜಮಾಅತಿನ ಪ್ರಗತಿ

2007 ಜುಲಾಯಿ 27, 28, 29ರಂದು ಲಂಡನಿನ "ಹದೀಖತುಲ್ ಮಹ್‌ದಿ"ಯಲ್ಲಿ ಜರಗಿದ 41ನೇ ಅಹ್ಮದಿಯಾ ಯು.ಕೆ. ವಾರ್ಷಿಕ ಸಮ್ಮೇಳನದ ದ್ವಿತೀಯ ದಿನ ಅಹ್ಮದಿಯಾ ಜಮಾಅತಿನ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು ಮಾಡಿದ ಭಾಷಣದ ಆಯ್ದ ಭಾಗಗಳು:

- ☆ ಈ ವರ್ಷ ಅಲ್ಲಾಹನ ಅನುಗ್ರಹದಿಂದ 4 ಹೊಸ ರಾಷ್ಟ್ರಗಳಲ್ಲಿ (ಗೌದೆಲೂಪೆ, ಸೈಂಟ್ ಮಾರ್ಟಿನ್, ಫ್ರೆಂಚ್ ಗಿಯಾನ, ಹೈಟಿ) ಅಹ್ಮದಿಯತ್ ಸ್ಥಾಪಿಸಲ್ಪಟ್ಟಿದೆ. ಹಾಗೆ ಜಗತ್ತಿನ 189 ರಾಷ್ಟ್ರಗಳಲ್ಲಿ ಈಗ ಅಹ್ಮದಿಯತ್ ಬೇರೂರಿದೆ.
- ☆ ಈ ವರ್ಷ ಪಾಕಿಸ್ಥಾನವನ್ನು ಬಿಟ್ಟು 653 ಹೊಸ ಅಹ್ಮದಿಯಾ ಘಟಕಗಳು ಸ್ಥಾಪಿಸಲ್ಪಟ್ಟಿವೆ.
- ☆ ಈ ವರ್ಷ ಅಹ್ಮದಿಯಾ ಜಮಾಅತ್ ಲೋಕದಾದ್ಯಂತ 169 ಹೊಸ ಮಸೀದಿಗಳನ್ನು ನಿರ್ಮಿಸಿದೆ. ಅದಲ್ಲದೆ, 130 ಮಸೀದಿಗಳು ಜಮಾಅತಿಗೆ ಲಭಿಸಿವೆ.
- ☆ ಈ ವರ್ಷ 186 ಹೊಸ ಪ್ರಚಾರ ಕೇಂದ್ರಗಳು ತೆರೆಯಲ್ಪಟ್ಟಿವೆ. ಹಾಗೆ ಲೋಕದಾದ್ಯಂತ ಇದುವರೆಗೆ 1869 ಪ್ರಚಾರ ಕೇಂದ್ರಗಳು ಸ್ಥಾಪಿತವಾಗಿವೆ.
- ☆ ಅನೇಕ ದೇಶಗಳಲ್ಲಿ ಅಹ್ಮದಿಯಾ ಮುದ್ರಣಾಲಯಗಳು ಸ್ಥಾಪಿಸಿಲ್ಪಟ್ಟಿವೆ.
- ☆ ಇಷ್ಟರವರೆಗೆ ಲೋಕದ 64 ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಅನುವಾದಗಳು ಪ್ರಕಟವಾಗಿವೆ. 10 ಭಾಷೆಗಳಲ್ಲಿ 'ಅಲ್‌ವಸಿಯ್ಯತ್' ಅನುವಾದಗಳು ಪ್ರಕಟಗೊಂಡಿವೆ.
- ☆ ಈ ವರ್ಷ ಜಮಾಅತಿನ ವತಿಯಿಂದ ಜಗತ್ತಿನಾದ್ಯಂತ 273 ವಸ್ತು ಪ್ರದರ್ಶನಗಳು ಮತ್ತು 2861 ಬುಕ್‌ಸ್ಟಾಲ್‌ಗಳನ್ನು ಏರ್ಪಡಿಸಲಾಗಿದೆ.
- ☆ 156 ಸ್ತ್ರೀ-ಪುರುಷ ಸ್ವಯಂ ಸೇವಕರ ಸಹಾಯದಿಂದ "ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ ಇಂಟರ್‌ನ್ಯಾಷನಲ್"ನ ಮೂರು ಚ್ಯಾನೆಲ್‌ಗಳು ದಿನಂಪ್ರತಿ ನಿರಂತರ 24 ಘಂಟೆಗಳ ಕಾಲ ಕಾರ್ಯನಿರತವಾಗಿವೆ. ಅದಲ್ಲದೆ ಲೋಕದ ವಿವಿಧ ಟಿ.ವಿ. ಸ್ಟೇಶನ್ ಮೂಲಕ 817 ಘಂಟೆಗಳ ಕಾಲದ 1398 ಕಾರ್ಯಕ್ರಮಗಳು ಪ್ರಸಾರಗೊಂಡು ಸುಮಾರು 8 ಕೋಟಿ ಜನರಿಗೆ ಅಹ್ಮದಿಯಾ ಸಂದೇಶವನ್ನು ತಲುಪಿಸಲಾಗಿದೆ.
- ☆ ಸಿಯರಾಲಿಯೋನ್, ಬೋರ್ಕಿನೊಫಾಸೋ ಮತ್ತು ಇತರ ರೇಡಿಯೋ ಕಾರ್ಯಕ್ರಮಗಳ ಮೂಲಕ ಸುಮಾರು 6 ಕೋಟಿ ಜನರಿಗೆ ಸತ್ಯ ಸಂದೇಶವನ್ನು ತಲುಪಿಸಲಾಯಿತು.
- ☆ ಆಫ್ರಿಕನ್ ದೇಶಗಳಲ್ಲಿ ವಿದ್ಯಾಭ್ಯಾಸ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಅಹ್ಮದಿಯಾ ಜಮಾಅತ್ ವ್ಯಾಪಕವಾಗಿ ಸ್ತುತ್ಯರ್ಹ ಸೇವೆ ಸಲ್ಲಿಸುತ್ತಿದೆ. "ಹ್ಯೂಮನಿಟಿ ಫಸ್ಟ್" ಸೇವಾ ಸಂಸ್ಥೆ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಏರ್ಪಡಿಸಿ ರಿಯಾಯಿತಿ ದರದಲ್ಲಿ ಕೈ ಪಂಪುಗಳನ್ನು ಒದಗಿಸುತ್ತಿದೆ.
- ☆ ಇಷ್ಟರವರೆಗೆ ಜಮಾಅತಿನ ವೆಬ್‌ಸೈಟಿನಲ್ಲಿ ಸುಮಾರು 200 ಪುಸ್ತಕಗಳು ಆನ್‌ಲೈನ್‌ನಲ್ಲಿ ಲಭ್ಯ.
- ☆ ಈ ವರ್ಷ ಲೋಕದ 146 ರಾಷ್ಟ್ರಗಳಿಂದ 2,61,969 ಮಂದಿ ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆ.

(ಮಾಹಿತಿ: ವಕಾಲತೆ ಮಾಲ್ ತಹ್ರೀಕೆ ಜದೀದ್)

# ಹಿಂದಿನ ಸಂಚಿಕೆಗಳನ್ನು ತಿರುವಿಹಾಕಿದಾಗ.....



## ಸಂಪಾದಕರಿಗೆ ಪತ್ರ

ಪ್ರಿಯರೇ,

ಅನ್ಯ ಮತಗಳ ಕುರಿತು ಇರುವ ಮೂಢನಂಬಿಕೆ, ಅಜ್ಞಾನ, ತಪ್ಪು ಭಾವನೆಗಳನ್ನು ತೊಡೆದು ಹಾಕಲು, ಪರಸ್ಪರರನ್ನು ತಿಳಿದುಕೊಳ್ಳಲು 'ಯುಗರಶ್ಮಿ' ಅತ್ಯುಪಯುಕ್ತವಾದ ಪತ್ರಿಕೆಯಾಗಿದೆ ಎಂದು ನನ್ನ ಮತ.

ಯೇಸು ಕ್ರಿಸ್ತರು ಶಿಲುಬೆಯಿಂದ ಜೀವಂತವಾಗಿ ಪಾರಾದರೆಂದೂ ನಂತರ ಶಿಷ್ಯರಿಗೆ ಕಾಣಿಸಿಕೊಂಡು ಬೋಧಿಸಿದರೆನ್ನುವ ಅಂಶವೂ, ಶ್ರೀಕೃಷ್ಣ, ಬೆಣ್ಣೆ ಮತ್ತು ಗೋಪಿಕೆಯರ ಬಗ್ಗೆ ಬರೆಯುತ್ತಾ ಬೆಣ್ಣೆಯನ್ನು ಆಧ್ಯಾತ್ಮಿಕ ಜ್ಞಾನಕ್ಕೂ ಗೋಪಿಕಾ ಸ್ತ್ರೀಯರ ವಸ್ತ್ರವನ್ನು ಭಕ್ತಿ ಅಥವಾ ಸತ್ಕರ್ಮಕ್ಕೆ ಹೋಲಿಸಿ ಪ್ರತಿಪಾದಿಸಿದ್ದೂ ಕುತೂಹಲಕಾರಿಯಾಗಿದೆ.

ಪತ್ರಿಕಾ ಸಂಪಾದನೆಯ ಅಡರು - ತೊಡರು, ನ್ಯೂಸ್‌ಪ್ರಿಂಟ್‌ನ ಅಭಾವ ಇವೊಂದೂ ನಿಮ್ಮ ಉದ್ದೇಶಕ್ಕೆ ಭಂಗ ತರದಿರಲೆಂದು ಹಾರೈಸುವ,

ನಿಮ್ಮವನೇ ಆದ,
- ತಿಲಕನಾಥ ಮಂಜೇಶ್ವರ.

(ಯುಗರಶ್ಮಿ ಮಾರ್ಚ್ 1976)

---

ಮಹನೀಯ ಸಂಪಾದಕರೇ,

ಕರ್ನಾಟಕ ರಾಜ್ಯದ ಕನ್ನಡ ಬಲ್ಲವರನ್ನುದ್ದೇಶಿಸಿ ಆರಂಭಿಸಲ್ಪಟ್ಟ 'ಯುಗರಶ್ಮಿ'ಗೆ ಎಲ್ಲಾ ವಿಭಾಗದವರಿಂದ ಪ್ರೋತ್ಸಾಹ ಲಭಿಸುವುದರಲ್ಲಿ ಸಂದೇಹವಿಲ್ಲ.

ಅಹ್ಮದಿಯಾ ಜಮಾಅತಿನ ಧ್ಯೇಯ ಧೋರಣೆಗಳನ್ನು ವಿಶದೀಕರಿಸುವ ಈ ಪತ್ರಿಕೆಯ ಮೂಲಕ ಜನರಲ್ಲಿ ಅಹ್ಮದಿಯರ ಕುರಿತುಂಟಾದ ತಪ್ಪಭಿಪ್ರಾಯಗಳನ್ನು ನೀಗಿಸಲೂ ಪ್ರಯೋಜನವಾಗಬಹುದೆಂದು ನನ್ನ ವಿಶ್ವಾಸ. ಎಲ್ಲಾ ಸಹೃದಯದ ಬೆಂಬಲ ಪತ್ರಿಕೆಗೆ ಲಭಿಸಲಿ ಎಂದು ಪ್ರಾರ್ಥನೆ.

- ಎನ್. ಅಬ್ದುಲ್ಲಾ

ಪತ್ರಿಕೋದ್ಯೋಗಿ, ಕುಂಬಳೆ.
(ಯುಗರಶ್ಮಿ ಮಾರ್ಚ್ 1976)

---

ಪ್ರಿಯರೇ,

ನಿಮ್ಮ ಪತ್ರಿಕೆಯನ್ನು ಮಿತ್ರರೋರ್ವರ ನೆರವಿನಿಂದ ನೋಡುವ ಅವಕಾಶ ದೊರಕಿತು. ಇಸ್ಲಾಂ ಧರ್ಮದ ವಿಚಾರವಾಗಿ ಕನ್ನಡ ನಾಡಿನ ಜನರಿಗೆ ಸವಿಸ್ತಾರವಾಗಿ ಸಂದೇಶವನ್ನು ತಲುಪಿಸ ಹೊರಟ ನಿಮ್ಮ ಸಾಹಸಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಮತೀಯವಾದ ಅಜ್ಞಾನವನ್ನು ಜನತೆಯಿಂದ ತೊಡೆದು ಹಾಕುವರೆ ಇಂತಹ ಪ್ರಯತ್ನಗಳು ಅಗತ್ಯವಾಗಿ ನಡೆಯಬೇಕಿದೆ. ಪರಮಾತ್ಮನು ನಿಮ್ಮ ಪ್ರಯತ್ನಕ್ಕೆ ಜಯವನ್ನೊದಗಿಸಲಿ ಎಂದು ಹಾರೈಸುತ್ತೇನೆ.

- ಕೆ. ವೆಂಕಟಕೃಷ್ಣಯ್ಯ

ಸಂಪಾದಕರು, ಗೀತಾ ಪ್ರಕಾಶನ, ಕಾಸರಗೋಡು.
(ಯುಗರಶ್ಮಿ ಮಾರ್ಚ್ 1976)

ಪುಸ್ತಕ ವಿಭಾಗ

# ಧರ್ಮದ ನಾಮದಲ್ಲಿ ರಕ್ತಪಾತ

- ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್

## ಅಧ್ಯಾಯ - 5

## ಧರ್ಮತ್ಯಾಗಿಗೆ ಸಂಬಂಧಿಸಿ ಮೌದೂದಿ ವಿಧಿ

"ಇದೊಂದು ಉಪದೇಶವಾಗಿದೆ. ಆದುದರಿಂದ ಯಾವನಾದರೂ ಬಯಸುವುದಾದರೆ ಅವನು ತನ್ನ ಪ್ರಭುವಿನ ಕಡೆಗಿರುವ ಒಂದು ಮಾರ್ಗವನ್ನು ಅವಲಂಬಿಸಲಿ." ಪವಿತ್ರ ಖುರ್‌ಆನ್ (76 : 30)

"ನಮ್ಮ ಆಡಳಿತೆಗೊಳಪಟ್ಟ ಪ್ರದೇಶದಲ್ಲಿರುವ ಮುಸ್ಲಿಮನಿಗೆ ಇಸ್ಲಾಮ್ ಧರ್ಮವನ್ನು ತ್ಯಜಿಸಿ ಬೇರೆ ಧರ್ಮವನ್ನು ಸ್ವೀಕರಿಸಲು ಅನುಮತಿ ನೀಡದಿರುವ ಹಾಗೆಯೇ ನಮ್ಮ ಪ್ರದೇಶದಲ್ಲಿ ಇಸ್ಲಾಮ್ ಧರ್ಮಕ್ಕೆ ಎದುರಾಗಿ ಬೇರೆ ಧರ್ಮ ಪ್ರಚಾರಗೊಳ್ಳುವುದನ್ನು ನಾವು ಸಹಿಸಲಾರೆವು." - ಮೌಲಾನ ಮೌದೂದಿ

(ಮುರ್ತದ್ ಕಿ ಸಝಾ ಇಸ್ಲಾಮೀ ಕಾನೂನ್ ಮೇಂ : ಪುಟ 32)

ರಾಜಕೀಯ ಅಧಿಕಾರವನ್ನು ಗಳಿಸಬೇಕೆಂಬ ಮೌಲಾನ ಮೌದೂದಿಯ ಮೋಹವು ಅಪರಿಮಿತವಾಗಿತ್ತು. ಧರ್ಮತ್ಯಾಗಿಗೆ ಶಿಕ್ಷೆ ನೀಡಲಿಕ್ಕಾಗಿ ಅವರು ರೂಪಿಸಿದ ನಿಯಮವು ಅವರ ನಿರಂಕುಶ ಮತ್ತು ಸಹಿಷ್ಣುತೆ ರಹಿತವಾದ ವ್ಯಕ್ತಿತ್ವದ ವಿಸ್ತರಣೆಯಾಗಿದೆ. ಅದಕ್ಕೆ ಇಸ್ಲಾಮಿನೊಂದಿಗೆ ಯಾವುದೇ ಸಂಬಂಧವಿಲ್ಲ. ಮೌಲಾನ ಮೌದೂದಿಯೊಂದಿಗೆ ನಿಕಟ ಸಂಬಂಧ ಸ್ಥಾಪಿಸಿ ಅವರೊಂದಿಗೆ ಕೆಲಸ ಮಾಡುತ್ತಿದ್ದ ಡಾಕ್ಟರ್ ಇಸ್ರಾರ್ ಅಹ್ಮದ್ ಹೀಗೆ ಹೇಳಿದ್ದಾರೆ: "ಮೌಲಾನ ಮೌದೂದಿ ತನ್ನ ಚಳುವಳಿಗೆ ಸಿದ್ಧಾಂತಗಳನ್ನು ಮೌಲಾನ ಅಬ್ದುಲ್ ಕಲಾಮ್ ಆಝಾದ್‌ರವರಿಂದ ಮತ್ತು ಖೈರಿ ಸಹೋದರರಿಂದ ಪಡೆದರು. ಅವರು ತನ್ನ ಸಿದ್ಧಾಂತಗಳನ್ನು ಬರೆದುದು ನಿಯಾಝ್ ಫತೇಹ್‌ಪುರಿಯ ಶೈಲಿಯಲ್ಲಿ ಆಗಿತ್ತು. ಆದರೆ ಮೌಲಾನ ಎಷ್ಟು ದುರಭಿಮಾನ ಹೊಂದಿದ್ದರೆಂದರೆ ತಾನು ಪ್ರತಿಪಾದಿಸಿದ ವಿಚಾರಗಳ ಮೂಲ ಕರ್ತೃ ತಾನಲ್ಲದೆ ಬೇರೆ ಯಾರೋ ಆಗಿದ್ದಾರೆಂಬುದನ್ನು ಅವರು ಒಪ್ಪಿಕೊಳ್ಳಲು ಎಂದೂ ಸಿದ್ಧರಿರಲಿಲ್ಲ."* (ಇಸ್ಲಾಮ್ ಔರ್ ಪಾಕಿಸ್ತಾನ್: ಪುಟ 72)

ಇದೇ ರೀತಿ ಧರ್ಮ ತ್ಯಾಗಕ್ಕೆ ಸಂಬಂಧಿಸಿದ ಮೌಲಾನ ಮೌದೂದಿಯ ವಿಚಾರಗಳು ಮುಸ್ಲಿಮ್ ಕರ್ಮಶಾಸ್ತ್ರದ ಒಂದು ತಪ್ಪು ವ್ಯಾಖ್ಯಾನದಿಂದ ಉದ್ಭವಿಸಿವೆಯಾದರೂ ಅವುಗಳು ಯಥಾರ್ಥದಲ್ಲಿ ಮಧ್ಯಕಾಲೀನ ಕ್ರೈಸ್ತ ಧರ್ಮದ ಆಚಾರಗಳ ಮೇಲೆ ಸ್ಥಾಪಿತವಾಗಿವೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನೊಂದಿಗೆ ಸಂಬಂಧ ಸ್ಥಾಪಿಸಿ ಹಿಂದುಗಳೊಡನೆ ಸಹಕರಿಸುತ್ತಿದ್ದರೂ ಶುದ್ಧಿ ಚಳುವಳಿಯನ್ನು ಎದುರಿಸುತ್ತಿದ್ದ ದೇವ್‌ಬಂದ್ ಮದ್ರಸ ಮೌದೂದಿಯವರ ಚಿಂತನೆಗಳಿಗೆ ವ್ಯಾಖ್ಯಾನಗಳನ್ನು ಒದಗಿಸಿಕೊಟ್ಟಿತು. ಯುವ ಪತ್ರಕರ್ತನಾಗಿದ್ದಾಗ ಮೌದೂದಿಯವರು ಕಾರ್ಲ್‌ಮಾರ್ಕ್ಸ್ ಬರಹಗಳನ್ನು ಓದಿದುದರ ಪ್ರಭಾವವು ಅವರ ಚಿಂತನೆಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಜಮಾಅತೆ ಇಸ್ಲಾಮಿ ಚಳುವಳಿ (ತಹ್‌ರೀಕೆ ಜಮಾಅತೆ ಇಸ್ಲಾಮಿ) ಮಧ್ಯಕಾಲೀನ ಕ್ರೈಸ್ತರ ಆಚಾರಗಳ, ದೇವ್‌ಬಂದಿ - ವಹಾಬಿ ಅಸಹಿಷ್ಣುತೆ ಮತ್ತು ಮಾರ್ಕ್ಸಿಸ್ಟ್ ಪ್ರಚೋದಿತ ಒಡುಕಗಳ ಒಂದು ವಿಚಿತ್ರ ಮಿಶ್ರಣವಾಗಿದೆ.

ನಾವು ಈ ಗ್ರಂಥದ ಪ್ರಥಮ ಅಧ್ಯಾಯದಲ್ಲಿ ನೋಡಿದ ಹಾಗೆ ಧಾರ್ಮಿಕ ಸ್ವಾತಂತ್ರ್ಯ ಎಂಬುದು ವಿಕಾಸಾತ್ಮಕ ಅಥವಾ ಆನುವಂಶಿಕವಾದುದು ಅಲ್ಲ. ಅದು ಚಕ್ರಗತಿಯಲ್ಲಿ ತಿರುಗುವ ಒಂದು ವಿದ್ಯಮಾನವಾಗಿದೆ. ದೇವ ಸಂದೇಶವಾಹಕರು ಅಥವಾ ಧರ್ಮ ಸುಧಾರಕರು ಆಗಮಿಸಿದಾಗಲೆಲ್ಲಾ ಅವರನ್ನು ವಿರೋಧಿಸಲಾಯಿತು. ಹಾಗೆ ಆಗಮಿಸಿದಾಗ ಸಂದೇಶವಾಹಕರು ಸಮಾಜದಲ್ಲಿ ಒಡಕನ್ನು ಉಂಟುಮಾಡುವವರೆಂದೂ ಸಂಪ್ರದಾಯವನ್ನು ಭಂಗಗೊಳಿಸುವವರೆಂದೂ ಆಕ್ಷೇಪಿಸಲಾಯಿತು. ಅವರನ್ನು ಧರ್ಮತ್ಯಾಗಿ ಎಂದು ಅಪಹಾಸ್ಯ ಮಾಡಲಾಯಿತು. ಅಂತಿಮವಾಗಿ ಪ್ರತಿಯೊಬ್ಬ ಪ್ರವಾದಿ ಧಾರ್ಮಿಕ ಸ್ವಾತಂತ್ರ್ಯವನ್ನು ಸ್ಥಾಪಿಸುವುದರಲ್ಲಿ ಯಾವಾಗಲೂ ಜಯಶಾಲಿಗಳಾಗುತ್ತಾರೆ. ಈ ಸ್ವಾತಂತ್ರ್ಯದ ಫಲ ಸ್ವರೂಪವಾಗಿ ಪ್ರಚಾರಗೊಳಿಸಲಾದ ಸತ್ಯಧರ್ಮವು ಅನಂತರ ಅನುಯಾಯಿಗಳು ಅವಲಂಬಿಸಿದ ನಿಷ್ಠುರ ತತ್ವಗಳ ಕಾರಣದಿಂದ ಕಠೋರವಾಗುತ್ತದೆ. ಅದರ ಪರಿಣಾಮವಾಗಿ ಮತಭೇದದ ಹಕ್ಕು ನಿರಾಕರಿಸಲ್ಪಡುತ್ತದೆ.

ಯೇಸು ಕ್ರಿಸ್ತರು ದೇವಾಲಯವನ್ನು ಕೊನೆಯ ಬಾರಿ ಸಂದರ್ಶಿಸಿದಾಗ ಹೀಗೆ ಹೇಳಿದರು:

"ಕೈಸರನದನ್ನು ಕೈಸರನಿಗೆ ಕೊಡಿರಿ; ದೇವರದನ್ನು ದೇವರಿಗೆ ಕೊಡಿರಿ." (ಮಾರ್ಕ್ 12 : 17)

ಈ ಸ್ಪಷ್ಟವಾದ ಹೇಳಿಕೆಯು ಧಾರ್ಮಿಕ ವಿಶ್ವಾಸವನ್ನು ರಾಜಕೀಯ ಅಧಿಕಾರದಿಂದ ಬೇರ್ಪಡಿಸುತ್ತದೆ. ಆದರೆ ಕ್ರೈಸ್ತ ಧರ್ಮೀಯರಿಗೆ ಅಧಿಕಾರ ದೊರೆತ ಕ್ರಿ. ಶ 312ರ ನಂತರ ಒಂದು ವರ್ಷ ದಾಟುವ ಮೊದಲೇ ಕ್ರೈಸ್ತ ಚರ್ಚ್‌ನಲ್ಲಿ ಭಿನ್ನಾಭಿಪ್ರಾಯಗಳಿಂದ ಒಡಕುಂಟಾಯಿತು. ಅದರ ಮೊದಲು ಮುನ್ನೂರು ವರ್ಷಗಳ ಕಾಲ ಕ್ರೈಸ್ತರು ಹಿಂಸಾಚಾರಗಳಿಗೆ ಗುರಿಯಾಗಿದ್ದರು. ಹೀಗಿದ್ದರೂ ರೋಮನ್ ಚಕ್ರವರ್ತಿ ಕೋನ್‌ಸ್ಟೆಂಟೈನ್ ಕ್ರೈಸ್ತ ಧರ್ಮಕ್ಕೆ ಸೇರಿದ ನಂತರ ಸನ್ಯಾಸಿ ಮಠಗಳು ಬೇರೆ ಬೇರೆಯಾದವು. ಡೊನಾಟಿಸ್ಟ್ ಮತ್ತು ಏರಿಯನ್ ಪಂಥಗಳು ಉಂಟಾದವು. ಕ್ರೈಸ್ತ ಚರ್ಚ್‌ಗೆ ಸಂಬಂಧಿಸಿದ ಚರಿತ್ರೆಯಲ್ಲಿ ಸಂಪ್ರದಾಯ ಬದ್ಧತೆಗೆ ವಿರೋಧವಾದ ಆಚಾರ ವಿಚಾರಗಳು ಅತ್ಯಂತ ವ್ಯಾಕುಲತೆಗೆ ಹೇತುವಾಗಿದ್ದುವು. ದೇವನ ಕುರಿತು ಕಲ್ಪನೆ ಮತ್ತು ಯೇಸು ಕ್ರಿಸ್ತರ ದೈವತ್ವಕ್ಕೂ ಅದು ಸಂಬಂಧಿಸಿತ್ತು.

ಎಸ್. ಜಿ. ಎಫ್. ಬ್ರಾಂಡನ್ ಹೀಗೆ ಬರೆಯುತ್ತಾರೆ:

* ಡಾಕ್ಟರ್ ಇಸ್ರಾರ್ ಅಹ್ಮದ್ ಜಮಾಅತೆ ಇಸ್ಲಾಮಿ ವಿದ್ಯಾರ್ಥಿ ಸಂಘಟನೆಯ ಮುಖ್ಯಸ್ಥ (ನಾಝಿಮ ಅಲಾ) ಮತ್ತು ಅನಂತರ ಜಮಾಅತೆ ಇಸ್ಲಾಮಿ ಮೊಂಟ್‌ಗೊಮೆರಿಯ ಅಮೀರ್ ಆಗಿದ್ದರು. ಅವರು 'ತಹ್‌ರೀಕೆ ಜಮಾಅತೆ ಇಸ್ಲಾಮಿ ಎಂಬ ಸಂಶೋಧಕ ಗ್ರಂಥದ ಕರ್ತರಾಗಿದ್ದರು. ಡಾಕ್ಟರ್ ಇಸ್ರಾರ್ ಅಹ್ಮದ್ ವಿವಿಧ ಹುದ್ದೆಗಳನ್ನು ವಹಿಸಿಕೊಂಡು 10 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಅನಂತರ ಅವರು ಜಮಾಅತೆ ಇಸ್ಲಾಮಿ ಸದಸ್ಯತನಕ್ಕೆ ರಾಜಿನಾಮೆ ನೀಡಿದರು.

"ಯೇಸು ಕ್ರಿಸ್ತರು ಪರಿಪೂರ್ಣ ಅರ್ಥದಲ್ಲಿ ದೇವರಾಗಿದ್ದರೆ ಅವರು ದೇವನಿಂದ ಪ್ರತ್ಯೇಕವಾಗಿರುವ ಕಾರಣದಿಂದ ಇಬ್ಬರು ದೇವರು ಇದ್ದಾರೆಂದಾಗುತ್ತದೆ. ಅದರ ಅರ್ಥ ಕ್ರೈಸ್ತ ಧರ್ಮ ಇಬ್ಬರು ದೇವರನ್ನು ಅಂಗೀಕರಿಸುವ ಧರ್ಮವಾಗಿದೆ, ಏಕದೇವನನ್ನಲ್ಲ. ತಂದೆ ಮತ್ತು ಮಗನ ಸಂಬಂಧವನ್ನು ಕ್ರಿಸ್ತರ ಕುರಿತು ಅಕ್ಷರಶಃ ವ್ಯಾಖ್ಯಾನಿಸುವುದಾದರೆ, ಪಿತ ದೇವನು ಸುತದೇವನ ಪೂರ್ವಜನಾಗುತ್ತಾನೆ. ಈ ಸಂಬಂಧದ ತರ್ಕಬದ್ಧ ವಿವರಣೆ ಹೀಗಾಗುತ್ತದೆ: ಕ್ರಿಸ್ತ ಪರಿಪೂರ್ಣದೇವನಾಗಿರಲು ಸಾಧ್ಯವಿಲ್ಲ. ಏಕೆಂದರೆ ಒಂದು ಕಾಲಘಟ್ಟದಲ್ಲಿ ಪಿತ ದೇವನು ಮಾತ್ರ ಅಸ್ತಿತ್ವದಲ್ಲಿದ್ದನು."
(Dictionary of the History of Ideas - New York, 1973 Vol II, Page 342)

ಸಂಪ್ರದಾಯಬದ್ಧ ಕ್ರೈಸ್ತರು ಕ್ರಿಸ್ತರನ್ನು ಪಿತದೇವನ ತದ್ರೂಪಿ ಎಂದು ನಂಬಿದ್ದರು. ಆದರೆ ಏರಿಯಾಸ್ (ಜೀವಿಸಿದ ಕಾಲ 256-336) ಯೇಸು ಕ್ರಿಸ್ತರು ಪಿತ ದೇವನಿಗೆ ಸಮಾನರಾದವರೆಂದು ಗಣಿಸಿದ್ದರು. ಆಗ ಅವರ ಮಾತೆಯ ಪ್ರಶ್ನೆಯೂ ಉದ್ಭವಿಸಿತು. ನೆಸ್ಟೋರಿಯಸ್ (ಮರಣ 451ರಲ್ಲಿ) ಹೀಗೆ ಘೋಷಿಸಿದರು: "ಯೇಸು ಕ್ರಿಸ್ತರಿಗೆ ಎರಡು ಪ್ರತ್ಯೇಕ ವ್ಯಕ್ತಿತ್ವಗಳಿದ್ದವು. ಒಂದು ಮಾನವ, ಇನ್ನೊಂದು ದೈವಿಕ. ಮೇರಿ ಮಾನವ ಕ್ರಿಸ್ತರ ತಾಯಿಯಾಗಿದ್ದರು; ದೈವಿಕ ಕ್ರಿಸ್ತರ ತಾಯಿಯಲ್ಲ. ಆದುದರಿಂದ ಅವರನ್ನು ಕ್ರಿಸ್ತಮಾತೆ ಎಂದು ಮಾತ್ರ ಹೇಳುವುದು ಉತ್ತಮ. ಸಾಂಪ್ರದಾಯಿಕ ಕ್ರೈಸ್ತ ವಿಶ್ವಾಸ ಹೀಗಿದೆ: ದೈವಿಕ ಮತ್ತು ಮಾನವ ಪ್ರಕೃತಿಗಳನ್ನು ಹೊಂದಿದ ಕ್ರಿಸ್ತರ ದೈವಿಕ ವಚನದ ತಾಯಿ ಮೇರಿ ಆಗಿದ್ದಾರೆ." (History of Christian Councils Vol III, Page 12 ಮತ್ತು The History of Civilization Vol IV, Page 48)

ಕ್ರಿಸ್ತಶಕ 325ರಲ್ಲಿ ಬಿತ್ಯೆನಿಯಾದ ನೀಸ್‌ನಲ್ಲಿ ಜರಗಿದ ಪ್ರಥಮ ಎಕ್ಯುಮೆನಿಕಲ್ ಕೌನ್ಸಿಲ್ ತ್ರಿದೇವ ವಿಶ್ವಾಸದ ರಹಸ್ಯದ ಕುರಿತು ಮತಾಭಿಪ್ರಾಯವನ್ನು ಪ್ರಕಟಿಸಿತು. ಆದರೆ ತನ್ನ ವಿಶ್ವಾಸದ ಕುರಿತು ಪಶ್ಚಾತ್ತಾಪ ಸೂಚಿಸಿದ ಏರಿಯಾಸ್‌ನನ್ನು ಆ ಕೌನ್ಸಿಲ್ ಶಪಿಸಿತು. ಕೋನ್‌ಸ್ಟೆಂಟೈನ್ ಚಕ್ರವರ್ತಿ ಅವನನ್ನು ಗಡಿಪಾರು ಮಾಡಿದನು. ಏರಿಯಾಸ್ ಬರೆದ ಎಲ್ಲಾ ಪುಸ್ತಕಗಳನ್ನು ಸುಟ್ಟುಹಾಕಬೇಕೆಂದೂ ಅವುಗಳನ್ನು ತಮ್ಮ ಸ್ವಾಧೀನದಲ್ಲಿ ಇಟ್ಟುಕೊಳ್ಳುವವರನ್ನು ಮರಣದಂಡನೆಗೆ ಗುರಿಪಡಿಸಲಾಗುವುದೆಂದೂ ಚಕ್ರವರ್ತಿ ಅಜ್ಞಾಪಿಸಿದನು.

ನಜರೇತಿನ ಯೇಸುರವರಿಂದ[ಅ] ಪ್ರಾರಂಭಿಸಲಾದ ಧಾರ್ಮಿಕ ಸ್ವಾತಂತ್ರ್ಯದ ಚಕ್ರವು ಜಸ್ಟೀನಿಯನ್ ಚಕ್ರವರ್ತಿ (483-565) ಧರ್ಮತ್ಯಾಗಕ್ಕೆ ಮರಣದಂಡನೆಯ ಶಿಕ್ಷೆಯನ್ನು ನಿಗದಿಪಡಿಸಿದಾಗ ಪೂರ್ಣವಾಗಿ ಒಂದು ಸುತ್ತು ತಿರುಗಿತು. ಕ್ರಿ.ಶ 535ರಲ್ಲಿ ರೋಮನ್ ನಿಯಮಗಳ ಕ್ರೋಢೀಕರಣ ನಡೆದಾಗ ಈ ನಿಯಮವು ಅದರಲ್ಲಿ ಸೇರಿಸಲ್ಪಟ್ಟಿತು.

ರೋಮಿನ ಕ್ರೈಸ್ತರ ಪೂರ್ವಜರು ಹೊಸ ಧರ್ಮ ಸ್ವೀಕರಿಸಿದುದಕ್ಕಾಗಿ ನೀರೋ ಚಕ್ರವರ್ತಿಯ (ಕ್ರಿ.ಶ. 64) ಕಾಲದಲ್ಲಿ ರೋಮಿನ ಜನರಿಗೆ ಉಲ್ಲಾಸವನ್ನುಂಟುಮಾಡಲು ಸುಟ್ಟು ಹಾಕಲ್ಪಟ್ಟಿದ್ದರೂ ಅವರ ಸಂತಾನಕ್ಕೆ ಸೇರಿದವರಿಂದಲೇ ಆತ್ಮಸಾಕ್ಷಿಯ ಸ್ವಾತಂತ್ರ್ಯವು ದಮನಿಸಲ್ಪಟ್ಟದ್ದು ವಿಧಿಯ ದಾರುಣ ವೈಚಿತ್ರ್ಯಗಳಲ್ಲಿ ಒಂದಾಗಿದೆ. ಕ್ರೈಸ್ತೇತರ ರಾಜಕೀಯ ಅಧಿಕಾರಿಗಳಿಂದ ಕ್ರೈಸ್ತ ಜನರು ಪೀಡಿಸಲ್ಪಡುತ್ತಿದ್ದ ತನಕ ಕ್ರೈಸ್ತ ಬರಹಗಾರರು ಧಾರ್ಮಿಕ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತಾ ಇದ್ದರು. ಆದರೆ ಸಾಮ್ರಾಜ್ಯಶಾಹಿ ಸಿಂಹಾಸನವನ್ನು ಕ್ರೈಸ್ತ ಧರ್ಮವು ಗೆದ್ದಾಗ ಚರ್ಚ್ "ಒಂದು ದೇಶವು ವಿದ್ರೋಹವನ್ನು ಅಥವಾ ದೇಶ ವಿಭಜನೆಯನ್ನು ಹಗೆತನದಿಂದ ಕಾಣುವಂತೆ ವಿಶ್ವಾಸದ ಕುರಿತು ವೈಯುಕ್ತಿಕ ಅಭಿಪ್ರಾಯವನ್ನು ಹಗೆತನದಿಂದ ನೋಡಿತು." (The Story of Civilisation; Page 48)

ಕ್ರಿಸ್ತಶಕ ಐದನೆಯ ಶತಮಾನವು ಮಧ್ಯಕಾಲ ತಲುಪುವುದರೊಳಗೆ ದೇವನಿಗೆ ಸಂಬಂಧಿಸಿದವು ಚಕ್ರವರ್ತಿಗೆ ನೀಡಲಾದುವು. ರಾಜಕೀಯ ಅಧಿಕಾರವು ಚರ್ಚಿನ ಬಲಗೈ ಆಯಿತು. ಡೊನಾಟಿಸ್ಟ್‌ಗಳ ವಿರುದ್ಧ ಚಳುವಳಿ ನಡೆಸಿದ ಸಂತ ಅಗಸ್ಟಿನ್ (354-430) ಹೀಗೆ ವಾದಿಸಿದರು:

"ಇದು ಕ್ರಿಸ್ತನ ಚರ್ಚ್, ಧರ್ಮಶ್ರದ್ಧೆಯಿಲ್ಲದವರ ಮೇಲೆ ಜಾರಿಗೊಳಿಸುವ ಸಾತ್ವಿಕ ಹಿಂಸೆಯಾಗಿದೆ. ಚರ್ಚ್ ಹಿಂಸೆ ನೀಡುವುದು ಪ್ರೀತಿಯ ಸ್ಫೂರ್ತಿಯಿಂದಾಗಿದೆ. ತಿದ್ದಲು, ತಪ್ಪು ಕೆಲಸಗಳಿಂದ ಹಿಂದಕ್ಕೆ ಕರೆಯಲು ಅದು ಕೈಗೊಳ್ಳುವ ಕ್ರಮಗಳು ಅವರ ಒಳಿತಿಗಾಗಿ, ಅವರಿಗೆ ಶಾಶ್ವತ ಮೋಕ್ಷವನ್ನು ದಯಪಾಲಿಸಲಿಕ್ಕಾಗಿದೆ." (Select Library of Nicene and Post Nicene Fathers, Vol IV, Page 640)

ಕ್ರಿ.ಶ. 385ರಲ್ಲಿ ಸ್ಪೈನಿನ ಬಿಷಪ್ ಪ್ರಿಸಿಲ್ಲಿಯನ್ ಮೇಲೆ ಮಾನಿಕೀಯಿಸಮ್ ಮತ್ತು ಸಾರ್ವತ್ರಿಕ ಬ್ರಹ್ಮಚರ್ಯೆಯನ್ನು ಪ್ರಚಾರಗೊಳಿಸುವ ಆರೋಪ ಹೊರಿಸಲಾಯಿತು. ಅವರು ಆರೋಪವನ್ನು ನಿರಾಕರಿಸಿದರು. ಆದರೆ ಅವರನ್ನು ವಿಚಾರಣೆಗೆ ಗುರಿಪಡಿಸಲಾಯಿತು. ಅವರಿಗೆ ಅವರ ಹಲವು ಸಂಗಡಿಗರೊಂದಿಗೆ ಸುಟ್ಟುಹಾಕುವ ಶಿಕ್ಷೆ ವಿಧಿಸಲಾಯಿತು.

ಪ್ರೊಟೆಸ್ಟೆಂಟ್ ಸುಧಾರಣೆಯ ಜರ್ಮನ್ ನಾಯಕರಾದ ಮಾರ್ಟಿನ್ ಲೂತರ್ (1483-1546) ತನಗಿಂತ ಹಿಂದೆ ಅಭಿಪ್ರಾಯ ಸೂಚಿಸಿದ ಅಗಸ್ಟಿನ್‌ರೊಂದಿಗೆ ಸಹಮತವನ್ನು ಸೂಚಿಸುತ್ತಾ ಹೀಗೆ ಹೇಳಿದರು: "ಪಾದರಿಗಳಿಗೆ ಆತ್ಮಸಾಕ್ಷಿಯ ಮೇಲೆ ಅಧಿಕಾರವಿದ್ದಿತು. ಪಾಪಗಳನ್ನು ಗಡಿಪಾರುಮಾಡುವುದು ಅಸಾಧ್ಯವಾದರೂ ತಪ್ಪು ಕೆಲಸಗಳ ಹುಟ್ಟನ್ನು ತಡೆಗಟ್ಟಲು ಬಹಿಷ್ಕಾರದ ಪರಿಪೂರ್ಣ ಶಿಕ್ಷೆಗಳನ್ನು ಜಾರಿಗೊಳಿಸಲು ಅವರಿಗೆ ಸರಕಾರದ ಸಹಾಯವು ಆವಶ್ಯಕವೆಂದು ಯೋಚಿಸಲಾಗಿತ್ತು."(The History of Freedom and Other Essays - page 163)

ಆದರೆ ಮೌದೂದಿಗೆ ನಿಜವಾಗಿಯೂ ಸ್ಫೂರ್ತಿದಾಯಕನಾದುದು ಫ್ರೆಂಚ್ ಪ್ರೊಟೆಸ್ಟೆಂಟ್ ವೇದಾಂತಿ ಜಾನ್ ಕಾಲ್‌ವಿನ್ (1509-64).

"ಕಾಲ್‌ವಿನ್ ಖಡ್ಗದ ಮೂಲಕ ಧರ್ಮವನ್ನು ಹರಡಲು ಧರ್ಮತ್ಯಾಗಕ್ಕೆ ಮತ್ತು ಮರಣದಂಡನೆಯನ್ನು ವಿಧಿಸಲು ಬಯಸಿದ್ದನು... ಕ್ಯಾಥಲಿಕರು ರಾಜದ್ರೋಹಿಗಳ ಹಾಗೆ ಶಿಕ್ಷಿಸಲ್ಪಡಬೇಕು. ರಾಜನ ಸಿಂಹಾಸನಕ್ಕೆ ದ್ರೋಹ ಬಗೆಯುವವನಿಗೆ ಶಿಕ್ಷೆ ನೀಡುವ ಹಾಗೆಯೇ ದೇವನ ಮಹಿಮೆಗೆ ದ್ರೋಹ ಬಗೆಯುವವನಿಗೂ ಅನಿವಾರ್ಯವಾಗಿ ಶಿಕ್ಷೆನೀಡಬೇಕು ಎಂದು ಅವನು ವಾದಿಸಿದನು." (The History of Freedom and other Essays - pp 178 -179)

ಮೌಲಾನ ಮೌದೂದಿಗೆ ಕಾಲ್‌ವಿನ್‌ರಿಂದ ಸ್ಫೂರ್ತಿ ಲಭಿಸಿದ್ದರೂ ಅದಕ್ಕೆ ಬೇಕಾದ ವಿಚಾರವನ್ನು ಒದಗಿಸಿದುದು ಇಂಗ್ಲಿಷ್ ತತ್ವಜ್ಞಾನಿ ತೋಮಸ್ ಹೋಬ್ಸ್ (1588-1679) ಅವರ ಪುಸ್ತಕ ಲೆವಿಯತನ್ (LEVIATHAN) ಮೂಲಕ. ಅದ್ಭುತ ದೃಷ್ಟಾಂತ ತೋರಿಸುವುದು ಸತ್ಯ ಪ್ರವಾದಿಯ ಲಕ್ಷಣವಾಗಿದೆ. ಆದರೆ ಹೋಬ್ಸ್ ಹೀಗೆ ವಾದಿಸಿದರು: ಸತ್ಯ ಪ್ರವಾದಿಗಳ

ಚಿಹ್ನೆಯಾದ ಅದ್ಭುತ ಕೃತ್ಯಗಳ ಕಾಲವು ಕೊನೆಗೊಂಡಿದೆ. ಪ್ರವಾದಿಗಳ ಮೂಲಕ ಅಥವಾ ದೈವಿಕ ಬೋಧನೆ ಮೂಲಕ ಮಾರ್ಗದರ್ಶನವು ಲಭಿಸುವುದು ಅಸಾಧ್ಯವಾಗಿದೆ. ಆದುದರಿಂದ ಅರಸನಿಗೆ ಮಾತ್ರ ಸಾಮಾಜಿಕ ಮತ್ತು ಧಾರ್ಮಿಕ ಅಧಿಕಾರವಿದೆ. ನಿಯಮಗಳನ್ನು ರಚಿಸಲು ಅವನಿಗೆ ಮಾತ್ರ ಅಧಿಕಾರವಿದೆ. "ಒಂದು ಬರವಣಿಗೆಯನ್ನು ನಿಯಮವನ್ನಾಗಿ ಮಾಡಲು ನ್ಯಾಯಬದ್ಧವಾದ ಅಧಿಕಾರ ಯಾರಿಗೆ ಇದೆಯೋ ಅದರ ವ್ಯಾಖ್ಯಾನವನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರವೂ ಅವನಿಗೆ ಇದೆ."

ಹೋಬ್ಸ್‌ರವರ ಅಭಿಪ್ರಾಯ ಪ್ರಕಾರ ಪಾಷಂಡವಾದವು ಒಬ್ಬನ ವೈಯಕ್ತಿಕ ತೀರ್ಮಾನವಾಗಿದೆ ಮತ್ತು ಅದು ಸಾರ್ವಜನಿಕ ವಿಶ್ವಾಸವೆಂದು ಅರಸನಿಂದ ವಿಧಿಸಲಾದ ವಿಷಯಕ್ಕೆ ವಿರುದ್ಧವಾದ ಕ್ರಮವೂ ಆಗಿದೆ.

ಹೋಬ್ಸ್ ಹೀಗೆ ಹೇಳುತ್ತಾರೆ:

ಪಾಷಂಡವಾದವು ಶಿಕ್ಷಾರ್ಹವಾಗುವುದು ಅದು ವಾಸ್ತವಿಕವಾಗಿ ತಪ್ಪು ತೀರ್ಮಾನ ಮಾಡಿದ ಕಾರಣದಿಂದಲ್ಲ. ಅದು ಶಿಕ್ಷಾರ್ಹವಾಗುವುದು ರಾಜ್ಯಾಡಳಿತೆಯ ವಿರುದ್ಧ ಮಾಡಲಾಗುವ ಖಾಸಗಿ ವಿದ್ರೋಹದ ಕಾರಣದಿಂದಾಗಿದೆ. ಆತ್ಮಸಾಕ್ಷಿಯ ಆಜ್ಞೆಗಳಿಗೆ ವಿಧೇಯನಾಗುವ ತತ್ವವನ್ನು ಒಂದು ರಾಜ್ಯಾಡಳಿತೆಯ ಸಿದ್ಧಾಂತವಾಗಿ ಅಂಗೀಕರಿಸಿದರೆ, ವ್ಯಕ್ತಿಗಳು ತಮ್ಮ ರಾಜಕುಮಾರರಿಗೆ ಅವಿಧೇಯರಾಗಲು ಮತ್ತು ಸತ್ಯವಾಗಲಿ ಸುಳ್ಳಾಗಲಿ ತಮಗಿಷ್ಟವಿರುವ ಮತವನ್ನು ಅನುಸರಿಸಲು ಅನುಮತಿಸಿದಂತೆ ಆಗುವುದು." (LEVIATHAN: Page 210 - Thomas Hobbes)

ಹೋಬ್ಸ್ ಪ್ರಕಾರ ಹೀಗೆ ಅನುಮತಿಸುವುದು ಆಡಳಿತೆಯನ್ನು ಬುಡಮೇಲು ಮಾಡಲು ಅನುಮತಿಸುವುದಕ್ಕೆ ಸಮವಾಗಿದೆ.

ಪಾಷಂಡವಾದವಿಲ್ಲದೆ ಧರ್ಮತ್ಯಾಗವಿಲ್ಲ. ಮತ ಸಿದ್ಧಾಂತವಿಲ್ಲದೆ ಪಾಷಂಡವಾದವೂ ಇಲ್ಲ. ಕ್ರೈಸ್ತ ಮತ ಸಿದ್ಧಾಂತವು ಅತನೇಶಿಯನ್ ಮತಾಭಿಪ್ರಾಯ ಪ್ರಕಾರ ಹೀಗೆ ಸೂಚಿಸಲ್ಪಟ್ಟಿದೆ:

"ನಾವು ಒಬ್ಬ ದೇವನನ್ನು ತ್ರಿದೇವ ಸಿದ್ಧಾಂತದಲ್ಲಿ ಆರಾಧಿಸುತ್ತೇವೆ; ಮತ್ತು ಏಕತ್ವದಲ್ಲಿ ತ್ರಿದೇವತ್ವವನ್ನು. ವ್ಯಕ್ತಿಗಳನ್ನು ಕಲಸುವುದೂ ಇಲ್ಲ; ಪದಾರ್ಥವನ್ನು ವಿಭಜಿಸುವುದೂ ಇಲ್ಲ."

ಮಧ್ಯಕಾಲೀನ ಕ್ರೈಸ್ತರ ಈ ಪರಂಪರೆಗೆ ಅನುಸಾರವಾಗಿ - ಇಸ್ಲಾಮಿನ ಪರಂಪರೆಗೆ ಅನುಸಾರವಾಗಿ ಅಲ್ಲ - ಮೌಲಾನ ಮೌದೂದಿ ಮೂಲತಃ ಮೌಲಾನ ಅಬುಲ್ ಕಲಾಮ್ ಆಝಾದ್ ಮತ್ತು ಖೈರಿ ಸಹೋದರರು ಪ್ರತಿಪಾದಿಸಿದ ಹುಕೂಮತೆ ಇಲಾಹಿಯ್ಯ (ದೇವ ಆಧಿಪತ್ಯ) ತತ್ವವನ್ನು ವಿಕಾಸಗೊಳಿಸಿದರು. (ಡಾಕ್ಟರ್ ಇಸ್ರಾರ್ ಅಹ್ಮದ್ ಬರೆದ ಇಸ್ಲಾಮ್ ಔರ್ ಪಾಕಿಸ್ತಾನ್ - ಪುಟ 72)

ಸಂತ ಅಗಸ್ಟಿನ್, ಮಾರ್ಟಿನ್ ಲೂತರ್, ಜಾನ್ ಕಾಲ್ವಿನ್ ಮತ್ತು ತೋಮಸ್ ಹೋಬ್ಸ್ ಮೌಲಾನ ಮೌದೂದಿಗೆ ಅನಿಸ್ಲಾಮಿಕ ಕಲ್ಪನೆಗಳಾದ ಪಾರಂಪರಿಕ ವಿಶ್ವಾಸ, ವಿಚಾರಕ್ಕೆಡೆಗೊಡದ ನಂಬಿಕೆ (dogma) ಮತ್ತು ಪಾಷಂಡವಾದದ ಕಲ್ಪನೆಗಳನ್ನೂ ಅಸಹಿಷ್ಣುತೆಯ ವಾಗ್ವೈಖರಿಯನ್ನೂ ಒದಗಿಸಿಕೊಟ್ಟರು.

ಇಸ್ಲಾಮ್ ಧರ್ಮವನ್ನು ಆಕ್ಷೇಪಿಸಲು ಸಿಗುವ ಯಾವ ಅವಕಾಶವನ್ನೂ ವ್ಯರ್ಥಗೊಳಿಸದಂತಹ ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು (Orientalists) ಸಹ ಇಸ್ಲಾಮಿನಲ್ಲಿ ಯಾವುದೇ ವಿಚಾರಕ್ಕೆಡೆಗೊಡದ ನಂಬಿಕೆ (dogma) ಇಲ್ಲವೆಂದೂ ಪಾಷಂಡವಾದವಿಲ್ಲವೆಂದೂ ಒಪ್ಪಿಕೊಳ್ಳುತ್ತಾರೆ.

ಗೋಲ್ಡ್ ಝಿಹರ್ ಹೀಗೆ ಹೇಳುತ್ತಾರೆ:

"ಕ್ರೈಸ್ತ ಚರ್ಚ್‌ಗಳ ಧಾರ್ಮಿಕ ಜೀವಿತದಲ್ಲಿ ವಿಚಾರಕ್ಕೆಡೆಗೊಡದ ನಂಬಿಕೆ (dogma) ವಹಿಸುವ ಪಾತ್ರವನ್ನು ಇಸ್ಲಾಮಿನಲ್ಲಿ ನಾವು ಕಾಣಲಾರೆವು. ಇಸ್ಲಾಮಿನಲ್ಲಿ ಯಾವುದೇ ಧಾರ್ಮಿಕ ಸಮಿತಿ ಅಥವಾ ಸಂಘವು ಬಿರುಸಿನ ವಾದ ಪ್ರತಿವಾದಗಳ ನಂತರ ಒಂದು ಸೂತ್ರವನ್ನು ರೂಪಿಸಿ ಅದು ತಮ್ಮ ಧರ್ಮಕ್ಕೆ ಸೇರಿದ ಎಲ್ಲರಿಗೂ ಕಡ್ಡಾಯವಾಗಿ ಅನ್ವಯಿಸುತ್ತದೆ ಎಂದು ಆದೇಶಿಸುವುದಿಲ್ಲ. ಪಾರಂಪರಿಕ ವಿಶ್ವಾಸವನ್ನು ಅಳತೆ ಮಾಡುವಂತಹ ಧರ್ಮೋಪದೇಶಕರ ಸಂಸ್ಥೆ ಇಸ್ಲಾಮ್‌ನಲ್ಲಿ ಇಲ್ಲ. ಅಧಿಕೃತವಾಗಿ ಪವಿತ್ರ ಗ್ರಂಥವನ್ನು ವ್ಯಾಖ್ಯಾನಿಸುವ ಏಕಮಾತ್ರ ವ್ಯಾಖ್ಯಾನವೂ ಇಲ್ಲ. ಆದುದರಿಂದ ಅದನ್ನು ಆಧಾರವಾಗಿಟ್ಟುಕೊಂಡು ಒಂದು ಧಾರ್ಮಿಕ ವ್ಯವಸ್ಥೆಯ ರೂಪೀಕರಣ ಸಾಧ್ಯವಾಗುತ್ತಾ ಇಲ್ಲ. ಧರ್ಮಕ್ಕೆ ಸಂಬಂಧಿಸಿದ ಎಲ್ಲಾ ಪ್ರಶ್ನೆಗಳಲ್ಲಿ ಒಮ್ಮತಾಭಿಪ್ರಾಯವು ಪರಮೋನ್ನತ ಅಧಿಕಾರವನ್ನು ಹೊಂದಿದೆ. ಅದರ ಅಧಿಕಾರದ ವಲಯವು ಸ್ಥಿತಿ ಸ್ಥಾಪಕ ಗುಣವುಳ್ಳದ್ದೂ ಅಲ್ಪಮಾತ್ರ ವಿವರಿಸಬಹುದಾದದ್ದೂ ಆಗಿದೆ. ಒಮ್ಮತಾಭಿಪ್ರಾಯ ಎಂದರೆ ಏನು ಎಂಬುದರ ಕುರಿತು ವಿವಿಧ ರೀತಿಯ ವಿವರಣೆಗಳಿವೆ. ವಿವಾದಾಸ್ಪದವಲ್ಲದ ಒಮ್ಮತಾಭಿಪ್ರಾಯ ಯಾವುದೆಂಬುದರ ಕುರಿತು ಸಹ ಒಮ್ಮತವಿರುವುದಿಲ್ಲ. ಒಂದು ಪಕ್ಷದ ಜನರಿಂದ ಒಮ್ಮತಾಭಿಪ್ರಾಯ ಎಂದು ಅಂಗೀಕರಿಸಲ್ಪಟ್ಟಿದ್ದಲ್ಲಿ ಇನ್ನೊಂದು ಪಕ್ಷದಿಂದ ಅಂಗೀಕರಿಸಲ್ಪಡದೆ ಹೋಗಬಹುದು." (Islam in History: Ideas, Men and Events in the Middle East, Page 231 - Bernard Lewis)

ಸಮಕಾಲೀನ ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರಾದ ಬೆರ್ನಾರ್ಡ್ ಲೂಯಿಸ್ ಯಹೂದಿಯಾಗಿದ್ದು, ಇಸ್ಲಾಮ್ ಧರ್ಮದ ಕುರಿತು ಸಹಾನುಭೂತಿಯುಳ್ಳವನೆಂದು ಆಕ್ಷೇಪಿಸಲ್ಪಡಲು ಸಾಧ್ಯವಿಲ್ಲ. ಅವರು ಹೀಗೆ ಹೇಳುತ್ತಾರೆ:

"ಜನರು ಏನನ್ನು ಮಾಡಿದರೆಂಬುದು ಮುಖ್ಯವಾಗಿದೆ. ಮುಸ್ಲಿಮರು ಮೂಲಭೂತ ತತ್ವವಾದ ಏಕದೇವ ವಿಶ್ವಾಸ ಮತ್ತು ಮುಹಮ್ಮದರ ಪ್ರವಾದಿತ್ವವನ್ನು ಅಂಗೀಕರಿಸಿದರೆ ಮತ್ತು ಸಾಮಾಜಿಕ ಶಿಷ್ಟಾಚಾರಗಳನ್ನು ಪಾಲಿಸುವವರಾದರೆ ಅವರಿಗಿಷ್ಟವಿರುವಂತೆ ಇತರ ವಿಷಯಗಳನ್ನು ನಂಬಲು ಅನುಮತಿಸಲಾಗುತ್ತಿತ್ತು." (The Jews of Islam: Page 53 - Benard Lewis)

ಮೌಲಾನ ಮೌದೂದಿಗೆ ನೈಜ ಇಸ್ಲಾಮ್ ಧರ್ಮ ತತ್ವಗಳು ಸ್ಫೂರ್ತಿಯನ್ನು ಉಂಟುಮಾಡುತ್ತಿರಲಿಲ್ಲ. ಪಾಷಂಡವಾದ ಮತ್ತು ಧರ್ಮತ್ಯಾಗ ತತ್ವಗಳನ್ನು ಎರವಲು ಪಡೆದ ಮೌಲಾನ ಮೌದೂದಿ ಕಾಲ್ವಿನ್ ಪ್ರತಿಪಾದಿಸಿದ "ಧರ್ಮತ್ಯಾಗಕ್ಕೆ ಮರಣದಂಡನೆ" ಎಂಬ ತತ್ವವನ್ನು ಕೈಬಿಡಲು ಸಾಧ್ಯವಿರಲಿಲ್ಲ. ಆದರೆ ಈ ಶಿಕ್ಷೆಗೆ ಹಝ್ರತ್ ಪ್ರವಾದಿಯವರ(ಸ) ಅಧಿಕೃತ ಅಂಗೀಕಾರವಿದೆ ಎಂದು ತಪ್ಪಾಗಿ ಹೇಳುವ ಉದ್ಧಟತನ ಮೌಲಾನ ಮೌದೂದಿಗಿತ್ತು. ಅವರು ಒಂದು ಕಿರು ಲೇಖನವನ್ನು ಬರೆದು ಅದರಲ್ಲಿ ವಿದ್ರೋಹ ಮಾಡಿದ ಗೋತ್ರಗಳ ವಿರುದ್ಧ ಹಝ್ರತ್ ಅಬೂಬಕರ್‌ರವರು(ರ) ಮಾಡಿದ ಸೈನಿಕ ಕಾರ್ಯಾಚರಣೆಯನ್ನು ಉಲ್ಲೇಖಿಸಿ ಧರ್ಮತ್ಯಾಗಕ್ಕೆ ಮರಣದಂಡನೆಯ ಶಿಕ್ಷೆ ಇದೆ ಎಂದು ಬರೆದಿದ್ದರು. ಈ ಬಗ್ಗೆ ಚರ್ಚಿಸುವ ಮೊದಲು ಮೌಲಾನ ಮೌದೂದಿಯ ಕೆಲವು ಬರಹಗಳನ್ನು ಉಲ್ಲೇಖಿಸಿ ಅವರು ತಮ್ಮ ಕ್ರೈಸ್ತ ಪೂರ್ವಿಕರಿಂದ ಎಷ್ಟು ಗಾಢವಾಗಿ ಪ್ರಭಾವಿತರಾಗಿದ್ದರೆಂಬುದನ್ನು ತೋರಿಸಲು ಇಚ್ಛಿಸುತ್ತೇನೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಮಧ್ಯಕಾಲೀನ ಯುರೋಪಿನ ಕ್ರೈಸ್ತ ಪಾದರಿಗಳ ಪ್ರಕಾರ, ಧರ್ಮತ್ಯಾಗಿಗಳಿಗೆ ಇರುವ ಶಿಕ್ಷೆ ಮರಣದಂಡನೆಯಾಗಿದೆ ಮತ್ತು ಕ್ರೈಸ್ತ ಧರ್ಮದ ಕುರಿತು ಅವರ ವಿವರಣೆ ಮಾತ್ರ ಅಂಗೀಕರಿಸಲ್ಪಡಲೇ ಬೇಕಾದ ಏಕಮಾತ್ರ ವಿವರಣೆಯಾಗಿದೆ. ಇದೇ ರೀತಿ ಮೌಲಾನ ಮೌದೂದಿ ಹೇಳುವುದು ಇಸ್ಲಾಮ್ ಧರ್ಮವನ್ನು ತ್ಯಜಿಸಿದರೆ ಇರುವ ಶಿಕ್ಷೆ ಮರಣದಂಡನೆಯಾಗಿದೆ ಮತ್ತು ಇಸ್ಲಾಮ್ ಧರ್ಮದ ಕುರಿತು ಮೌಲಾನ ಮೌದೂದಿ ಅಥವಾ ಅವರ ಅನುಯಾಯಿಗಳು ನೀಡುವ ವಿವರಣೆ ಮಾತ್ರ ಏಕಮಾತ್ರ ಅಂಗೀಕಾರಾರ್ಹ ವಿವರಣೆಯಾಗಿದೆ ಎಂದು.

ಮೌಲಾನ ಮೌದೂದಿಯ ಹಿಂಬಾಲಕರು ನಡೆಸುವ ಸರಕಾರದಲ್ಲಿ ಮೌದೂದಿ ಆಡಳಿತೆಗಾರನು ಯಾರು ಮುಸ್ಲಿಮನಾಗಿರುವನು, ಯಾರು ಮುಸ್ಲಿಮನಲ್ಲ ಎಂಬುದನ್ನು ತೀರ್ಮಾನಿಸುವನು. ಅವನು ಮಾಡುವ ತೀರ್ಮಾನ ಹೇಗಿರುವುದು? ಮೌಲಾನ ಮೌದೂದಿಯ ಲೇಖನಗಳು ಆ ಬಗ್ಗೆ ಸ್ಪಷ್ಟವಾಗಿವೆ.

ಮೌಲಾನ ಮೌದೂದಿಯ ಪ್ರಕಾರ ಅಹ್ಮದೀ ಮುಸ್ಲಿಮರು ಧರ್ಮತ್ಯಾಗಿಗಳಾಗಿದ್ದಾರೆ ಮತ್ತು "ಮುಸ್ಲಿಮೇತರ ಅಲ್ಪಸಂಖ್ಯಾತರಾಗಿದ್ದಾರೆ." ಆದರೆ ಮೌಲಾನ ಮೌದೂದಿ ಪ್ರಕಾರ ಅಹ್ಮದೀ ಮುಸ್ಲಿಮರು ಮಾತ್ರವಲ್ಲ, ಪರ್ವೇಝ್‌ರವರ ಅನುಯಾಯಿಗಳಾದ ಅಹ್ಲೆ ಖುರ್‌ಆನ್ ಸಂಘದವರೂ ಪಾಖಂಡಿಗಳಾಗಿದ್ದಾರೆ. ಅವರು ಕಾಫಿರರೂ (ಅವಿಶ್ವಾಸಿಗಳೂ) ಧರ್ಮತ್ಯಾಗಿಗಳೂ ಆಗಿದ್ದಾರೆ. ಅಹ್ಲೆ ಖುರ್‌ಆನಿಗಳು ಅಹ್ಮದಿಯರಿಗಿಂತ ಹೆಚ್ಚು ಕಠಿಣ ರೂಪದ ಅವಿಶ್ವಾಸಿಗಳೆಂದು ಮೌಲಾನ ಮೌದೂದಿ ಬರೆದಿದ್ದಾರೆ.

ಜಮಾಅತೆ ಇಸ್ಲಾಮಿಯ "ತಸ್‌ನೀಮ್" ಉರ್ದು ಪತ್ರಿಕೆಯಲ್ಲಿ ಮೌಲಾನ ಅಮೀನ್ ಅಹ್‌ಸನ್ ಇಸ್ಲಾಹಿ ಪ್ರಕಟಿಸಿದ ಈ ಕೆಳಗಿನ ತೀರ್ಪನ್ನು ಪರಿಶೀಲಿಸಿರಿ. ಇದನ್ನು ಪ್ರಕಟಿಸುವಾಗ ಇಸ್ಲಾಹಿ ಮೌದೂದಿಯವರ ಬಲಗೈ ಬಂಟನೆಂದು ಗಣಿಸಲ್ಪಡುತ್ತಿದ್ದರು.

"ಇಸ್ಲಾಮೀ ಶರೀಅತ್ ಕುರಿತು ಭಿನ್ನಾಭಿಪ್ರಾಯಗಳ ಕಾರಣದಿಂದ ಕೆಲವರು ಮುಸ್ಲಿಮರಿಗೆ ಹೀಗೆ ಸಲಹೆ ನೀಡುತ್ತಾರೆ: ಈ ದೇಶದಲ್ಲಿ ಇಸ್ಲಾಮೀ ಶರೀಅತ್ ಜಾರಿಗೊಳಿಸುವ ಸಾಧ್ಯತೆಯೇನೂ ಇಲ್ಲ, ಆದರೆ ಪವಿತ್ರ ಖುರ್‌ಆನಿನ ತತ್ವಗಳಿಗನುಸಾರವಾಗಿ ಈ ದೇಶದ ಆಡಳಿತೆಯನ್ನು ನಡೆಸಬೇಕು. ಹೀಗೆ ಸಲಹೆ ನೀಡುವವರ ಉದ್ದೇಶ ಶರೀಅತ್ ಎಂದರೆ ಖುರ್‌ಆನ್ ಮಾತ್ರ ಎಂದೂ ಅದರ ಹೊರತು ಉಳಿದ ಎಲ್ಲವೂ ಶರೀಅತ್ ಅಲ್ಲವೆಂದೂ ಆಗಿದ್ದರೆ ಇದು ಶುದ್ಧ ಕುಫ್ರ್ (ಅವಿಶ್ವಾಸ) ಆಗಿದೆ. ಇದು ಖಾದಿಯಾನಿಗಳ ಕುಫ್ರ್ ಹಾಗಿದೆ. ಅಲ್ಲ, ಅದಕ್ಕಿಂತ ಹೆಚ್ಚು ಕಠಿಣವೂ ಘೋರವೂ ಆಗಿದೆ." ("ತಸ್‌ನೀಮ್" 15-8-1952)

ಈ ತೀರ್ಪು ಅಹ್ಮದಿಯರ ಮತ್ತು ಅಹ್ಲೆ ಖುರ್‌ಆನ್ ಜನರ ವಿರುದ್ಧವಾಗಿದೆ. ಈ ತೀರ್ಪು ಈ ಎರಡು ಪಕ್ಷಗಳಿಗೆ ಮಾತ್ರ ಸೀಮಿತವಾಗಿದೆಯೇ ಎಂಬುದನ್ನು ಪರಿಶೀಲಿಸಬೇಕಾಗಿದೆ.

ಮೌಲಾನ ಮೌದೂದಿಯ ಲೇಖನಗಳ ಪ್ರಕಾರ, ಮೌದೂದಿ ಸಿದ್ಧಾಂತಗಳನ್ನು ಅಂಗೀಕರಿಸದಿದ್ದರೆ ಅದು ಕುಫ್ರ್ (ಅವಿಶ್ವಾಸ) ಆಗಿದೆ. ಇದು ಅತನೇಶಿಯನ್ ತತ್ವಗಳ ಹಾಗಿದೆ.

ಮೌಲಾನ ಮೌದೂದಿ ಹೀಗೆ ಹೇಳುತ್ತಾರೆ:

"ಮುಸಲ್ಮಾನರೆಂದು ಕರೆಯಲ್ಪಡುವ ಈ ಬೃಹತ್ತಾದ ಜನ ಸಮೂಹಕ್ಕೆ ಸೇರಿದವರ ಪೈಕಿ ಸಾವಿರದಲ್ಲಿ 999 ಜನರಿಗೆ ಇಸ್ಲಾಮ್ ಧರ್ಮದ ಕುರಿತಾಗಲಿ ಸತ್ಯ, ಮಿಥ್ಯಗಳ ವ್ಯತ್ಯಾಸಗಳ ಕುರಿತಾಗಲಿ ಅರಿವು ಇಲ್ಲ. ಅವರ ಸ್ವಭಾವಕ್ಕೆ ಸಂಬಂಧಿಸಿದ ದೃಷ್ಟಿಕೋನ ಮತ್ತು ಬುದ್ಧಿಯ ಉಪಯೋಗ ಇಸ್ಲಾಮಿಗೆ ಅನುಸಾರವಾಗಿ ಬದಲಾವಣೆ ಹೊಂದಿಲ್ಲ. ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಕೇವಲ ಇಸ್ಲಾಮಿನ ಹೆಸರು ದೊರಕುತ್ತಾ ಹೋಗುತ್ತದೆ. ಆದುದರಿಂದ ಅವರು ಮುಸಲ್ಮಾನರಾಗಿದ್ದಾರೆ. ಅವರು ಸತ್ಯವನ್ನು ಸತ್ಯವೆಂದು ಮನವರಿಕೆ ಮಾಡಿಕೊಂಡು ಅಂಗೀಕರಿಸಿಲ್ಲ. ಮಿಥ್ಯವನ್ನು ಮಿಥ್ಯವೆಂದು ಮನವರಿಕೆಮಾಡಿಕೊಂಡು ತ್ಯಜಿಸಿಯೂ ಇಲ್ಲ. ಇಂತಹ ಜನರ ಬಹುಮತದ ಅಭಿಪ್ರಾಯಕ್ಕೆ ಕಡಿವಾಣವನ್ನು ಕೊಟ್ಟು ಅವರ ಮೂಲಕ ಗಾಡಿಯು ಇಸ್ಲಾಮಿನ ಮಾರ್ಗದಲ್ಲಿ ಚಲಿಸುವುದೆಂದು ಭಾವಿಸುವುದಾದರೆ ಅದು ಬರೇ ವ್ಯಾಮೋಹವಾಗಿದೆ." (ಮುಸಲ್ಮಾನ್ ಔರ್ ಮೌಜೂದ ಸಿಯಾಸೀ ಕಶ್‌ಮಕಶ್: ಭಾಗ 3 ಪುಟ 130)

ಮೌಲಾನ ಪುನಃ ಹೇಳುತ್ತಾರೆ:

"ಪ್ರಜಾಪ್ರಭುತ್ವದ ಚುನಾವಣೆಯು ಹಾಲನ್ನು ಕಡೆದು ಬೆಣ್ಣೆ ತೆಗೆಯುವ ಹಾಗೆ. ಹಾಲು ವಿಷಮಯವಾಗಿದ್ದರೆ ಅದರಿಂದ ದೊರಕುವ ಬೆಣ್ಣೆಯೂ ಸಹಜವಾಗಿ ಹೆಚ್ಚು ವಿಷಮಯವಾಗಿರುವುದು...... ಮುಸ್ಲಿಮರು ಬಹುಸಂಖ್ಯಾತರಾಗಿರುವ ಪ್ರದೇಶ ಹಿಂದುಗಳು ಬಹುಸಂಖ್ಯಾತರಾಗಿರುವ ಪ್ರದೇಶದಿಂದ ಸ್ವತಂತ್ರವಾದರೆ ಮತ್ತು ಅಲ್ಲಿ ಪ್ರಜಾಪ್ರಭುತ್ವ ಸ್ಥಾಪಿತವಾದರೆ ಆ ರೀತಿ ಹುಕೂಮತೆ ಇಲಾಹಿಯ್ಯ (ದೇವರಾಜ್ಯ) ಸ್ಥಾಪಿತವಾಗುವುದೆಂದು ಯಾರಾದರೂ ಯೋಚಿಸುವುದಾದರೆ ಆ ಯೋಚನೆ ತಪ್ಪಾಗಿದೆ. ವಾಸ್ತವಿಕವಾಗಿ ಉಂಟಾಗುವ ಪರಿಣಾಮವೇನೆಂದರೆ, ಮುಸಲ್ಮಾನರಿಂದ ಅವಿಶ್ವಾಸಿಗಳ ಆದರ್ಶದ ಸರಕಾರವು ಸ್ಥಾಪಿತವಾಗುವುದು." (ಮುಸಲ್ಮಾನ ಔರ್ ಮೌಜೂದ ಸಿಯಾಸೀ ಕಶ್‌ಮಕಶ್: ಭಾಗ 3 ಪುಟ 132)

ಮೌದೂದಿಯೇತರ ಮುಸಲ್ಮಾನರ ಕುರಿತು ಮೌಲಾನ ಮೌದೂದಿಯ ತೀರ್ಪು ಹೇಗಿದೆ ಎಂಬುದನ್ನು ಈ ಕೆಳಗಿನ ಉಲ್ಲೇಖದಿಂದ ತಿಳಿಯಬಹುದು:

"ಮುಸಲ್ಮಾನರ ಸಮುದಾಯ ಎಲ್ಲಾ ವಿಧ ಹೊಲಸುಗಳಿಂದ ತುಂಬಿದೆ. ದುಃಸ್ವಭಾವಗಳ ಕುರಿತು ಹೇಳುವುದಾದರೆ, ಅವಿಶ್ವಾಸಿಗಳಲ್ಲಿರುವ ಎಲ್ಲಾ ವಿಧ ದುಃಸ್ವಭಾವಗಳು ಇವರಲ್ಲಿಯೂ ಇವೆ. ನ್ಯಾಯಾಲಯಗಳಲ್ಲಿ ಸುಳ್ಳು ಸಾಕ್ಷಿ ಹೇಳುವವರನ್ನು ಅವಿಶ್ವಾಸಿಗಳ ಸಮುದಾಯ ಎಷ್ಟು ಪೂರೈಕೆ ಮಾಡುತ್ತಿದೆಯೇ ಅದೇ ಅನುಪಾತದಲ್ಲಿ ಈ ಸಮುದಾಯವೂ ಪೂರೈಸುತ್ತಿದೆ. ಲಂಚ, ಕಳ್ಳತನ, ವ್ಯಭಿಚಾರ, ಸುಳ್ಳು ಮತ್ತು ಇತರ ಎಲ್ಲಾ ಕೆಟ್ಟ ಸ್ವಭಾವ - ಗುಣಗಳಲ್ಲಿ ಈ ಜನರು ಅವಿಶ್ವಾಸಿಗಳಿಗಿಂತ ಸ್ವಲ್ಪವೂ ಕಡಿಮೆಯವರಲ್ಲ." (ಮುಸಲ್ಮಾನ್ ಔರ್ ಮೌಜೂದ ಸಿಯಾಸಿ ಕಶ್‌ಮಕಶ್: ಭಾಗ 3 ಪುಟ 166)

ಮೌಲಾನ ಮೌದೂದಿಯ ಹೇಳಿಕೆಗಳು ಎಲ್ಲರಿಗೂ ಅನ್ವಯಿಸುವಂತಿದೆಯಾದರೂ ಈ ತೀರ್ಪುಗಳು ಶೇಕಡಾ 99.99 ಸಾಮಾನ್ಯ ಜನರಿಗೆ ಸಂಬಂಧಿಸಿದೆ ಎಂದೂ ಮುಸ್ಲಿಮ್ ನಾಯಕರೂ ಬುದ್ಧಿಜೀವಿಗಳೂ ಇದಕ್ಕೆ ಹೊರತಾಗಿರಬಹುದೆಂದು ಯಾರಾದರೂ ಯೋಚಿಸಬಹುದಾಗಿದೆ. ಆದರೆ ಮೌಲಾನ ಮೌದೂದಿ ಮುಸ್ಲಿಮ್ ನಾಯಕರ ಕುರಿತು ಮತ್ತು ಮತ ವಿದ್ವಾಂಸರ ಕುರಿತು ನೀಡಿದ ಹೇಳಿಕೆಯು ಮೌಲಾನ ಮೌದೂದಿಯ ಮತಾಭಿಪ್ರಾಯಗಳನ್ನು ಅಂಗೀಕರಿಸದವರು ದಾರಿತಪ್ಪಿ ಹೋಗಿದ್ದಾರೆ ಎಂದು ಸ್ಪಷ್ಟಪಡಿಸುತ್ತದೆ.

ಮೌಲಾನ ಹೀಗೆ ಹೇಳುತ್ತಾರೆ:

"ಪಾಶ್ಚಿಮಾತ್ಯ ವಿದ್ಯಾಭ್ಯಾಸ ಗಳಿಸಿದ ರಾಜಕೀಯ ನಾಯಕರು ಅಥವಾ ಧಾರ್ಮಿಕ ವಿದ್ವಾಂಸರು ಮತ್ತು ಶರೀಅತ್ ಪಾರಂಗತರು ಇವೆರಡು ಗುಂಪಿನ

ಮಾರ್ಗದರ್ಶಕರು ತಮ್ಮ ವಿಚಾರಗಳಲ್ಲಿ ಮತ್ತು ಧೋರಣೆಗಳಲ್ಲಿ ಸಮಾನ ಸ್ವಭಾವ ಹೊಂದಿದವರಾಗಿ ದಾರಿತಪ್ಪಿದವರಾಗಿದ್ದಾರೆ. ಈ ಎರಡು ಗುಂಪಿನ ಜನರು ಸತ್ಯದ ಮಾರ್ಗದಿಂದ ದೂರಸರಿದು ಅಂಧಕಾರದಲ್ಲಿ ಅಲೆದಾಡುತ್ತಿದ್ದಾರೆ. ಅವರಲ್ಲಿ ಯಾರ ದೃಷ್ಟಿಯೂ ಮುಸ್ಲಿಮರ ದೃಷ್ಟಿಯಲ್ಲ." (ಮುಸಲ್ಮಾನ್ ಔರ್ ಮೌಜೂದ ಸಿಯಾಸಿ ಕಶ್‌ಮಕಶ್: ಭಾಗ 3 ಪುಟ 95)

ಮೌಲಾನ ಮೌದೂದಿಯ ಅಭಿಪ್ರಾಯ ಪ್ರಕಾರ ಮುಸ್ಲಿಮರ ಶೇಕಡಾ 99.99 ಜನರಾಗಲಿ ಅಥವಾ ಅವರ ಧಾರ್ಮಿಕ ಮತ್ತು ರಾಜಕೀಯ ನಾಯಕರಾಗಲಿ ನೇರ ಮಾರ್ಗದಲ್ಲಿಲ್ಲ. ಅವರು ದಾರಿ ತಪ್ಪಿಹೋಗಿರುವವರು. ಅವರ ದೃಷ್ಟಿಕೋನವು ಮುಸ್ಲಿಮರ ದೃಷ್ಟಿಕೋನವಲ್ಲ. ಕುಫ್ಫಾರ್(ಅವಿಶ್ವಾಸಿ)ಗಳಲ್ಲಿ ಕಂಡುಬರುವ ಎಲ್ಲಾ ರೀತಿಯ ಅಪರಾಧಿಗಳು ಮುಸ್ಲಿಮರಲ್ಲಿಯೂ ಇದ್ದಾರೆ. ಈ ವರ್ಣನೆ ಕೇಳಿದ ನಂತರ ಮುಸ್ಲಿಮ್ ಸಮುದಾಯವನ್ನು ಯಾರಾದರೂ "ಧರ್ಮತ್ಯಾಗಿ ಕೂಟ" ಎಂದು ಹೆಸರಿಸಿದರೆ, "ನೀವು ಸರಿಯಾಗಿ ಹೇಳಿದಿರಿ" ಎಂದು ಮೌಲಾನ ಮೌದೂದಿ ಹೇಳುತ್ತಿದ್ದರು. ಅವರು ತನ್ನ ಶಬ್ದಗಳನ್ನು ಮಿತವಾಗಿ ಉಪಯೋಗಿಸುವವರಾಗಿರಲಿಲ್ಲ. ಜಮಾಅತೆ ಇಸ್ಲಾಮಿಯನ್ನು ಬಿಟ್ಟು ಹೋದವರ ಕುರಿತು ಅವರು ಹೀಗೆ ಹೇಳಿದರು:

"ಮುಂದೆ ಸಾಗುವುದು ಮತ್ತು ಹಿಂದೆ ಸರಿಯುವುದು ಇವೆರಡೂ ಒಂದೇ ಆಗಿರುವ ಮಾರ್ಗ ಇದಲ್ಲ. ಹಿಂದೆ ಸರಿಯುವುದರ ಅರ್ಥ ಧರ್ಮತ್ಯಾಗ ಮಾಡುವುದಾಗಿದೆ." (ರೂಯಿದಾದೆ ಜಮಾಅತೆ ಇಸ್ಲಾಮಿ: ಭಾಗ 1 ಪುಟ 16)

ಜಮಾಅತೆ ಇಸ್ಲಾಮಿಯನ್ನು ಬಿಟ್ಟು ಬೇರೆ ಒಂದು ಮುಸ್ಲಿಮ್ ಗುಂಪನ್ನು ಸೇರುವುದು ಧರ್ಮತ್ಯಾಗ (ಇರ್‌ತಿದಾದ್) ಆದರೆ ಆ ಬೇರೆ ಗುಂಪು ಕಾಫಿರ್(ಅವಿಶ್ವಾಸಿ)ಗಳದ್ದು ಎಂದಾಗುತ್ತದೆ. ಸಂತರ ಸಮಾಧಿಗಳಿಗೆ ಹೋಗಿ ಪ್ರಾರ್ಥಿಸುವವರು ಮತ್ತು ಪ್ರಥಮ ಮೂರು ಖಲೀಫರ ಮೇಲೆ ಅನ್ಯಾಯವಾಗಿ ಅಧಿಕಾರ ಕಸಿದುಕೊಂಡವರೆಂದು ಆರೋಪಿಸುವ ಶಿಯಾ ಜನರು ಮೌಲಾನ ದೃಷ್ಟಿಯಲ್ಲಿ ಹಾಗೆಯೇ ಕಾಫಿರ್‌ಗಳಾಗಿದ್ದಾರೆ. ಮೌಲಾನರ ಅಭಿಪ್ರಾಯ ಎಲ್ಲರಿಗೂ ತಿಳಿದಿದೆ ಮತ್ತು ದೇವ್‌ಬಂದ್ ಮದ್‌ರಸದ ವಿದ್ವಾಂಸರು ಅದನ್ನು ಅಂಗೀಕರಿಸುತ್ತಾರೆ. ಅವರೆಲ್ಲರ ಅಭಿಪ್ರಾಯವೇನೆಂದರೆ, ಭಾರತ ಮತ್ತು ಪಾಕಿಸ್ತಾನದ ಅಹ್ಲೆ ಸುನ್ನತ್ ವಲ್ ಜಮಾಅತ್‌ಗೆ ಸೇರಿದ ಬಹುತೇಕ ಜನರು, ಬರೇಲ್ವಿಗಳೆಂದು ಕರೆಯಲ್ಪಡುವವರು, ಕಾಫಿರ್‌ಗಳಾಗಿದ್ದಾರೆ.

ಮೌದೂದಿ ಸಿದ್ಧಾಂತವನ್ನು ಅಂಗೀಕರಿಸದ ಮುಸ್ಲಿಮರನ್ನು ಹೆಚ್ಚು ಕಡಿಮೆ ಕಾಫಿರರೆಂದು ಘೋಷಿಸಿದ ನಂತರ ಮೌಲಾನ ಮೌದೂದಿ ಮುಸ್ಲಿಮರಾಗಿ ಜನಿಸಿದವರ ಕುರಿತು ಸುದೀರ್ಘವಾಗಿ ವಿವರಿಸುತ್ತಾರೆ. ಇದು ಅವರ ವಾದಗಳಲ್ಲಿ ಬಹಳ ಕಷ್ಟಕರವಾದ ಒಂದು ಅಂಶವಾಗಿದೆ. ತನ್ನ ಸ್ವಂತ ನಂಬಿಕೆಗಳನ್ನು ವಿವರಿಸುತ್ತಾ ಅವರು ಹೀಗೆ ಹೇಳುತ್ತಾರೆ: "ನಾನು ಹುಟ್ಟಿನಿಂದ ಪಡೆದ ಇಸ್ಲಾಮನ್ನು ಬಿಟ್ಟಿದ್ದೇನೆ..... ನಾನು ಪವಿತ್ರ ಖುರ್‌ಆನನ್ನು ಓದಿದ್ದೇನೆ ಮತ್ತು ಪ್ರವಾದಿ ಮುಹಮ್ಮದ್‌ರವರ(ಸ) ಜೀವಿತವನ್ನು ಅಧ್ಯಯನ ಮಾಡಿದ್ದೇನೆ..... ನಾನು ಈಗ ನವ ಮುಸ್ಲಿಮನಾಗಿದ್ದೇನೆ." ಇದೇ ರೀತಿ ಬೇರೆ ಮುಸ್ಲಿಮರಿಗೆ ಈ ರೀತಿ ನವ ಮುಸ್ಲಿಮರಾಗುವ ಒಂದು ಪದ್ಧತಿಯನ್ನು ಅವರು ಯೋಜಿಸಿದರು. ಅದರ ಬಗ್ಗೆ ಅವರು ಹೀಗೆ ಹೇಳುತ್ತಾರೆ:

"ಇಸ್ಲಾಮೀ ಆಡಳಿತೆ ವ್ಯವಸ್ಥೆಯ ಸರಕಾರ ಸ್ಥಾಪಿತವಾಗಿ ಧರ್ಮತ್ಯಾಗಕ್ಕೆ ಮರಣದಂಡನೆಯನ್ನು ವಿಧಿಸುವ ಕಾನೂನನ್ನು ಜಾರಿಗೊಳಿಸಿದಾಗ ಮುಸ್ಲಿಮರ ಮಕ್ಕಳಾದ ಜನರು ತಮ್ಮ ಜನ್ಮದ ಕಾರಣದಿಂದ ಮುಸ್ಲಿಮರೆಂದು ಗಣಿಸಲ್ಪಡುವುದಾದರೆ ಮುಸ್ಲಿಮರ ಮಧ್ಯದಲ್ಲಿ ಒಂದು ದೊಡ್ಡ ಗುಂಪು ಕಪಟ ವಿಶ್ವಾಸಿಗಳದ್ದಾಗುವುದು. ಇವರಿಂದ ವಿದ್ರೋಹಕರ ಚಟುವಟಿಕೆಯ ಅಪಾಯ ಯಾವಾಗಲೂ ಇರುವುದು.

"ನನ್ನ ಅಭಿಪ್ರಾಯದಲ್ಲಿ ಇದಕ್ಕಿರುವ ಪರಿಹಾರ ಮಾರ್ಗ ಇದಾಗಿದೆ: ಇಸ್ಲಾಮಿಕ ಕ್ರಾಂತಿ ನಡೆದ ಪ್ರದೇಶದ ಎಲ್ಲಾ ಮುಸ್ಲಿಮರಿಗೆ ನೋಟೀಸು ಜಾರಿಗೊಳಿಸಬೇಕು. ವಿಶ್ವಾಸದ ವಿಷಯದಲ್ಲಿಯೂ ಆರಾಧನೆ ಮತ್ತು ಇತರ ಕರ್ಮಗಳ ವಿಷಯದಲ್ಲಿಯೂ ಇಸ್ಲಾಮಿನಿಂದ ದೂರಸರಿದವರು ನೋಟೀಸು ಪ್ರಕಟನೆಯ ದಿನದಿಂದ ಒಂದು ವರ್ಷದೊಳಗೆ 'ನಾವು ಮುಸ್ಲಿಮೇತರಾಗಿದ್ದೇವೆ' ಎಂದು ಬಹಿರಂಗವಾಗಿ ಹೇಳಿ ನಮ್ಮ ಐಕ್ಯದ ವ್ಯವಸ್ಥೆಯಿಂದ ಹೊರ ಹೋಗಬೇಕು. ಈ ಒಂದು ವರ್ಷದ ಅವಧಿಯ ನಂತರ ಜನ್ಮತಃ ಮುಸ್ಲಿಮರಾದವರನ್ನು ಮುಸ್ಲಿಮರೆಂದು ಗಣಿಸಲಾಗುವುದು. ಎಲ್ಲಾ ಇಸ್ಲಾಮೀ ನಿಯಮಗಳು ಅವರ ಮೇಲೆ ಜಾರಿಗೊಳಿಸಲಾಗುವುದು. ಧರ್ಮಕ್ಕೆ ಸಂಬಂಧಿಸಿದ ಎಲ್ಲಾ ಕಡ್ಡಾಯ ಕರ್ಮಗಳನ್ನು ನಡೆಸಲು ಒತ್ತಾಯಿಸಲಾಗುವುದು. ಅನಂತರ ಅವರು ಇಸ್ಲಾಮಿನ ವಲಯದಿಂದ ಹೊರಗೆ ಹೆಜ್ಜೆ ಹಾಕಿದರೆ ಅವರನ್ನು ಕೊಲ್ಲಲಾಗುವುದು.

"ಈ ಪ್ರಕಟಣೆಯ ನಂತರ ಮುಸ್ಲಿಮರ ಗಂಡು ಮಕ್ಕಳನ್ನೂ ಹೆಣ್ಣು ಮಕ್ಕಳನ್ನೂ ಕುಫ್ರಿನ ಮಡಿಲಿಗೆ ಹೋಗುವುದರಿಂದ ರಕ್ಷಿಸಲು ಸಾಧ್ಯವಿರುವ ಅತ್ಯಂತ ಹೆಚ್ಚಿನ ಪ್ರಯತ್ನ ಮಾಡಲಾಗುವುದು. ಆದರೆ ಯಾರನ್ನು ರಕ್ಷಿಸಿಡಲು ಸಾಧ್ಯವಾಗುವುದಿಲ್ಲವೋ ಹೃದಯದ ಮೇಲೆ ಕಲ್ಲಿಟ್ಟು, ಅವರನ್ನು ನಮ್ಮ ಸಮಾಜದಿಂದ ಎಂದೆಂದಿಗೂ ಕಡಿದು ಬಿಸಾಡಲಾಗುವುದು (ವಧಿಸಲಾಗುವುದು). ಈ ಶುದ್ಧೀಕರಣ ಕ್ರಿಯೆಯ ನಂತರ ಇಸ್ಲಾಮಿನ ಕುರಿತು ತೃಪ್ತರಾದವರಿಂದ ಮಾತ್ರ ಇಸ್ಲಾಮೀ ಸಮಾಜದ ಆರಂಭವಾಗುವುದು." (ಮುರ್‌ತದ್ ಕಿ ಸರ್ಝಾ ಪುಟ 80-81)

ಧರ್ಮತ್ಯಾಗಕ್ಕಾಗಿ ಮರಣದಂಡನೆಯನ್ನು ವಿಧಿಸುವ ಕಾನೂನನ್ನು ಇಜ್ತಿಹಾದ್‌ನ ಯಾವ ಶರತ್ತುಗಳಿಗೆ ಅನುಸಾರವಾಗಿ ಸಡಿಸಲಾಗುವುದೆಂಬುದರ ಕುರಿತು ಮೌಲಾನ ಮೌದೂದಿ ವಿವರಿಸುವುದಿಲ್ಲ. ಮೌದೂದಿ ಹೇಳುವುದರಿಂದ ನಮಗೆ ತಿಳಿಯುವುದೇನೆಂದರೆ, ಈ ಕಾನೂನನ್ನು ಇಸ್ಲಾಮಿಕ ಕ್ರಾಂತಿ ಮೂಲಕ ಅಧಿಕಾರ ಪಡೆದ ಸರಕಾರ ಒಂದೇ ಒಂದು ಬಾರಿ ಮಾತ್ರ ಜಾರಿಗೊಳಿಸಬಹುದು. ಈ ರಿಯಾಯಿತಿ ಕಾಲದಲ್ಲಿ ಹೊರತು ಅನಂತರ ಜನ್ಮತಃ ಕಾಫಿರ್ ಆದ ಮುಸ್ಲಿಮರಿಗೆ ಈ ರಿಯಾಯಿತಿ ದೊರಕಲಾರದು. ಈ ದುರದೃಷ್ಟವಂತರಿಗೆ ರಿಯಾಯಿತಿ ನೀಡಲು ಏಕೆ ಸಾಧ್ಯವಾಗುವುದಿಲ್ಲ ಎಂಬುದರ ಕುರಿತು ಮೌಲಾನ ಮೌದೂದಿ ಹೀಗೆ ಹೇಳುತ್ತಾರೆ:

"ಧರ್ಮತ್ಯಾಗಿಗೆ ಮರಣದಂಡನೆ ವಿಧಿಸುವ ನಿಯಮದ ಕುರಿತು ಒಂದು ಕೊನೆಯ ಪ್ರಶ್ನೆ ವಿವರಿಸಲು ಬಾಕಿ ಇದೆ. ಅದು ಅನೇಕರಿಗೆ ಆತಂಕ ಉಂಟುಮಾಡುತ್ತದೆ. ಅದು ಹೀಗೆ: ಒಬ್ಬನು ಮೊದಲು ಮುಸ್ಲಿಮೇತರನಾಗಿದ್ದನು. ಅವನು ಸ್ವಂತ ಇಷ್ಟದಿಂದ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದನು. ಅನಂತರ ಅವನು ಅವಿಶ್ವಾಸಿಯಾದನು. ಅಂತಹ ವ್ಯಕ್ತಿ ತಿಳಿದೂ ತಿಳಿದು ತಪ್ಪು ಕೆಲಸ ಮಾಡಿದನೆಂದು ಹೇಳಬಹುದು. ಅವನು ಮುಸ್ಲಿಮೇತರನಾಗಿ (ದಿಮ್ಮಿ) ಏಕೆ ಉಳಿಯಲಿಲ್ಲ. ಸಾಮೂಹಿಕ ಬದ್ಧತೆಯುಳ್ಳ

ಈ ಧರ್ಮಕ್ಕೆ ಅವನು ಏಕೆ ಪ್ರವೇಶಿಸಿದ? ಇದರಿಂದ ಹೊರಹೋಗುವ ಬಾಗಿಲು ಮುಚ್ಚಲ್ಪಟ್ಟಿದೆ ಎಂದು ತಿಳಿದಿದ್ದರೂ ಏಕೆ ಹೀಗೆ ಮಾಡಿದ? ಆದರೆ ಸ್ವತಃ ಇಸ್ಲಾಮ್ ಧರ್ಮವನ್ನು ಸೇರದ, ಆದರೆ ತಂದೆ ತಾಯಿ ಮುಸ್ಲಿಮರಾದ ಕಾರಣ ಇಸ್ಲಾಮ್ ಧರ್ಮ ಅವನ ಧರ್ಮವಾದ ವ್ಯಕ್ತಿಯ ವಿಷಯ ಬೇರೆಯೇ ಆಗಿದೆ. ಇಂತಹ ವ್ಯಕ್ತಿ ಪ್ರಾಪ್ತವಯಸ್ಕನಾದಾಗ ಇಸ್ಲಾಮಿನ ಬಗ್ಗೆ ತೃಪ್ತನಾಗದೆ ಅದರಿಂದ ಹೊರಹೋಗಲು ಬಯಸಿದರೆ ಅವನಿಗೆ ಮರಣದಂಡನೆಯ ಶಿಕ್ಷೆಯ ಬೆದರಿಕೆ ಹಾಕಿ ಇಸ್ಲಾಮಿನ ಒಳಗೆ ಇರಲು ಬಲಾತ್ಕಾರ ಮಾಡುವುದು ಒಂದು ಹಿಂಸಾಚಾರವಾಗಿ ತೋರುತ್ತದೆ. ಮಾತ್ರವಲ್ಲ, ಹುಟ್ಟಿನಿಂದ ಮುಸ್ಲಿಮರಾದವರ ಒಂದು ದೊಡ್ಡ ಗುಂಪು ಮುಸ್ಲಿಮರ ಸಾಮೂಹಿಕ ಬದ್ಧತೆಯೊಳಗಾದವರೊಂದಿಗೆ ಇರುವಂತಾಗುತ್ತದೆ. ಈ ಸಂಶಯಕ್ಕೆ ಇರುವ ಒಂದು ಉತ್ತರ ಸಿದ್ಧಾಂತಕ್ಕೆ ಅನುಸಾರವಾಗಿದೆ; ಇನ್ನೊಂದು ಕ್ರಿಯಾತ್ಮಕವಾಗಿದೆ. ಸೈದ್ಧಾಂತಿಕ ಉತ್ತರ ಇದಾಗಿದೆ: ಹುಟ್ಟಿನಿಂದ ಮತ್ತು ಸ್ವಬುದ್ಧಿಯಿಂದ ಅನುಯಾಯಿಗಳಾದವರ ಮಧ್ಯೆ ಆಜ್ಞೆ ಜಾರಿಗೊಳಿಸುವ ವಿಷಯದಲ್ಲಿ ವ್ಯತ್ಯಾಸ ಮಾಡಲು ಸಾಧ್ಯವಿಲ್ಲ. ಮಾತ್ರವಲ್ಲ, ಯಾವುದೇ ಧರ್ಮವು ಈ ರೀತಿಯ ವ್ಯತ್ಯಾಸವನ್ನು ಎಂದೂ ಅವರ ಮಧ್ಯೆ ಮಾಡಿಲ್ಲ. ಪ್ರತಿಯೊಂದು ಧರ್ಮ ತಮ್ಮ ಅನುಯಾಯಿಗಳ ಮಕ್ಕಳನ್ನು ಸಹಜವಾಗಿಯೇ ತಮ್ಮ ಅನುಯಾಯಿಗಳೆಂದು ಗಣಿಸುತ್ತದೆ. ಸ್ವಬುದ್ಧಿಯಿಂದ ಧರ್ಮಾವಲಂಬಿಗಳಾದವರ ಮೇಲೆ ತಮ್ಮ ಆಜ್ಞೆಗಳನ್ನು ಜಾರಿಗೊಳಿಸುವ ಹಾಗೆಯೇ ಅವರ ಮೇಲೆಯೂ ಅವುಗಳನ್ನು ಜಾರಿಗೊಳಿಸುತ್ತದೆ. ಒಂದು ಧರ್ಮದ ಅನುಯಾಯಿಗಳು ಅಥವಾ ಒಂದು ದೇಶದ ಪ್ರಜೆಗಳ ಮಕ್ಕಳನ್ನು ಮೊದಲು ಅವಿಶ್ವಾಸಿಗಳ ಹಾಗೆ ಅಥವಾ ಅನ್ಯ ದೇಶೀಯರ ಹಾಗೆ ಬೆಳೆಸಿ ಅವರು ಪ್ರಾಪ್ತ ವಯಸ್ಕರಾದ ನಂತರ ಅವರಿಗೆ ಇಂತಹ ಧರ್ಮಾವಲಂಬಿ ಎಂದು ಹೇಳಲು ಅಥವಾ ಇಂತಹ ದೇಶದ ಪ್ರಜೆ ಎಂದು ಹೇಳಲು ಸ್ವಾತಂತ್ರ್ಯವನ್ನು ಕೊಡುವುದು ಕ್ರಿಯಾತ್ಮಕವಾಗಿ ಅಸಾಧ್ಯವೂ ವಿವೇಕಶೂನ್ಯವೂ ಆದ ಕೆಲಸವಾಗಿದೆ. ಈ ರೀತಿ ಯಾವುದೇ ಸಮಾಜವು ಲೋಕದಲ್ಲಿ ಕಾರ್ಯಪ್ರವೃತ್ತವಾಗಲು ಸಾಧ್ಯವಾಗಲಾರದು." (ಮುರ್‌ತದ್ದ್ ಕೀ ಸರ್ಝಾ ಇಸ್ಲಾಮೀ ಕಾನೂನ್ ಮೇಂ ಪುಟ 76 -77)

ಧರ್ಮತ್ಯಾಗಕ್ಕಿರುವ ಶಿಕ್ಷೆ ಮರಣದಂಡನೆ ಎಂದೂ ಮೌದೂದಿಯ ಅಭಿಪ್ರಾಯ ಪ್ರಕಾರ ಮೌದೂದಿಯೇತರ ಮುಸ್ಲಿಮರೆಲ್ಲರೂ ಅವಿಶ್ವಾಸಿಗಳು (ಕಾಫಿರರು) ಎಂದೂ ವಾದಕ್ಕೆ ಬೇಕಾಗಿ ಸಮ್ಮತಿಸುವುದಾದರೂ ಆ ಅವಿಶ್ವಾಸವನ್ನು ತಮ್ಮ ತಂದೆ ತಾಯಿಯರಿಂದ ಪಡೆದ ಕಾರಣ ಮೌದೂದಿ ದೃಷ್ಟಿಕೋನದ ಪ್ರಕಾರ ಸಹ ಧರ್ಮತ್ಯಾಗಿಗಳು ಎಂದು ಗಣಿಸಲ್ಪಡಲು ಸಾಧ್ಯವಿಲ್ಲ. ಏಕೆಂದರೆ ಅವರು ಜನ್ಮತಃ ಅವಿಶ್ವಾಸಿಗಳಷ್ಟೆ! (ಪೈದಾಯಿಶೀ ಕಾಫಿರ್) ಈ ಮೌದೂದೀ ಕಲ್ಪನೆ ಪ್ರಕಾರದ ಇಸ್ಲಾಮನ್ನು ಒಪ್ಪದ ಮುಸ್ಲಿಮರನ್ನು ಮೊದಲು ಜನ್ಮತಃ ಮುಸ್ಲಿಮ್ ಮತ್ತು ಜನ್ಮತಃ ಕಾಫಿರ್ ಎಂದು ಎರಡು ವಿಧದಲ್ಲಿ ವಿವರಿಸಲಾಗಿದೆ. ಕಾರಣವೇನೆಂದರೆ, ಅವರು (ಜನ್ಮತಃ ಕಾಫಿರ್) ತಮ್ಮ ಮಾತಾಪಿತರಿಂದ ಕುಫ್ರಿಯತಿನ ವಾತಾವರಣದಲ್ಲಿ ಪೋಷಿಸಲ್ಪಟ್ಟಿದ್ದಾರೆ. ಅವರನ್ನು ಧರ್ಮತ್ಯಾಗಿಗಳೆಂದು ಕರೆಯುವುದೇಕೆಂದರೆ, ಅವರು ಪ್ರಾಪ್ತ ವಯಸ್ಕರಾದಾಗ ಮೌದೂದೀ ಕಲ್ಪನೆ ಪ್ರಕಾರದ ಇಸ್ಲಾಮನ್ನು ಸ್ವೀಕರಿಸುವುದರ ಬದಲು ಮಾತಾಪಿತರ ಕುಫ್ರಿಯತ್‌ನಲ್ಲೇ ಮುಂದುವರಿದರು. ಒಬ್ಬ ಅಮುಸ್ಲಿಮ್ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿ ಮತ್ತೆ ಅದನ್ನು ತ್ಯಜಿಸಿದರೆ ವಧಿಸಲ್ಪಡಬೇಕು! ಏಕೆಂದರೆ ಇಸ್ಲಾಮಿಗೆ ಪ್ರವೇಶಿಸಿದರೆ ಮತ್ತೆ ಅದರಿಂದ ತಪ್ಪಿಸಲು ಸಾಧ್ಯವಿಲ್ಲವೆಂದು ತಿಳಿದುಕೊಂಡು ಆತನು ಇಸ್ಲಾಮಿಗೆ ಪ್ರವೇಶಿಸುತ್ತಾನೆ. ಹಾಗೆಯೇ ಜನ್ಮತಃ "ಮೌದೂದೀ ಮುಸ್ಲಿಮ್" ಅಲ್ಲದ ಒಬ್ಬನನ್ನು ಸಹ ಧರ್ಮತ್ಯಾಗಿ ಎಂದು ಗಣಿಸಬಹುದು. ಏಕೆಂದರೆ, ಪ್ರಾಪ್ತ ವಯಸ್ಕನಾದ ನಂತರ ಮೌದೂದೀ ಕಲ್ಪನೆಯ ಇಸ್ಲಾಮನ್ನು ಆತನು ಸ್ವೀಕರಿಸಲಿಲ್ಲ. ಈ ತರ್ಕ ವಿಧಾನಗಳು ಸ್ಪಷ್ಟವಾಗಿ ಮೌಲಾನರ ದಬ್ಬಾಳಿಕೆ, ಕೈವಾಡ ಮತ್ತು ಅಸಹಿಷ್ಣುತೆಯ ವ್ಯಕ್ತಿತ್ವವನ್ನು ತೋರಿಸುತ್ತದೆ. ಜನ್ಮತಃ ಮುಸ್ಲಿಮ್ ಆಗಿರಲಿ ಅಥವಾ ಧರ್ಮಾಂತರ ಹೊಂದಿದ ಮುಸ್ಲಿಮ್ ಆಗಿರಲಿ ಮೌಲಾನರ ಹಿಡಿತದಿಂದ ಮುಕ್ತನಲ್ಲ.

ಪವಿತ್ರ ಖುರ್‌ಆನಿನ "ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ" (2 : 257) ಎಂಬ ವಚನವನ್ನು ಮೌಲಾನ ಹೀಗೆ ವ್ಯಾಖ್ಯಾನಿಸಿದ್ದಾರೆ: "ನಾವು ಯಾರನ್ನೂ ನಮ್ಮ ಧರ್ಮಕ್ಕೆ ಸೇರಲು ಬಲಾತ್ಕಾರ ಮಾಡುವುದಿಲ್ಲ. ಆದರೆ ಯಾರು ಒಳಗೆ ಬಂದು ಹೊರಗೆ ಹೋಗಲು ಬಯಸುತ್ತಾನೋ ನಾವು ಅವನಿಗೆ ಮೊದಲೇ ಮುನ್ನೆಚ್ಚರಿಕೆ ನೀಡುತ್ತೇವೆ. ಈ ಬಾಗಿಲು ಒಳಗೆ ಬರಲು ಮತ್ತು ಹೊರಗೆ ಹೋಗಲು ತೆರೆದಿರುವಂತಹದ್ದು ಅಲ್ಲ, ಆದುದರಿಂದ ಒಳಗೆ ಬರುವವರು ಹೊರಗೆ ಹೋಗಲಿಕ್ಕೆ ಸಾಧ್ಯವೇ ಇಲ್ಲವೆಂದು ದೃಢವಾದ ನಿರ್ಧಾರ ಕೈಗೊಂಡು ಬರಬೇಕು."

ಈ ವ್ಯಾಖ್ಯಾನದ ಬಗ್ಗೆ ಅಹ್ಲೆ ಖುರ್‌ಆನ್ ಜಮಾಅತಿನ ಗಣ್ಯ ವಿದ್ವಾಂಸರಾದ ಗುಲಾಮ್ ಅಹ್ಮದ್ ಪರ್ವೇಝ್ ಹೀಗೆ ಹೇಳುತ್ತಾರೆ:

"ಮೌದೂದಿ ಸಾಹೇಬರು ಪ್ರತಿಪಾದಿಸುವ ಇಸ್ಲಾಮ್ ಒಂದು ಇಲಿಗೂಡಿನ ಹಾಗಿದೆ. ಅದರೊಳಗೆ ಇಲಿ ಹೋಗಬಹುದು. ಆದರೆ ಹೊರಗೆ ಬರಲು ಸಾಧ್ಯವಾಗದು."

ಮೌಲಾನ ಮೌದೂದಿಯ ವಾದದ ಮುಖ್ಯ ಅಂಶವೇನೆಂದರೆ: ಪ್ರತಿಯೊಂದು ಧರ್ಮ ತನ್ನ ಅನುಯಾಯಿಗಳ ಸಂತಾನವನ್ನು ತನ್ನ ಅನುಯಾಯಿಗಳಿಗೆ ಸೇರಿದವರೆಂದು ಗಣಿಸುತ್ತದೆ. ಆದುದರಿಂದ ಮುಸ್ಲಿಮ್ ತಂದೆ ತಾಯಿಗಳು ಅನುಷ್ಠಾನದ ದೃಷ್ಟಿಯಲ್ಲಿ ಕಾಫಿರರಾದರೂ ಅವರ ಮಕ್ಕಳು ಇಸ್ಲಾಮಿನ ಸಂಪತ್ತಾಗುತ್ತಾರೆ. ಈ ಮಕ್ಕಳ ಮೇಲೆ ಮಾಲಿಕತ್ವದ ಹಕ್ಕನ್ನು ಸ್ಥಾಪಿಸಿರುವಾಗ ಅವರು ಪ್ರಾಪ್ತವಯಸ್ಕರಾಗುವಾಗ ಅನ್ಯ ಧರ್ಮವನ್ನು ಪರಿಗ್ರಹಣಮಾಡಲು ಹೇಗೆ ತಾನೆ ಸ್ವಾತಂತ್ರ್ಯ ಪಡೆಯಬಲ್ಲರು?

ಈ ಅಂಶವನ್ನು ಪ್ರತಿಪಾದಿಸುವಾಗ ಮೌಲಾನ ಮೌದೂದಿಯವರು ಪವಿತ್ರ ಪ್ರವಾದಿಯವರ(ಸ) ಒಂದು ವಚನವನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲವೆಂದು ನನಗೆ ತೋರುತ್ತದೆ:

"ಪ್ರತಿಯೊಂದು ಮಗು ಇಸ್ಲಾಮಿನ ಪ್ರಕೃತಿಯನ್ನು ಪಡೆದು ಜನಿಸುತ್ತದೆ. ಆ ಮಗುವಿನ ತಂದೆ ತಾಯಂದಿರು ಆ ಮಗುವನ್ನು, ಯಹೂದಿಯನ್ನಾಗಿ ಅಥವಾ ಕ್ರೈಸ್ತನನ್ನಾಗಿ ಅಥವಾ ಪಾರಸೀ ಧರ್ಮದವನನ್ನಾಗಿ ಮಾಡುತ್ತಾರೆ." (ಬುಖಾರಿ)

ಮೌಲಾನ ಮೌದೂದಿಯ ವಾದದ ಮುಖ್ಯ ಅಂಶ ಸರಿಯಾದುದಾಗಿದ್ದರೆ ಅದನ್ನು ಮುಸ್ಲಿಮರೆಂದು ಕರೆಯಲ್ಪಡುವವರ ಮಕ್ಕಳಿಗೆ ಮಾತ್ರ ಏಕೆ ಸೀಮಿತಗೊಳಿಸಬೇಕು? ಲೋಕದ ಎಲ್ಲಾ ಮಕ್ಕಳಿಗೆ ಏಕೆ ಅನ್ವಯಿಸಬಾರದು? ಹೀಗೆ ಮಾಡಿದರೆ ಎಲ್ಲಾ ಮುಸ್ಲಿಮೇತರ ಮಕ್ಕಳ ಮೇಲೆ ಸಹ ನಿಯಂತ್ರಣ ಹೊಂದಲು ಮೌದೂದಿ ಸರಕಾರಕ್ಕೆ ಸಾಧ್ಯವಾಗುವುದಷ್ಟೆ!

ಮೌಲಾನ ಮೌದೂದಿ ಈ ಹದೀಸನ್ನು ಗಮನಿಸಿರಲಿಲ್ಲವೆಂದು

ತೋರುತ್ತದೆ. ಆದರೆ ಮೌಲಾನ ಮೌದೂದಿಯ ತರ್ಕವು ಮೇಲಿನ ಅಸಂಬದ್ಧತೆಗೆ ಅವರನ್ನು ಕೊಂಡೊಯ್ಯಬಹುದಾಗಿದೆ.

ಮೌಲಾನ ಮೌದೂದಿ ವಾಸ್ತವಿಕವಾಗಿ ತನ್ನ ಜಮಾಅತೆ ಇಸ್ಲಾಮಿ ಚಳುವಳಿಯಲ್ಲಿ ಮಧ್ಯಕಾಲೀನ ಕ್ರೈಸ್ತ ಧರ್ಮ ವಿಶ್ವಾಸಗಳನ್ನು ಅಕ್ಷರಶಃ ನಕಲು ಮಾಡಿರುವವರು. ಮಧ್ಯಕಾಲೀನ ಕ್ರೈಸ್ತ ಧರ್ಮೀಯರ ಅಸಹಿಷ್ಣುತೆಯ ಕುರಿತು ಮಧ್ಯಕಾಲೀನ ಕ್ರೈಸ್ತ ಧರ್ಮದ ಚರಿತ್ರೆಗಾರರಾದ ಎಲಿಸಬೆತ್ ಲಬ್ರೂಸೆ ಹೀಗೆ ಹೇಳುತ್ತಾರೆ: "ವ್ಯಕ್ತಿಗಳ ಮಲೆ ಬೀರಿದ ಪ್ರಭಾವದ ಕುರಿತು ಹೇಳುವುದಾದರೆ, ಆ ಕಾಲದ ಕ್ರೈಸ್ತರ ನಡೆವಳಿಕೆಗಳು ಹುತಾತ್ಮರನ್ನು ಅಥವಾ ಕಪಟವಿಶ್ವಾಸಿಗಳನ್ನು ಸೃಷ್ಟಿಸುತ್ತಿದ್ದುವು." (Dictionary of the History of Ideas - Vol IV Page 116 - New York)

ಲಬ್ರೂಸೆಯ ಈ ಅವಲೋಕನವನ್ನು ಮೌಲಾನ ಮೌದೂದಿಯ ಈ ಕೆಳಗಿನ ಹೇಳಿಕೆಯೊಂದಿಗೆ ಹೋಲಿಸಿ ನೋಡಿರಿ:

"ಅವನು (ಧರ್ಮತ್ಯಾಗಿ) ಕಪಟ ವಿಶ್ವಾಸಿಯಾಗಿರಲು ಸಮ್ಮತಿಸದಂತಹ ಪ್ರಾಮಾಣಿಕನಾಗಿದ್ದರೆ ಮತ್ತು ತಾನು ನಂಬುವುದನ್ನು ಮುಂದುವರಿಸಿಕೊಂಡು ಹೋಗುವುದರಲ್ಲಿ ಸತ್ಯ ಸಂಧನಾಗಿದ್ದರೆ ಅವನು ತನ್ನನ್ನು ಮರಣದಂಡನೆಗೆ ಗುರಿಪಡಿಸಲು ಏಕೆ ಮುಂದಕ್ಕೆ ಬರುವುದಿಲ್ಲ?" (ಮುರ್‌ತದ್ದ್ ಕೀ ಸರ್ಝಾ - ಪುಟ 53)

ಧರ್ಮದ ಕುರಿತು ಮೌದೂದಿಯ ಅಭಿಪ್ರಾಯಗಳು ಮಾತ್ರ ಮೋಕ್ಷವನ್ನು ದೊರಕಿಸಬಲ್ಲವುಗಳಾದುದರಿಂದ ಮೌಲಾನ ಇತರ ಧರ್ಮದ ಅನುಯಾಯಿಗಳಿಗೆ ತನ್ನ ಅನುಯಾಯಿಗಳಿಗಿರುವಂತಹ ಅಧಿಕಾರಗಳನ್ನೂ ಸವಲತ್ತುಗಳನ್ನೂ ನೀಡಲಾರರು. ಇತರ ಧರ್ಮಗಳ ಮತಪ್ರಚಾರಕ ಚಟುವಟಿಕೆಗಳು ನಿಷಿದ್ಧಗೊಳಿಸಲಾಗುವುವು. ಅವರು ಹೀಗೆ ಹೇಳುತ್ತಾರೆ:

"ಧರ್ಮತ್ಯಾಗ ಮಾಡುವವರಿಗೆ ಮರಣದಂಡನೆ ವಿಧಿಸುವ ನಿಯಮ ಈ ಸಮಸ್ಯೆಯ ಬಗ್ಗೆ ತೀರ್ಪು ನೀಡಿದೆ. ನಾವು ನಮ್ಮ ಆಡಳಿತೆಗೊಳಗಿರುವ ಪ್ರದೇಶದಲ್ಲಿ ಮುಸ್ಲಿಮನೊಬ್ಬನು ಬೇರೆ ಧರ್ಮವನ್ನು ಸೇರುವುದನ್ನು ನಿಷಿದ್ಧಗೊಳಿಸಿರುವುದರಿಂದ, ನಾವು ನಮ್ಮ ಪ್ರದೇಶದಲ್ಲಿ ಇಸ್ಲಾಮಿಗೆ ವಿರುದ್ಧವಾಗಿ ಯಾವುದಾದರೂ ಮತಪ್ರಚಾರ ನಡೆಸಲು ಅನುಮತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ನಾವು ಅದನ್ನು ಸಹಿಸಲು ಸಾಧ್ಯವಿಲ್ಲ." (ಮುರ್‌ತದ್ದ್ ಕೀ ಸರ್ಝಾ - ಪುಟ 32)

ಆದರೆ ಅವಿಶ್ವಾಸಿ (ಕಾಫಿರ್) ತನ್ನ ಧರ್ಮವನ್ನು ಅವಿಶ್ವಾಸಿಗಳ ಮಧ್ಯೆ ಪ್ರಚಾರಮಾಡಬಹುದೇ? ಉದಾಹರಣೆಗಾಗಿ, ಒಬ್ಬ ಕ್ರೈಸ್ತನು ಯಹೂದಿಯರಿಗೂ ಹಿಂದೂಗಳಿಗೂ ಧರ್ಮ ಪ್ರಚಾರ ನಡೆಸಬಹುದೇ? ಮೂರ್ತಿ ಪೂಜೆ ಮಾಡದ ಮತ್ತು ಏಕದೇವ ವಿಶ್ವಾಸಿಗಳಾದ ಆರ್ಯ ಸಮಾಜದ ಜನರು ಬಹುದೇವ ವಿಶ್ವಾಸಿಗಳಾದ ಸನಾತನ ಧರ್ಮಾವಲಂಬಿಗಳ ನಡುವೆ ಮತ ಪ್ರಚಾರ ಮಾಡಬಹುದೇ? ಮೌಲಾನ ಹೀಗೆ ಹೇಳುತ್ತಾರೆ:

"ಶಾಶ್ವತ ನಾಶದ ಕಡೆಗೆ ಮನುಷ್ಯರನ್ನು ಕೊಂಡೊಯ್ಯುವ ಮತಧರ್ಮಗಳು ಪ್ರಚಾರಗೊಳ್ಳುವುದನ್ನು ಇಸ್ಲಾಮ್ ಸಹಿಸಲಾರದು. ಮಿಥ್ಯದ ಕಡೆಗೆ ಕರೆ ನೀಡುತ್ತಿರುವವರಿಗೆ ಬಹಿರಂಗ ಲೈಸನ್ಸ್ ನೀಡಿ ತಾವು ಸ್ವತಃ ಯಾವ ಅಗ್ನಿಯ ಕಡೆಗೆ ಸಾಗುತ್ತಿರುವರೋ ಅದರ ಕಡೆಗೆ ಇತರರನ್ನೂ ಸೆಳೆಯಲು ನಾವು ಬಿಡಲಾರೆವು." (ಮುರ್‌ತದ್ದ್ ಕೀ ಸರ್ಝಾ - ಪುಟ 35)

ಯಹೂದಿಯರು ಮತ್ತು ಕ್ರೈಸ್ತರು ಅಹ್ಲೆ ಕಿತಾಬ್ (ಗ್ರಂಥ ನೀಡಲ್ಪಟ್ಟವರು) ಎಂದು ಮೌದೂದಿಯವರು ಅಂಗೀಕರಿಸುತ್ತಾರೆ. ಆದರೆ ವಿಗ್ರಹಾರಾಧಕರನ್ನು, ಅಗ್ನಿ ಆರಾಧಕರನ್ನು ಮತ್ತು ಬಹುದೈವಾರಾಧಕರನ್ನು ಪ್ರವಾದಿ ಮೂಸಾ(ಅ) ಮತ್ತು ಪ್ರವಾದಿ ಈಸಾ(ಅ) ಆರಾಧಿಸುತ್ತಿದ್ದ ಏಕದೇವನ ಆರಾಧಕರನ್ನಾಗಿ ಮಾಡಿ ಅವರನ್ನು ಇಸ್ಲಾಮಿಗೆ ಸಮೀಪವಾಗುವಂತೆ ಅವರು ಮಾಡುವುದನ್ನು ಮೌದೂದಿ ನಿಷಿದ್ಧಗೊಳಿಸುತ್ತಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಜನ್ಮತಃ ಅವಿಶ್ವಾಸಿ (ಕಾಫಿರ್) ಆಗಿರುವವನನ್ನು ಮಾತ್ರ ಅವನು ಇಸ್ಲಾಮ್ ಧರ್ಮಕ್ಕೆ ಪರಿವರ್ತನೆ ಹೊಂದದಿದ್ದರೆ ಮರಣದಂಡನೆಯಿಂದ ವಿನಾಯಿತಿ ಪಡೆಯಬಹುದೆಂದು ಮೌಲಾನ ಮೌದೂದಿ ಹೇಳುತ್ತಾರೆ. ಹೀಗಿರುವಾಗ ಒಬ್ಬ ಹೊಸ ಅವಿಶ್ವಾಸಿ (ಕಾಫಿರ್) ಧರ್ಮತ್ಯಾಗ ಮಾಡಿದರೆ ಏಕೆ ಕೊಲ್ಲಬೇಕು? ಹೊಸದಾಗಿ ಅವಿಶ್ವಾಸಿಯಾದವನಿಗೆ ಶಿಕ್ಷೆ ನೀಡಬೇಕಾದರೆ ಆ ಶಿಕ್ಷೆ ಮರಣದಂಡನೆಯೇ ಏಕೆ ಆಗಬೇಕು? ಗಡಿಪಾರು, ಆಜೀವನ ಕಾರಾಗ್ರಹ ಮೊದಲಾದ ಶಿಕ್ಷೆಗಳನ್ನು ವಿಧಿಸಿ ಮುಸ್ಲಿಮ್ ಸಮಾಜವನ್ನು ಅವ್ಯವಸ್ಥೆಯಿಂದ ಏಕೆ ರಕ್ಷಿಸಬಾರದು? ಇದರ ಬಗ್ಗೆ ಮೌಲಾನ ಮೌದೂದಿ ಸಂತ ಆಗಸ್ಟಿನ್ ತರ್ಕಶಾಸ್ತ್ರ ಬಳಸಿ ಧರ್ಮತ್ಯಾಗಿಯನ್ನು ಕೊಲ್ಲುವುದು ಅವನ ಸ್ವಂತ ಹಿತಕ್ಕಾಗಿ ಎಂದು ವಾದಿಸುತ್ತಾರೆ! ಅವರು ಹೀಗೆ ಹೇಳುತ್ತಾರೆ:

"ಧರ್ಮತ್ಯಾಗ ಮಾಡುವವನಿಗೆ ಸಂಬಂಧಿಸಿ ಎರಡು ಪರಿಹಾರ ಮಾರ್ಗಗಳು ಮಾತ್ರ ಇವೆ. ಅವನ ಎಲ್ಲಾ ರೀತಿಯ ನಾಗರಿಕ ಹಕ್ಕುಗಳನ್ನು ಕಿತ್ತುಕೊಂಡು ಅವನನ್ನು ಜೀವಂತವಾಗಿ ಇರಲು ಬಿಡಬಹುದು ಅಥವಾ ಅವನನ್ನು ಕೊಲ್ಲಬಹುದು. ಮೊದಲನೆಯದಾಗಿ ಹೇಳಿದಂತೆ ಮಾಡುವುದಾದರೆ ಅದು ವಾಸ್ತವಿಕವಾಗಿ ಎರಡನೆಯ ರೀತಿಯಲ್ಲಿ ವರ್ತಿಸುವುದಕ್ಕಿಂತ ಹೆಚ್ಚು ಕಠೋರವಾದುದಾಗಿದೆ. ಏಕೆಂದರೆ ಆ ರೀತಿ ಮಾಡಿದರೆ 'ಅವನು ಅಲ್ಲಿ ಮೃತನಾಗಲಾರನು ಮತ್ತು ಬದುಕಿ ಸಹ ಇರಲಾರನು' (ಪವಿತ್ರ ಖುರ್‌ಆನ್ 87 : 14) ಎಂಬ ಸ್ಥಿತಿಯಲ್ಲಿ ಅವನು ಆಗುವನು. ಆದುದರಿಂದ ಅವನಿಗೆ ಮರಣದಂಡನೆ ವಿಧಿಸಿ ಅವನಿಗೆ ಮತ್ತು ಸಮಾಜಕ್ಕೆ ಸಂಬಂಧಿಸಿದ ವಿಪತ್ತನ್ನು ಒಂದೇ ಸಾರಿ ಕೊನೆಗೊಳಿಸಬಹುದಾಗಿದೆ." (ಮುರ್‌ತದ್ದ್ ಕೀ ಸರ್ಝಾ - ಪುಟ 51)

ಧರ್ಮತ್ಯಾಗಕ್ಕಾಗಿ ಮೌಲಾನ ಮೌದೂದಿ ವಿಧಿಸುವ ಮರಣದಂಡನೆ ಸಂತ ಆಗಸ್ಟಿನ್ ಪ್ರತಿಪಾದಿಸಿದ "ಪ್ರೀತಿಯಿ ಸ್ಫೂರ್ತಿಯ" ಹಿಂಸಾಚಾರದ ರೀತಿಯದ್ದು ಅಲ್ಲ. ಮೃತ್ಯುವಿನ ನಂತರ ಪರಲೋಕ ಜೀವಿತವಿದೆ. ಒಬ್ಬ ಧರ್ಮತ್ಯಾಗಿಯನ್ನು ಕೊಂದು ಮೌಲಾನ ಮೌದೂದಿ ಅವನನ್ನು ನೇರವಾಗಿ ನರಕಾಗ್ನಿಗೆ ತಳ್ಳುತ್ತಾರೆ. ಧರ್ಮತ್ಯಾಗಿಯನ್ನು ಬಹಿಷ್ಕಾರಕ್ಕೊಳಗಾದ ತಾತ್ಕಾಲಿಕ ಜೀವಿತದ ಕಷ್ಟಗಳಿಂದ ರಕ್ಷಿಸಿ ನರಕಾಗ್ನಿಯ ದಾರುಣ ಯಾತನೆಗೆ ಅವರು ಗುರಿಪಡಿಸುತ್ತಾರೆ. ಇದಕ್ಕಿಂತ ಮುಖ್ಯವಾದುದೇನೆಂದರೆ ಮೌಲಾನ ಮೌದೂದಿ ಧರ್ಮತ್ಯಾಗಿಯನ್ನು ಪಶ್ಚಾತ್ತಾಪ ಹೊಂದುವ ಅವಕಾಶದಿಂದ ವಂಚಿತನನ್ನಾಗಿ ಮಾಡಿ ಅವನನ್ನು ಮೋಕ್ಷದಿಂದಲೂ ವಂಚಿತನನ್ನಾಗಿ ಮಾಡುತ್ತಾರೆ. ಅವಿಶ್ವಾಸಿ (ಕಾಫಿರ್) ತನ್ನ ಜೀವಿತದ ಯಾವ ಹಂತದಲ್ಲಿಯೂ ತನ್ನ ಆಚಾರ ವಿಚಾರಗಳ ಬಗ್ಗೆ ಪಶ್ಚಾತ್ತಾಪಗೊಂಡು ಇಸ್ಲಾಮ್ ಧರ್ಮವನ್ನು ಸೇರಲು ಸಾಧ್ಯವಿದೆ. ಆದರೆ ಮೌಲಾನ ಮೌದೂದಿಯ ಅಭಿಪ್ರಾಯ ಪ್ರಕಾರ ಧರ್ಮತ್ಯಾಗಿ ಇಸ್ಲಾಮ್ ಧರ್ಮಕ್ಕೆ ಮರಳಿ ಮಹಾನ್ ಕ್ಷಮಿಸುವವನಾದ (ಅಲ್‌ಗಫ್ಫಾರ್) ಮತ್ತು ಪಶ್ಚಾತ್ತಾಪವನ್ನು ಅಂಗೀಕರಿಸುವವನಾದ ಏಕದೇವನ ಕರುಣೆಯಿಂದ ಪ್ರಯೋಜನ ಪಡೆಯಲಾರನು.

ಮೌಲಾನ ಮೌದೂದಿಯ ತರ್ಕವನ್ನು ಅವರದೇ ಆದ ಅಸಮಂಜಸ

ನಿಷ್ಕರ್ಷೆಗೆ ತಂದು ಹೀಗೆ ಪ್ರಶ್ನಿಸಬಹುದು: "ಧರ್ಮತ್ಯಾಗವನ್ನು ಹಗುರವಾಗಿ ಕಾಣುವವರು ನಮ್ಮ ಸಮಾಜವನ್ನು ಪ್ರವೇಶಿಸದಂತೆ ತಡೆಯಲು ಮರಣದಂಡನೆಯ ಶಿಕ್ಷೆಯು ಜಾರಿಗೊಳಿಸಲಾಗಿದ್ದರೆ ಅಂತಹ ಅಸ್ಥಿರ ವಿಶ್ವಾಸದ ಜನರು ಮುಸ್ಲಿಮರ ಮನೆಗಳಲ್ಲಿ ಜನ್ಮ ತಾಳದಂತೆ ಮಾಡಲು ನೀವು ಏನು ಮಾಡುವಿರಿ?"

ಇಂತಹ ಕಠೋರ ಹಿಂಸೆ ಮತ್ತು ಅಸಹಿಷ್ಣುತೆಯ ಧೋರಣೆಯು ಮೌದೂದಿ ರಾಜ್ಯದೊಳಗೆ ಮಾತ್ರ ಸೀಮಿತವಲ್ಲ. ಅದರ ವಿದೇಶ ನೀತಿಯು ಸಹ ಬಲಾತ್ಕಾರ ಮತ್ತು ಅಸಹಿಷ್ಣುತೆಯ ಮೇಲೆ ಸ್ಥಾಪಿಸಲ್ಪಟ್ಟಿರುವುದು. ಮೌಲಾನ ಹೀಗೆ ಹೇಳುತ್ತಾರೆ:

"ಇಸ್ಲಾಮ್ ಈ ಕ್ರಾಂತಿಯನ್ನು ಒಂದೊಂದು ಅಥವಾ ಕೆಲವೊಂದು ದೇಶಗಳಲ್ಲಿ ಮಾತ್ರ ಉಂಟುಮಾಡಲು ಇಚ್ಛಿಸುವುದಿಲ್ಲ. ಅದು ವಿಶ್ವದಾದ್ಯಂತ ಈ ಕ್ರಾಂತಿಯನ್ನುಂಟುಮಾಡಲು ಇಚ್ಛಿಸುತ್ತದೆ. 'ಮುಸ್ಲಿಮ್ ಪಾರ್ಟಿ' ಅದು ಇರುವಲ್ಲಿ ಸರಕಾರದ ವ್ಯವಸ್ಥೆಯಲ್ಲಿ ಕ್ರಾಂತಿಯನ್ನುಂಟುಮಾಡುವುದು ಪ್ರಾರಂಭ ಕಾಲದಲ್ಲಿ ಕಡ್ಡಾಯವಾಗಿದೆಯಾದರೂ ಅದರ ಅಂತಿಮ ಗುರಿ ಒಂದು ವಿಶ್ವಕ್ರಾಂತಿ ಹೊರತು ಇನ್ನೇನೂ ಅಲ್ಲ." (ಜಿಹಾದ್ ಕೀ ಹಖೀಖತ್ - ಪುಟ 63)

ಇಸ್ಲಾಮ್ ಧರ್ಮದ ಗುರಿ ವಾಸ್ತವಿಕವಾಗಿಯೂ ಜಾಗತಿಕ ಕ್ರಾಂತಿ ಉಂಟುಮಾಡುವುದಾಗಿದೆ. ಆದರೆ ಇಸ್ಲಾಮ್ ಇಚ್ಛಿಸುವುದು ಆಧ್ಯಾತ್ಮಿಕ ಕ್ರಾಂತಿಯನ್ನಾಗಿದೆ; ಮೌಲಾನ ಮೌದೂದಿ ಕಮ್ಯುನಿಸ್ಟ್ ಸಿದ್ಧಾಂತದಿಂದ ಎರವಲು ಪಡೆದ ಕಮ್ಯುನಿಸ್ಟ್ ಕ್ರಾಂತಿಯನ್ನಲ್ಲ. ಮೌದೂದಿಯ ತರ್ಕ ಸರಣಿಯು ಕಮ್ಯುನಿಸ್ಟ್ ವಾದಗಳನ್ನು ಬಹಳ ಹತ್ತಿರದಿಂದ ಅನುಕರಿಸುವುದು ಅವಿಚಾರಿತವಾಗಿ ಏನೂ ಅಲ್ಲ. ನೀವು 'ಮುಸ್ಲಿಮ್ ಪಾರ್ಟಿ' ಶಬ್ದಗಳಿಗೆ ಪ್ರತಿಯಾಗಿ 'ಕಮ್ಯುನಿಸ್ಟ್ ಪಾರ್ಟಿ' ಶಬ್ದಗಳನ್ನು ಬಳಸಿದರೆ ನೀವು ಮಾರ್ಕ್ಸ್ ಮತ್ತು ಲೆನಿನ್‌ರವರ ಪ್ರತಿಧ್ವನಿಯನ್ನು ಮೌಲಾನ ಮೌದೂದಿಯ ಬರಹಗಳಲ್ಲಿ ಕಾಣಬಹುದು. ಮೌದೂದಿ ಪ್ರತಿಪಾದಿಸುವ ಕ್ರಾಂತಿ ಇಸ್ಲಾಮ್ ಪ್ರತಿಪಾದಿಸುವ "ನ್ಯಾಯ"ದ ಮೇಲೆ ಸ್ಥಾಪಿತವಾಗಿರದೆ ಭೌತಿಕವಾದ ಮತ್ತು ಅದರ ಪರಿಣಾಮವಾಗಿ ಉಂಟಾಗುವ ವೈಯುಕ್ತಿಕ ನಿರಂಕುಶ ಪ್ರಭುತ್ವದ ಮೇಲೆ ಸ್ಥಾಪಿತವಾಗಿದೆ.

ನೆರೆಹೊರೆಯ ದೇಶಗಳ ಕುರಿತು ಮೌದೂದಿಯ ಧೋರಣೆ ಮತ್ತು ಕಮ್ಯುನಿಸ್ಟರ ವಿದೇಶ ಧೋರಣೆಯ ಮಧ್ಯೆ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ.

ಮೌಲಾನ ಹೀಗೆ ಬರೆಯುತ್ತಾರೆ:

"ಒಂದು ದೇಶವು ತಾನು ಬದ್ಧವಾಗಿರುವ ಸಿದ್ಧಾಂತಗಳನ್ನು ಪೂರ್ಣವಾಗಿ ಕೃತಿರೂಪಕ್ಕೆ ಇಳಿಸುವುದು ತನ್ನ ನೆರೆಹೊರೆಯ ದೇಶಗಳು ಆ ಸಿದ್ಧಾಂತಗಳನ್ನು ಕೃತಿರೂಪಕ್ಕೆ ಇಳಿಸುವ ತನಕ ಸಾಧ್ಯವಾಗಲಾರದು. ಆದುದರಿಂದ ಸಾರ್ವಜನಿಕ ಸುಧಾರಣೆ ಮತ್ತು ಆತ್ಮರಕ್ಷಣೆಗೆ ಇವೆರಡರ ಗಳಿಕೆಗಾಗಿ ಒಂದು ಪ್ರದೇಶದಲ್ಲಿ ಮಾತ್ರ ಇಸ್ಲಾಮೀ ವ್ಯವಸ್ಥೆ ಸ್ಥಾಪಿತವಾದರೆ 'ಮುಸ್ಲಿಮ್ ಪಾರ್ಟಿ' ಸಂತೃಪ್ತವಾಗಲಾರದು. ಒಂದು ಕಡೆ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ ಈ ವ್ಯವಸ್ಥೆಯನ್ನು ಎಲ್ಲಾ ದಿಕ್ಕುಗಳಲ್ಲಿ ವಿಸ್ತಾರಗೊಳಿಸಲು ಅದು ಪ್ರಯತ್ನಿಸಬೇಕು. ಇನ್ನೊಂದು ಕಡೆ ಅದು ತನ್ನ ವಿಚಾರಗಳನ್ನೂ ಸಿದ್ಧಾಂತಗಳನ್ನೂ ಲೋಕದಲ್ಲಿ ಪ್ರಚಾರಗೊಳಿಸುವುದು ಮತ್ತು ಎಲ್ಲಾ ದೇಶಗಳ ನಿವಾಸಿಗಳಿಗೆ ಅವರ ಮೋಕ್ಷ ಪ್ರಾಪ್ತಿಗಾಗಿ ಈ ವಿಚಾರಗಳನ್ನು ಅಂಗೀಕರಿಸಲು ಆಹ್ವಾನ ನೀಡುವುದು. ಈ ಇಸ್ಲಾಮೀ ರಾಷ್ಟ್ರಕ್ಕೆ ಶಕ್ತಿ ಸಾಮರ್ಥ್ಯವಿದ್ದರೆ ಅದು ಯುದ್ಧ ಮಾಡಿ ಮುಸ್ಲಿಮೇತರ ಸರಕಾರಗಳನ್ನು ಅಳಿಸಿ ಬಿಡುವುದು ಮತ್ತು ಅವುಗಳ ಸ್ಥಾನದಲ್ಲಿ ಇಸ್ಲಾಮೀ ಸರಕಾರವನ್ನು ಸ್ಥಾಪಿಸುವುದು." (ಹಖೀಖತೆ ಜಿಹಾದ್ - ಪುಟ 64)

ಈ ಹೇಳಿಕೆ ವಾಸ್ತವವಾಗಿ ಕಮ್ಯುನಿಸ್ಟ್ ಮ್ಯಾನಿಫಸ್ಟೋದ ನಕಲು ಪ್ರತಿಯಾಗಿದೆ.

ತನ್ನ ಆಕ್ರಮಣಕಾರಿ ಧೋರಣೆಯನ್ನು ಹಝ್ರತ್ ಪೈಗಂಬರರ(ಸ) ಮೇಲೆ ಆರೋಪಿಸಿ ಹೇಳುವ ಬಗ್ಗೆ ಮೌಲಾನ ಮೌದೂದಿಗೆ ಯಾವ ಹಿಂಜರಿಕೆಯೂ ಇಲ್ಲ. ಅವರು ಹೀಗೆ ಹೇಳುತ್ತಾರೆ:

"ಈ ಧೋರಣೆಯನ್ನು ಪ್ರವಾದಿಯವರು(ಸ) ಮತ್ತು ಅವರ ನಂತರ ಖಲೀಫರು ಅನುಷ್ಠಾನಕ್ಕೆ ತಂದರು. ಮುಸ್ಲಿಮ್ ಪಾರ್ಟಿ ಅಸ್ತಿತ್ವಕ್ಕೆ ಬಂದ ಅರಬ್ ದೇಶವನ್ನು ಇಸ್ಲಾಮೀ ಸರಕಾರದ ಅಧೀನಕ್ಕೆ ಮೊತ್ತ ಮೊದಲು ತರಲಾಯಿತು. ಅನಂತರ ಪ್ರವಾದಿ(ಸ) ಸುತ್ತುಮುತ್ತಲಿನ ದೇಶಗಳಿಗೆ ತನ್ನ ಸಿದ್ಧಾಂತಗಳ ಕಡೆಗೆ ಆಹ್ವಾನ ನೀಡಿದರು. ಅವರು ಈ ಆಹ್ವಾನವನ್ನು ಅಂಗೀಕರಿಸುತ್ತಾರೋ ಅಥವಾ ತಿರಸ್ಕರಿಸುತ್ತಾರೋ ಎಂಬುದನ್ನು ಪ್ರತೀಕ್ಷಿಸುತ್ತಾ ಅವರು ನಿಲ್ಲಲಿಲ್ಲ. ಶಕ್ತಿಯನ್ನು ಗಳಿಸಿದ ಕೂಡಲೇ ಅವರು ರೋಮ್ ಸರಕಾರದ ವಿರುದ್ಧ ಸಂಘರ್ಷವನ್ನು ಆರಂಭಿಸಿದರು. ಪ್ರವಾದಿಯವರ(ಸ) ನಿಧನದ ನಂತರ ಅಬೂಬಕರ್‌ರವರು(ರ) ನಾಯಕರಾದರು. ಅವರು ರೋಮ್ ಮತ್ತು ಇರಾನ್ ಎಂಬ ಎರಡು ಮುಸ್ಲಿಮೇತರ ಸರಕಾರಗಳ ಮೇಲೆ ಆಕ್ರಮಣ ಮಾಡಿದರು. ಉಮರ್‌ರವರು(ರ) ಈ ಆಕ್ರಮಣವನ್ನು ವಿಜಯದ ಅಂತಿಮ ಘಟ್ಟದ ತನಕ ತಲುಪಿಸಿದರು." (ಹಖೀಖತೆ ಜಿಹಾದ್ - ಪುಟ 65)

ನೆರೆಹೊರೆಯ ಮುಸ್ಲಿಮೇತರ ಸರಕಾರಗಳ ವಿರುದ್ಧ ಇದೊಂದು ಯುದ್ಧ ಘೋಷಣೆಯಾಗಿದೆ. ಮೌದೂದಿ ರಾಷ್ಟ್ರವು ಬಲಹೀನವಾಗಿರುವ ತನಕ ಮಾತ್ರ ನೆರೆಹೊರೆಯ ಮುಸ್ಲಿಮೇತರ ದೇಶಗಳು ಸುರಕ್ಷಿತವಾಗಿರುವುವು.

ಮೌದೂದಿ ಸಿದ್ಧಾಂತಗಳನ್ನು ಪಾಲಿಸುವ ಒಂದು ರಾಷ್ಟ್ರವು ಸ್ಥಾಪಿತವಾದರೆ ಅದು ತನ್ನ ದೇಶದ ಜನ್ಮತಃ ಮುಸ್ಲಿಮರಾದ ಪ್ರಜೆಗಳಿಗೆ ಹೀಗೆ ಆದೇಶಿಸುವುದು: "ನೀವು ಒಂದು ವರ್ಷದೊಳಗೆ ಮೌದೂದಿ ಸಿದ್ಧಾಂತಗಳನ್ನು ಪಾಲಿಸುವ ಮುಸ್ಲಿಮರಾಗಿರಿ ಅಥವಾ ಹೊರಹೋಗಿರಿ." ಆಂತರಿಕ ವಿರೋಧಗಳನ್ನು ದಮನಿಸಿದ ನಂತರ ಮೌದೂದಿ ಸಿದ್ಧಾಂತಗಳಿಗೆ ವಿಧೇಯವಾದ ರಾಷ್ಟ್ರವು ನೆರೆಹೊರೆಯ ದೇಶಗಳನ್ನು ಆಕ್ರಮಿಸಿ ವಶಪಡಿಸುವ ಅಭಿಯಾನವನ್ನು ಪ್ರಾರಂಭಿಸುವುದು.

ಇಸ್ಲಾಮ್ ಧರ್ಮವನ್ನು ನಾಶಮಾಡಲಿಕ್ಕಾಗಿ ಹೊರಟ ಶಕ್ತಿಶಾಲಿ ಕ್ರೈಸ್ತ ಮತ್ತು ಪಾರಸೀ ಸಾಮ್ರಾಜ್ಯಗಳಿಂದ ಯುದ್ಧವು ಹಝ್ರತ್ ಪ್ರವಾದಿ(ಸ), ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್‌ರವರ ಮೇಲೆ ಹೇರಲ್ಪಟ್ಟಿತ್ತೆಂದೂ ಮುಸ್ಲಿಮರು ಶತ್ರುಗಳಿಗಿಂತ ಕಡಿಮೆ ಶಕ್ತಿಯನ್ನು ಹೊಂದಿದ್ದರೂ ತಮ್ಮ ಆತ್ಮರಕ್ಷಣೆಗಾಗಿ ಹೋರಾಡಬೇಕಾಯಿತೆಂದೂ ಮುಸ್ಲಿಮರು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯವನ್ನು ಮೌಲಾನ ಮೌದೂದಿ ಅಂಗೀಕರಿಸುವುದಿಲ್ಲ.

(ಮುಂದುವರಿಯುವುದು)

ಇಂಗ್ಲಿಷ್‌ನಿಂದ ಭಾಷಾಂತರ : A. ಅಬ್ದುಸ್ಸಲಾಮ್

# ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿ 2008

## ಹಝ್ರತ್ ಖಲೀಫತುಲ್ ಮಸೀಹ್ V ನಿರ್ದೇಶಿಸಿದ ಪ್ರಾರ್ಥನೆಗಳು ಮತ್ತು ಕರ್ಮಾನುಷ್ಠಾನಗಳು

1. ಪ್ರತಿ ಮಾಸ ಒಂದು ನಫಲ್ ಉಪವಾಸ ಅನುಷ್ಠಿಸಬೇಕು.
2. ಪ್ರತಿ ದಿನ ಎರಡು ರಕ್‌ಅತ್ ನಫಲ್ ನಮಾಝ್ ಮಾಡಬೇಕು.
3. ಪ್ರತಿ ದಿನ ಏಳು ಸಲ ಸೂರಃ ಫಾತಿಹ ಅರ್ಥಗ್ರಹಿಸಿಕೊಂಡು ಓದಬೇಕು:

☆ بِسْمِ اللّٰهِ الرَّحْمٰنِ الرَّحِيْمِ۔ اَلْحَمْدُ لِلّٰهِ رَبِّ الْعٰلَمِيْنَ ۔اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔اِيَّاكَ نَعْبُدُ وَاِيَّاكَ نَسْتَعِيْنُ۔
اِهْدِ نَاالصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ ۔غَيْرِ الْمَغْضُوْبِ عَلَيْهِمْ وَلَاالضَّآلِّيْنَ۔

ಅರ್ಥ: ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ. ಎಲ್ಲ ಸ್ತುತಿ ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ. ಅವನು ಪರಮ ದಯಾವಂತನೂ ಕಾರುಣ್ಯನಿಧಿಯೂ ನ್ಯಾಯ ತೀರ್ಮಾನ ದಿನದ ಅಧಿಪತಿಯೂ ಆಗಿದ್ದಾನೆ. (ಓ ದೇವಾ,) ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ. ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು. ನಿನ್ನ ಅನುಗ್ರಹಕ್ಕೆ ಪಾತ್ರರಾದವರ, ಕ್ರೋಧಕ್ಕೆ ಈಡಾಗದವರ ಮತ್ತು ದಾರಿತಪ್ಪದವರ ಮಾರ್ಗದಲ್ಲಿ.

4. ☆ اَللّٰهُمَّ صَلِّ عَلٰى مُحَمَّدٍ وَّعَلٰى اٰلِ مُحَمَّدٍ كَمَا صَلَّيْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ حَمِيْدٌ مَّجِيْدٌ ۔
☆ اَللّٰهُمَّ بَارِكْ عَلٰى مُحَمَّدٍ وَّعَلٰى اٰلِ مُحَمَّدٍ كَمَا بَارَكْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ حَمِيْدٌ مَّجِيْدٌ۔

ಅರ್ಥ: ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ವಿಶೇಷ ಕರುಣೆ ದಯಪಾಲಿಸು- ಹಝ್ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ನೀನು ವಿಶೇಷ ಕರುಣೆ ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಮಹತ್ವವಂತನೂ ಆಗಿರುವೆ. ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ಅನುಗ್ರಹವನ್ನು ದಯಪಾಲಿಸು - ಹಝ್ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ಅನುಗ್ರಹ ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಮಹತ್ವವಂತನೂ ಆಗಿರುವೆ. (ದಿನಂಪ್ರತಿ 33 ಸಲ)

5. ☆ رَبَّنَا لَا تُزِغْ قُلُوْبَنَا بَعْدَ اِذْ هَدَيْتَنَا وَهَبْ لَنَا مِنْ لَّدُنْكَ رَحْمَةً ۔اِنَّكَ اَنْتَ الْوَهَّابُ۔

ಅರ್ಥ: ನಮ್ಮ ಪ್ರಭೂ ನೀನು ನಮಗೆ ಮಾರ್ಗದರ್ಶನ ಮಾಡಿದ ಬಳಿಕ ನಮ್ಮ ಹೃದಯಗಳಲ್ಲಿ ವಕ್ರಬುದ್ಧಿಯುಂಟಾಗುವಂತೆ ಮಾಡದಿರು. ನೀನು ನಮಗೆ ನಿನ್ನಿಂದ ಕರುಣೆಯನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ನೀನೇ ಅತಿ ದೊಡ್ಡ ಅನುಗ್ರಹದಾತ. (ದಿನಂಪ್ರತಿ 33 ಸಲ)

6. ☆ رَبَّنَا اَفْرِغْ عَلَيْنَا صَبْرًا وَّثَبِّتْ اَقْدَامَنَا وَانْصُرْنَا عَلَى الْقَوْمِ الْكٰفِرِيْنَ۔

ಅರ್ಥ: ನಮ್ಮ ಪ್ರಭೂ, ನೀನು ನಮಗೆ ಸ್ಥೈರ್ಯವನ್ನು ಕರುಣಿಸು. ನಮ್ಮ ಪಾದಗಳನ್ನು ಸ್ಥಿರಗೊಳಿಸಿ ಅವಿಶ್ವಾಸಿಗಳಿಗೆ ವಿರುದ್ಧವಾಗಿ ನಮಗೆ ನೆರವು ನೀಡು. (ದಿನಂಪ್ರತಿ 11 ಸಲ)

7. ☆ اَللّٰهُمَّ اِنَّا نَجْعَلُكَ فِيْ نُحُوْرِهِمْ وَ نَعُوْذُبِكَ مِنْ شُرُوْرِهِمْ ۔

ಅರ್ಥ: ಓ ಅಲ್ಲಾಹ್, ಅವರನ್ನು ಎದುರಿಸಲು ನಾವು ನಿನ್ನನ್ನು ಗುರಾಣಿಯನ್ನಾಗಿ ಮಾಡುತ್ತೇವೆ. ಅವರ ಎಲ್ಲಾ ಉಪದ್ರಗಳಿಂದ ಪಾರಾಗಲು ನಿನ್ನ ಅಭಯ ಯಾಚಿಸುತ್ತೇವೆ. (ದಿನಂಪ್ರತಿ 11 ಸಲ)

8 ☆ اَسْتَغْفِرُ اللّٰهَ رَبِّيْ مِنْ كُلِّ ذَنْبٍ وَّاَتُوْبُ اِلَيْهِ۔

ಅರ್ಥ: ನನ್ನ ಪ್ರಭುವಾದ ಅಲ್ಲಾಹನೊಡನೆ ನಾನು **ನನ್ನ ಎಲ್ಲ ಪಾಪಗಳಿಗೆ** ಕ್ಷಮೆಕೋರುತ್ತೇನೆ ಮತ್ತು ನಾನು ಅವನೆಡೆಗೆ ಬಾಗುತ್ತೇನೆ. (ದಿನಂಪ್ರತಿ 33 ಸಲ)

9. ☆ سُبْحَانَ اللّٰهِ وَبِحَمْدِهٖ سُبْحَانَ اللّٰهِ الْعَظِيْمِ۔ اَللّٰهُمَّ صَلِّ عَلٰى مُحَمَّدٍ وَّاٰلِ مُحَمَّدٍ۔

ಅರ್ಥ: ಅಲ್ಲಾಹನು ಪರಿಶುದ್ಧನು ಮತ್ತು ಅವನಿಗೆ **ಸಕಲ ಸ್ತುತಿಸ್ತೋತ್ರಗಳು**. ಅಲ್ಲಾಹನು ಪರಿಶುದ್ಧನು ಮತ್ತು ಮಹಾಮಹಿಮನು. ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ **ಪೈಗಂಬರರಿಗೂ** ಅವರ ಕುಟುಂಬದವರಿಗೂ ವಿಶೇಷ ಕರುಣೆ ದಯಪಾಲಿಸು. (ದಿನಂಪ್ರತಿ 33 ಸಲ)

Registered with the Registrar of Newspapers for India No. R.N. 27354/75
YUGARASHMI Kannada Quarterly, August - 2007

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ
ಪ್ರಪ್ರಥಮ ಇಸ್ಲಾಮೀ ಟಿ.ವಿ. ಚ್ಯಾನೆಲ್

ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ
ಇಂಟರ್‌ನ್ಯಾಷನಲ್

THE FIRST ISLAMIC SATELLITE CHANNEL

BROADCASTING ROUND THE CLOCK

| | | | |
|---|---|---|---|
| SATELLITE | : ASIASAT 3S | POLARISATION | : HORIZONTAL |
| POSITION | : 105.5° EAST | SYMBOL RATE | : 26000 MBPS |
| FREQUENCY | : 3760 MHZ | FEC | : 7/8 |
| MIN. DISH SIZE | : 1.8 METRE | | |

E-Mail : info@alislam.org    Website : http:www.alislam.org/mta.tv




ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ
ಪ್ರಕಟಿಸಲ್ಪಟ್ಟ

ಪವಿತ್ರ ಖುರ್‌ಆನ್
ಕನ್ನಡ ಭಾಷಾಂತರ

ಬೆಲೆ : ರೂ. 200/-

ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden,
Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Car street, Mangalore - 575 001